24 July 2026 Friday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಆಡುವ ಮಾತಿನಲ್ಲಿ
ಹಿಡಿತವಿರಬೇಕು, ಕೇಳಿದವರು
ಕ್ಷಮಿಸಬಹುದೇನೋ
ಆದರೆ ಮರೆಯಲಾರರು!

▸▸ ಸ್ನೇಹಾ ಆನಂದ್

info.varthaman@gmail.com



ಅಮೆರಿಕಾ ಏಜೆಂಟ್ ರೀತಿ ಕೈ ವರ್ತನೆ — ಪುಟ ಸಂ. 2



ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಹಕಾರ ಅಗತ್ಯ: ಜಿಲ್ಲಾಧಿಕಾರಿ — ಪುಟ ಸಂ. 3



ವಿದ್ಯುತ್ ಮೂಲಸೌಕರ್ಯ ಯೋಜನೆಗೆ ಚಾಲನೆ — ಪುಟ ಸಂ. 2

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 234 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಕೃಷಿಗೆ ಕಾವೇರಿ ನೀರು ಬಿಡಲ್ಲ

**ಮಂಡ್ಯ:** ಕೃಷ್ಣರಾಜಸಾಗರ ವ್ಯಾಪ್ತಿಯ ರೈತರು ಜಲಾಶಯದ ನೀರಿನ ಮೇಲೆ ಅವಲಂಬಿತರಾಗಿ ಯಾವುದೇ ಬೆಳೆ ಬೆಳೆಯಬಾರದು ಎಂದು ಕಾವೇರಿ ನೀರಾವರಿ ನಿಗಮದ ಅಧೀಕ್ಷಕ ಎಂಜಿನಿಯರ್ ರಘುರಾಮನ್ ತಿಳಿಸಿದ್ದಾರೆ.

ಕೆಆರ್‌ಎಸ್ ಜಲಾಶಯದಲ್ಲಿ ಪ್ರಸ್ತುತ 92.08 ಅಡಿ ನೀರು ಸಂಗ್ರಹವಿದೆ. ಲಭ್ಯವಿರುವ ನೀರನ್ನು ಕೃಷಿ ಚಟುವಟಿಕೆಗೆ ಬಿಡುವುದಿಲ್ಲ. ಕುಡಿಯುವ ನೀರಿನ ಉದ್ದೇಶಕ್ಕಾಗಿ ಮಾತ್ರ ಬಳಕೆ ಮಾಡಬೇಕಾಗಿದೆ ಎಂದು ಹೇಳಿದ್ದಾರೆ.

ಈ ವರ್ಷ ಜೂನ್ 1ರಿಂದ ಇಲ್ಲಿಯವರೆಗೆ ಕೆ.ಆರ್.ಎಸ್. ಜಲಾನಯನ ಪ್ರದೇಶದಲ್ಲಿ ವಾಡಿಕೆ ಮಳೆಯಾಗದ ಕಾರಣ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿದೆ. ಜಲಾಶಯದಲ್ಲಿ ಪ್ರಸ್ತುತ 17.214 ಟಿಎಂಸಿ ಅಡಿಯಷ್ಟು ನೀರಿನ ಸಂಗ್ರಹವಿದ್ದು, ಅದರಲ್ಲಿ ಕುಡಿಯುವ ನೀರಿಗಾಗಿ 12.916 ಟಿ.ಎಂ.ಸಿ ಅಡಿ ನೀರು ಮಾತ್ರ ಬಳಕೆಗೆ ಲಭ್ಯವಿದೆ.

ಜಲಸಂಪನ್ಮೂಲ ಇಲಾಖೆಯಡಿ ಜಲಾಶಯಗಳಲ್ಲಿ ಸಂಗ್ರಹಿಸಿರುವ ನೀರನ್ನು ಬೇಸಿಗೆಯಲ್ಲಿ ಅಥವಾ ನೀರಿನ ಅಭಾವವಿರುವ ಪರಿಸ್ಥಿತಿಯಲ್ಲಿ ವ್ಯವಸ್ಥಿತವಾಗಿ ಕುಡಿಯುವ ಉದ್ದೇಶಕ್ಕಾಗಿ ಮಾತ್ರ ಬಳಸಲು ನಿರ್ಧರಿಸಲು ಆಯಾ ಪ್ರಾದೇಶಿಕ ಆಯುಕ್ತರುಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ ಎಂದು ತಿಳಿಸಿದ್ದಾರೆ.

ರಾಜ್ಯದಾದ್ಯಂತ ಜಲಾಶಯಗಳ ಒಳಹರಿವು ಶೂನ್ಯಕ್ಕೆ ಇಳಿದಿದ್ದು ಹಾಗೂ ಎಲ್ ನಿನೊ ಪರಿಣಾಮದಿಂದ ಉಂಟಾಗಲಿರುವ ಬರದ ಪರಿಸ್ಥಿತಿಯಿಂದ ಜಲಾಶಯ ನಂಬಿಕೊಂಡು ರೈತರು ಬೆಳೆ ಹಾಕಬೇಡಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈಚೆಗೆ ತಿಳಿಸಿದ್ದರು.

# ಕೆಪಿಎಸ್‌ಸಿ: 'ಬ್ರಹ್ಮಾಂಡ ಭ್ರಷ್ಟಾಚಾರ'

## ಪಶುವೈದ್ಯಾಧಿಕಾರಿ ಹುದ್ದೆ 80 ಲಕ್ಷಕ್ಕೆ 'ಬಹಿರಂಗ ಹರಾಜು'!

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಅರ್ಹ ಅಭ್ಯರ್ಥಿಗಳನ್ನು ಹೊರಹಾಕಿ ಲಕ್ಷಲಕ್ಷ ಕೊಟ್ಟವರಿಗೆ ನೌಕರಿ ಮಾರಾಟ ಮಾಡುತ್ತಿರುವ ಬ್ರಹ್ಮಾಂಡ ಭ್ರಷ್ಟಾಚಾರದ ಕರ್ಮಕಾಂಡ ಬಯಲಾಗಿದೆ.

ಕೆಪಿಎಸ್‌ಸಿ ಮೂಲಕ ಭರ್ತಿ ಮಾಡಲಾಗುತ್ತಿರುವ ಪಶುವೈದ್ಯಾಧಿಕಾರಿ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯಲ್ಲಿ ಕೋಟಿ ಕೋಟಿ ರೂಪಾಯಿಗಳ ಅಕ್ರಮ ನಡೆದಿರುವುದು ಬಯಲಿಗೆ ಬಂದಿದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಏಜೆಂಟರ್‌ಗಳಿಂದಲೇ ಕರೆ ಹೋಗುತ್ತಿದೆ. ನಿಮ್ಮ ಅಂಕಗಳು ಕಮ್ಮಿ ಇವೆ. ಅಂತಿಮ ಪಟ್ಟಿಯಲ್ಲಿ ಹೆಸರು ಬರಬೇಕೆಂದರೆ ಕಾಸು ಕೊಡಿ ಎಂದು ಬೆದರಿಸಿ ಆಮಿಷ ಒಡ್ಡಲಾಗುತ್ತಿದೆ ಎಂಬ ಗಂಭೀರ ಆರೋಪ ಕೇಳಿ ಬಂದಿದೆ.

ಜನವರಿಯಲ್ಲಿ ನಡೆದ ಪರೀಕ್ಷೆಯ ಅಂತಿಮ ಆಯ್ಕೆ ಪಟ್ಟಿಯನ್ನು ಇತ್ತೀಚೆಗೆ ಪ್ರಕಟಿಸಲಾಗಿತ್ತು. ಈ ನೇಮಕಾತಿ ಅಕ್ರಮವನ್ನು ತಕ್ಷಣವೇ ರದ್ದುಗೊಳಿಸಬೇಕು ಮತ್ತು ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಆಗ್ರಹಿಸಿ ನೂರಾರು ಪಶುವೈದ್ಯಾಧಿಕಾರಿ ಅಭ್ಯರ್ಥಿಗಳು ಗುರುವಾರ ವಿಧಾನಸೌಧ ಪೊಲೀಸ್ ಠಾಣೆಯ ಮುಂದೆ ಜಮಾಯಿಸಿ ದೂರು ನೀಡಿದರು.

ಪಶುವೈದ್ಯಕೀಯ ಪದವಿಯಲ್ಲೇ ಫೇಲ್ ಆಗಿದ್ದ ಹಲವು ಅಭ್ಯರ್ಥಿಗಳು ಕೆಪಿಎಸ್‌ಸಿ ಪ್ರಕಟಿಸಿದ ಅಂತಿಮ ಆಯ್ಕೆ ಪಟ್ಟಿಯಲ್ಲಿ ಉನ್ನತ ಸ್ಥಾನ ಮತ್ತು ರ‍್ಯಾಂಕ್ ಪಡೆದುಕೊಂಡಿರುವುದು ಅನುಮಾನಕ್ಕೆ ಕಾರಣವಾಗಿದೆ.



### ಏಜೆಂಟ್ ಡೀಲ್ ಹೇಗಿದೆ?

ಪಶುವೈದ್ಯಾಧಿಕಾರಿ ಹುದ್ದೆಗೆ 80 ಲಕ್ಷ ರೂಪಾಯಿ ನಿಗದಿಪಡಿಸಲಾಗಿದೆ. 40 ಲಕ್ಷ ರೂಪಾಯಿ ಅಡ್ವಾನ್ಸ್ ನೀಡಲೇಬೇಕು ಎಂದು ಏಜೆಂಟ್ ಒಬ್ಬ ಅಭ್ಯರ್ಥಿಯ ತಂದೆಯೊಂದಿಗೆ ನಡೆಸಿದ ಕರಾಳ ಡೀಲ್‌ನ ಆಡಿಯೋ ಬಹಿರಂಗಗೊಂಡಿದೆ. ಈ ಆಡಿಯೋದಲ್ಲಿ ಏನಿದೆ.

**ಏಜೆಂಟ್:** ನಿನ್ನೆ ನಿಮ್ಮ ಹುಡುಗ ಬಂದು ಭೇಟಿಯಾಗಿದ್ದ. ನೀವು ಬರಬೇಕಿತ್ತು. ಮೊದಲೇ ಮಾತನಾಡಿದ್ದರೆ ಸ್ವಲ್ಪ ಕಮ್ಮಿಯಾಗುತ್ತಿತ್ತು. 80 ಲಕ್ಷ ರೂಪಾಯಿ ಕೊಡ್ತೀವಿ ಅಂದಿದ್ದಾರೆ. ಅರ್ಧ ಮೊತ್ತ (ಅಡ್ವಾನ್ಸ್) ಅರೇಂಜ್ ಮಾಡಿಕೊಂಡು ನೀವು ಬೆಂಗಳೂರಿಗೆ ಬರಬೇಕು.

**ಅಭ್ಯರ್ಥಿಯ ತಂದೆ:** ಕಡಿಮೆ ಮಾಡಿಕೊಳ್ಳಲು ಆಗಲ್ವಾ ಸರ್? ರಾತ್ರಿನೇ ದುಡ್ಡು ಕೊಡಬೇಕಾ?

**ಏಜೆಂಟ್:** ವಿನೋದ್ ಕೈಯಲ್ಲಿ ಕೊಡಿ. ಫೋನ್ ಸ್ಪೀಕರ್ ಆನ್‌ನಲ್ಲಿ ಇರಲಿ. ನಾಳೆನೇ ಎಲ್ಲಾ ರೆಡಿ ಮಾಡ್ತೀನಿ. ಡಾಕ್ಯುಮೆಂಟ್ಸ್ ತಂದುಕೊಡಿ.

**ವಿದ್ಯಾರ್ಥಿ:** ಮನೆಯಲ್ಲಿ ಈಗ 30 ಲಕ್ಷ ಇದೆ ಸರ್. ಎಲ್ಲಿಗೆ ಬರಬೇಕು?

**ಏಜೆಂಟ್:** ಬೆಂಗಳೂರಿಗೆ ಬರಬೇಕು. ರೂಮ್ ಬುಕ್ ಮಾಡ್ತಾರೆ. ಯಾವುದೇ ಆನ್‌ಲೈನ್ ಬೇಡ. ಜವಾಬ್ದಾರಿ ಮನುಷ್ಯನನ್ನು ಕರೆದುಕೊಂಡು ಬನ್ನಿ. ನನ್ನ ಮೇಲೆ ಡೌಟ್ ಇದ್ದರೆ ಎಷ್ಟು ಅಮೌಂಟ್ ಕೊಡ್ತೀರೋ ಅಷ್ಟಕ್ಕೆ ಚೆಕ್ ಕೊಡ್ತೀನಿ. 99 ಪರ್ಸೆಂಟ್ ಕೆಲಸ ಗ್ಯಾರಂಟಿ ಮಾಡಿಕೊಡುತ್ತೇನೆ ಎಂಬ ಸಂಭಾಷಣೆ ನಡೆದಿದೆ.

## ಅರಾಜಕತೆ ಸೃಷ್ಟಿಗೆ ಕಾಂಗ್ರೆಸ್, ವಿಪಕ್ಷಗಳ ಯತ್ನ: ವಿಜಯೇಂದ್ರ

**ಬೆಂಗಳೂರು:** ದೆಹಲಿ ಜಂತರ್ ಮಂತರ್‌ನಲ್ಲಿ ಧರಣಿ ನಡೆಸುತ್ತಿರುವ ವಿರೋಧ ಪಕ್ಷಗಳು ನೀಟ್ ಪರೀಕ್ಷಾ ಗೊಂದಲದ ನೆಪವೊಡ್ಡಿ ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಯತ್ನಿಸುತ್ತಿವೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.



ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿ, ಪರೀಕ್ಷಾ ಗೊಂದಲಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ತಕ್ಷಣವೇ ಸ್ಪಂದಿಸಿ, ಮರುಪರೀಕ್ಷೆ ನಡೆಸಿ ಪಾರದರ್ಶಕತೆ ಕಾಯ್ದುಕೊಂಡಿದ್ದರೂ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳು ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿವೆ ಎಂದು ಟೀಕಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆಗೆ ಸಂಪೂರ್ಣ ಅವಕಾಶವಿದೆ. ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಗೆ ಕೇಂದ್ರ ಸರ್ಕಾರ ಯಾವುದೇ ಅಡ್ಡಿಪಡಿಸಿಲ್ಲ. ಮೇ 3ರಂದು ದೇಶಾದ್ಯಂತ ನೀಟ್ ಪರೀಕ್ಷೆ ನಡೆದ ನಂತರ, ಮೇ 11–12ರ ವೇಳೆಗೆ ಪೇಪರ್ ಲೀಕ್ ಹಾಗೂ ಗೊಂದಲಗಳ ಕುರಿತು ದೂರುಗಳು ಕೇಳಿಬಂದ ತಕ್ಷಣವೇ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಕ್ಷಿಪ್ರ ತನಿಖೆಗೆ ಆದೇಶಿಸಿದರು ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ನಿರ್ದೇಶನದಂತೆ ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ ತನಿಖೆಯನ್ನು ಸಿಬಿಐಗೆ ವಹಿಸಲಾಯಿತು. ಸಿಬಿಐ ಹಾಗೂ ಎಸ್‌ಐಟಿ ತಂಡಗಳು ತಕ್ಷಣವೇ ಕಾರ್ಯಪ್ರವೃತ್ತರಾಗಿ ರಾತ್ರೋರಾತ್ರಿ ಪುಟ 2ಕ್ಕೆ

## ವಿದ್ಯಾರ್ಥಿ ಚಳವಳಿಗೆ ಅಣ್ಣಾ ಹಜಾರೆ ಎಂಟ್ರಿ

**ಅಹಲ್ಯಾನಗರ:** ದೆಹಲಿಯಲ್ಲಿ ನಡೆಯುತ್ತಿರುವ ವಿದ್ಯಾರ್ಥಿಗಳ ಚಳುವಳಿಯನ್ನು ಬೆಂಬಲಿಸಿ ಹಿರಿಯ ಸಮಾಜ ಸೇವಕ ಅಣ್ಣಾ ಹಜಾರೆ ಅವರು ಗುರುವಾರ ಅಹಲ್ಯಾನಗರದಲ್ಲಿ ಮೌನ ಚಳುವಳಿ ಪ್ರಾರಂಭಿಸಿದರು.




ಅಣ್ಣಾ ಹಜಾರೆ ಅವರು ಭಾರತ ಮಾತೆಗೆ ಪುಷ್ಪ ನಮನ ಸಲ್ಲಿಸಿ ಮೌನ ಪ್ರತಿಭಟನೆ ಪ್ರಾರಂಭಿಸಿದರು. ಅಲ್ಲದೆ, ಈ ಸಂದರ್ಭದಲ್ಲಿ ಭಾವುಕರಾದ ಅವರು ವಿದ್ಯಾರ್ಥಿಗಳ ಸ್ಥಿತಿಯನ್ನು ಕಣ್ಣೀರಿಟ್ಟಿದ್ದಾರೆ.

ದೆಹಲಿಯಲ್ಲಿ ವಿದ್ಯಾರ್ಥಿಗಳ ವಿರುದ್ಧ ನಡೆದ ಕ್ರಮದ ಬಗ್ಗೆ ಪುಟ 2ಕ್ಕೆ

# ಬರ ಪರಿಸ್ಥಿತಿ ಎದುರಿಸಲು ಸಿದ್ಧ

## ಪ್ರತಿ ವಿಧಾನಸಭೆ ಕ್ಷೇತ್ರಕ್ಕೆ 1 ಕೋಟಿ: ಸಚಿವ ಪರಮೇಶ್ವರ್



**ಬೆಂಗಳೂರು:** ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಸರ್ಕಾರ ಸಿದ್ಧವಿದೆ. ಈಗಾಗಲೇ ಪ್ರತಿ ವಿಧಾನಸಭೆ ಕ್ಷೇತ್ರಕ್ಕೆ 1 ಕೋಟಿ ರೂ. ನೀಡಲು ತೀರ್ಮಾನಿಸಿದ್ದೇವೆ. ಅಲ್ಲದೇ, ಕುಡಿಯುವ ನೀರಿನ ಸಮರ್ಪಕ ಪೂರೈಕೆಗಾಗಿ ಪ್ರತಿ ಜಿಲ್ಲೆಗೆ 5 ಕೋಟಿ ರೂ.ಯನ್ನು ನೀಡಿದ್ದೇವೆ ಎಂದು ಡಿಸಿಎಂ ಮತ್ತು ಕಂದಾಯ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು.

ಗೃಹ ಕಚೇರಿಯಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಪಿಡಿ ಖಾತೆಗಳಲ್ಲಿ 329 ಕೋಟಿ ರೂ. ಲಭ್ಯವಿದೆ. ನಮ್ಮಲ್ಲಿ ಹಣದ ಕೊರತೆ ಇಲ್ಲ ಎಂದು ಹೇಳಿದರು.

ಮೈಸೂರು ಮತ್ತು ಬೆಂಗಳೂರು ವಿಭಾಗದ ಪ್ರಗತಿ ಪರಿಶೀಲನೆ ಬಾಕಿ ಇದೆ. ನಂತರ ರಾಜ್ಯ ಪರಿಸ್ಥಿತಿಯ ಬಗ್ಗೆ ಸಂಪೂರ್ಣ ಚಿತ್ರಣ ಸಿಗುತ್ತದೆ. ಆ ಬಳಿಕ ಚರ್ಚಿಸಿ, ರೈತರಿಗೆ, ಸಾಮಾನ್ಯ ಜನರಿಗೆ ಸಮಸ್ಯೆಯಾಗದಂತೆ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಬಹುದು ಎಂಬುದರ ಬಗ್ಗೆ ತೀರ್ಮಾನಿಸುತ್ತೇವೆ ಎಂದರು.

ಜನರು ಉದ್ಯೋಗಕ್ಕಾಗಿ ಗುಳೆ ಹೋಗುವುದನ್ನು ತಪ್ಪಿಸಲು ಎಲ್ಲ ಜಿಲ್ಲಾ ಪಂಚಾಯತ್ ಸಿಇಒಗಳು ವಿಬಿ–ಜಿ ರಾಮ್ ಜಿ ಯೋಜನೆಯಡಿ ಕೂಡಲೇ ಜನರಿಗೆ ಉದ್ಯೋಗ ನೀಡುವಂತೆ ಸೂಚಿಸಿದ್ದೇನೆ. ನಮ್ಮಲ್ಲಿ ಹಣದ ಕೊರತೆ ಇಲ್ಲ. ಶೀಘ್ರವೇ ಕಾಮಗಾರಿ ಆರಂಭಿಸುವಂತೆ ತಿಳಿಸಿದ್ದೇವೆ. ಕೇಂದ್ರ ಸರ್ಕಾರಕ್ಕೆ ನಾವು ಪತ್ರ ಬರೆದಿದ್ದೇವೆ. ಆದರೆ, ಈವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಆಗಸ್ಟ್ ತಿಂಗಳಲ್ಲಿ ಅವರು ಮನವಿಯನ್ನು ನಿರೀಕ್ಷಿಸುತ್ತಾರೆ. ಆವಾಗ ನಾವು ಮನವಿ ಸಲ್ಲಿಸಿದರೆ ಹಣವನ್ನು ಬಿಡುಗಡೆ ಮಾಡುತ್ತಾರೆ ಎಂದು ತಿಳಿಸಿದರು.

## ಹೊಣೆಹೊತ್ತು ಸಚಿವರು ರಾಜೀನಾಮೆ ನೀಡಬೇಕು

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿರುದ್ಧ ದೆಹಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆ ಕುರಿತ ಮಾತನಾಡಿದ ಸಚಿವ ಪರಮೇಶ್ವರ್ ಅವರು, ಈ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ಮಾಡಲು ಅವಕಾಶ ಕೇಳಿದ್ದಾರೆ. ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆ ಇದು. ಮೊದಲ ಪರೀಕ್ಷೆಯಲ್ಲಿ ಕೆಲವರು ಉತ್ತಮ ಅಂಕಗಳನ್ನು ಪಡೆದುಕೊಂಡಿದ್ದರು. ಎರಡನೇ ಬಾರಿ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ಬಂದಿದೆ. ಲಕ್ಷಾಂತರ ಮಕ್ಕಳಿಗೆ ತೊಂದರೆಯಾಗಿದೆ. ಅಧಿಕಾರದಲ್ಲಿರುವವರು ಇದರ ಜವಾಬ್ದಾರಿ ಹೊತ್ತು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ವಿದ್ಯಾರ್ಥಿಗಳ ಪರವಾಗಿ ಇರುವುದಾಗಿ ಮೋದಿ ಹೇಳಿದ್ದಾರೆ. ಹಾಗಿದ್ದ ಮೇಲೆ ಧರ್ಮೇಂದ್ರ ಪ್ರಧಾನ್ ಅವರನ್ನು ಅಧಿಕಾರದಿಂದ ಕೆಳಗಿಳಿಸಿ. ಜವಾಬ್ದಾರಿ ಹೊತ್ತವರ ಮೇಲೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಲೋಕಸಭೆಯ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಮೇಲೆ ದುರ್ವತನೆ ತೋರಿದ್ದಾರೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಎಲ್ಲಿಗೆ ತಲುಪುತ್ತಿದೆ? ಶಾಂತಿಯುತ ಪ್ರತಿಭಟನೆ ನಡೆಸಲು ಸಂವಿಧಾನದಲ್ಲೇ ಅವಕಾಶ ಇರುವಾಗ ಆಡಳಿತದಲ್ಲಿರುವವರು ಅವಕಾಶ ಕೊಡುವುದಿಲ್ಲ ಎಂದರೆ ಏನರ್ಥ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮತ್ತು ಬಿಜೆಪಿ ಪ್ರತಿಭಟನಾ ರ‍್ಯಾಲಿ ಬಗ್ಗೆ ಮಾತನಾಡಿ, ಆಕ್ಷನ್ ಇದ್ದಾಗ ರಿಯಾಕ್ಷನ್ ಆಗೇ ಆಗುತ್ತೆ. ಅದಕ್ಕೆ ನಮ್ಮವರು ಪ್ರತಿಭಟನೆ ಮಾಡ್ತಾರೆ ಅಂತ ಅವರು ಬಂದು ಮಾಡ್ತಿದ್ದಾರೆ. ರಾಜಭವನಕ್ಕೆ ದೂರು ನೀಡಲಿ. ನಮ್ಮದೇನು ತಕರಾರಿಲ್ಲ ಎಂದರು.

## ಹೆಣ್ಣು ಮಗುವೆಂದು ಸಂಪ್‌ಗೆ ಹಾಕಿ ಹತ್ಯೆ ಮಾಡಿದ ತಂದೆ

**ಚಿಕ್ಕಬಳ್ಳಾಪುರ:** ಹೆಣ್ಣೆಂದು ಸ್ವಂತ ಮಗುವನ್ನೇ ಸಂಪ್‌ಗೆ ಹಾಕಿ ಹತ್ಯೆ ಮಾಡಿರುವ ಘಟನೆ ಚಿಕ್ಕಬಳ್ಳಾಪುರದ ಶಾಂತಿನಗರದಲ್ಲಿ ನಡೆದಿದೆ.

ತಂದೆ ಇಮ್ರಾನ್ ಹಾಗೂ ತಾಯಿ ಮುಸ್ಕಾನ್‌ಗೆ 13 ದಿನಗಳ ಹಿಂದೆ ಹೆಣ್ಣು ಜನಿಸಿತ್ತು. ಬುಧವಾರ ರಾತ್ರಿ ಆರೋಪಿ ಇಮ್ರಾನ್ ಮಲಗಿದ್ದ ಮಗುವನ್ನು ಎತ್ತಿಕೊಂಡು ಸಂಪ್‌ಗೆ ಹಾಕಿದ್ದಾನೆ. ಬಳಿಕ ತಡರಾತ್ರಿ ತಾಯಿ ಎದ್ದು ಮಗು ಎಲ್ಲಿ ಎಂದು ಕೇಳಿದಾಗ ನನಗೆ ಗೊತ್ತಿಲ್ಲ ಎಂದು ಹೇಳಿದ್ದಾನೆ. ಆನಂತರ ಮನೆಯವರ ಜೊತೆ ಹುಡುಕಾಡುವ ನಾಟಕ ಆಡಿದ್ದಾನೆ.

ಕೊನೆಗೆ ಸಂಪ್ ನೀರು ಹೊರ ಹಾಕಿ ನೋಡಿದಾಗ ಮಗು ಶವವಾಗಿ ಪತ್ತೆಯಾಗಿದೆ. ಪಾಪಿ ತಂದೆ ಇಮ್ರಾನ್‌ನನ್ನು ಪೊಲೀಸರು ಬಂಧಿಸಿದ್ದಾರೆ. ಚಿಕ್ಕಬಳ್ಳಾಪುರ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

## ಮೊಟ್ಟೆ ಎಸೆದವನ ಬಂಧನ

**ಬೆಂಗಳೂರು:** ಬಿಜೆಪಿ ನಾಯಕರ ಮೇಲೆ ಮೊಟ್ಟೆ ಎಸೆದ ಪ್ರಕರಣದ ಪ್ರಮುಖ ಆರೋಪಿ ಪುಣ್ಯೇಶ್ ಎಂಬಾತನನ್ನು ಶಿವಾಜಿನಗರ ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.


ಆರೋಪಿ ಒಂದು ಬಾಕ್ಸಲ್ಲಿ ಮೊಟ್ಟೆಗಳನ್ನು ತಂದಿರುವುದು ಬೆಳಕಿಗೆ ಬಂದಿದೆ. ಈ ಕೃತ್ಯದ ಹಿಂದೆ ಇನ್ನೂ ಕೆಲವರು ಇದ್ದಾರೆಯೇ ಎಂಬ ಅನುಮಾನವಿದೆ. ಪ್ರಮುಖ ಅರೋಪಿ ಸೇರಿ ಐವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಪುಟ 2ಕ್ಕೆ



## ಮೋದಿ ಆಗ ಏಕೆ ಮಾತನಾಡಲಿಲ್ಲ?

### ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಿ: ಸಿಎಂ ಡಿಕೆಶಿ ಆಗ್ರಹ

**ಬೆಂಗಳೂರು:** ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಈಗ ಮಾತನಾಡುವ ಬದಲು ಪ್ರಾರಂಭದಲ್ಲೇ ಮಾತನಾಡಬೇಕಿತ್ತು. ಆಗ ಏಕೆ ಮಾತನಾಡಲಿಲ್ಲ? ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.



ಯಾರನ್ನೂ ಕಾಪಾಡಲು ಮುಂದಾಗಬಾರದು ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಆಗ್ರಹಿಸಿದರು.

ಬೆಂಗಳೂರಿನಲ್ಲಿ ಮಾಧ್ಯಮಗಳಿಗೆ ಗುರುವಾರ ಪ್ರತಿ ಕ್ರಿಯಿಸಿದ ಅವರು, ಬಿಜೆಪಿಯವರೇ ನಿಮ್ಮ ಮಕ್ಕಳೂ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ದೇಶದ ಯುವ ಜನತೆ ಭವಿಷ್ಯ ಹಾಳಾಗುತ್ತಿದೆ. ವೈಫಲ್ಯವನ್ನು ಬಿಜೆಪಿಯವರು ಒಪ್ಪಿಕೊಳ್ಳಬೇಕು. ಒಬ್ಬ ವ್ಯಕ್ತಿ ರಾಜಿನಾಮೆ ಕೊಡುವುದ ರಿಂದ ಏನಾಗಲಿದೆ? ಪುಟ 2ಕ್ಕೆ

### ನನ್ನದು ಪರಿಶುದ್ಧ ಆಡಳಿತ

ರಾಜ್ಯದಲ್ಲಿ ಕೊತ್ವಾಲ್ ಆಡಳಿತ ನಡೆಯುತ್ತಿದೆ ಎನ್ನುವ ಬಿಜೆಪಿ ಹೇಳಿಕೆ ಬಗ್ಗೆ ಪ್ರಶ್ನಿಸಿದಾಗ, ಅವರ ಖುಷಿಗೆ ಏನು ಬೇಕಾದರೂ, ಹೇಗೆ ಬೇಕಾದರೂ ಮಾತನಾಡಿಕೊಳ್ಳಲಿ. ನಾನು ಈ ಸ್ಥಾನಕ್ಕೆ ಬರಲು ವಿದ್ಯಾರ್ಥಿ ನಾಯಕನಾಗಿ ಬೆಳೆದವನು. ನಾನು ಪರಿಶುದ್ಧವಾದ ರಾಜಕಾರಣ, ಆಡಳಿತ ಮಾಡುತ್ತಿದ್ದೇನೆ. ಇದನ್ನು ಅವರ ಕೈಯಲ್ಲಿ ತಡೆದುಕೊಳ್ಳಲು ಆಗುತ್ತಿಲ್ಲ ಎಂದರೆ ಏನು ಮಾಡಲು ಆಗುವುದಿಲ್ಲ ಎಂದು ಸಿಎಂ ಡಿ.ಕೆ.ಶಿವಕುಮಾರ್ ವ್ಯಂಗ್ಯವಾಡಿದರು.

ಕಾಂಗ್ರೆಸ್ ನಿಂದ ಪ್ರಶ್ನೆ ಪತ್ರಿಕೆ ಸೋರಿಕೆ ವಿರುದ್ಧ ಪ್ರತಿಭಟನೆ ಮಾಡಿದ್ದೇವೆ. ಕಾಂಗ್ರೆಸ್ ಕಚೇರಿ ಬಳಿ ಮೊಟ್ಟೆ ಹೊಡೆದಿದ್ದನ್ನು ಸರಿ ಪುಟ 2ಕ್ಕೆ

## ಬಿಜೆಪಿ ಗೂಂಡಾಗಳಿಂದ ಕಲ್ಲು ತೂರಾಟ

### ಶಾಂತಿಯುತ ಪ್ರತಿಭಟನೆ ಹತ್ತಿಕ್ಕಲು ಯತ್ನ: ಅಭಿಜಿತ್ ದೀಪ್ಕೆ

**ನವದೆಹಲಿ:** ಶಾಂತಿಯುತ ಪ್ರತಿಭಟನೆಯನ್ನು ಹತ್ತಿಕ್ಕಲು ಬಿಜೆಪಿ ಗೂಂಡಾಗಳನ್ನು ಕಳುಹಿಸಿದೆ ಎಂದು ಕಾಕ್ರೋಚ್ ಜನತಾ ಪಾರ್ಟಿ ಸಂಸ್ಥಾಪಕ ಅಭಿಜಿತ್ ದೀಪ್ಕೆ ಗಂಭೀರ ಆರೋಪ ಮಾಡಿದ್ದಾರೆ.

ಜಂತರ್ ಮಂತರ್‌ನಲ್ಲಿ ಗುರುವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಕಲ್ಲು ಪುಟ 2ಕ್ಕೆ



### ವಿದ್ಯಾರ್ಥಿ ನಾಯಕರೊಂದಿಗೆ ಚರ್ಚೆಗೆ ಸಿದ್ಧ: ಜಿತೇಂದ್ರ ಸಿಂಗ್

**ನವದೆಹಲಿ:** ವಿದ್ಯಾರ್ಥಿ ನಾಯಕರೊಂದಿಗೆ ಚರ್ಚಿಸಲು ಸರ್ಕಾರ ಸಂಪೂರ್ಣ ಸಿದ್ಧವಾಗಿದೆ ಎಂದು ಕೇಂದ್ರ ಸಚಿವ ಡಾ.ಜಿತೇಂದ್ರ ಸಿಂಗ್ ಸ್ಪಷ್ಟಪಡಿಸಿದ್ದಾರೆ.

ಸಿಜೆಪಿ ಪ್ರತಿನಿಧಿಗಳೊಂದಿಗೆ ಚರ್ಚಿಸಲು ಸರ್ಕಾರ ಈಗಾಗಲೇ ನಾಲ್ಕು ಅಧಿಕೃತ ಪ್ರಸ್ತಾಪಗಳನ್ನು ಕಳುಹಿಸಿದೆ. ಇದು ನಮ್ಮ ಯುವ ಸ್ನೇಹಿತರಿಗೆ ನೀಡುತ್ತಿರುವ ಮುಕ್ತ ಆಹ್ವಾನ. ನಿಮ್ಮ ಅನುಕೂಲಕ್ಕೆ ತಕ್ಕಂತೆ, ಯಾವುದೇ ಸಮಯದಲ್ಲಿ ಎಲ್ಲಾ ವಿಷಯಗಳ ಕುರಿತು ಚರ್ಚಿಸಲು ಸರ್ಕಾರ ಸಿದ್ಧವಾಗಿದೆ ಎಂದು ತಿಳಿಸಿದರು.

ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಅವರ ಕಚೇರಿ ಅಥವಾ ನಿವಾಸದಲ್ಲೇ ಪುಟ 2ಕ್ಕೆ

# ಭವಿಷ್ಯ ಹಾಳು ಮಾಡಿದ್ದೇ ನೀವು

## ಪ್ರಧಾನಿ ನರೇಂದ್ರ ಮೋದಿ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ

**ನವದೆಹಲಿ:** ದೇಶದ ಯುವಕರ ಭವಿಷ್ಯಕ್ಕೆ ದೊಡ್ಡ ಹಾನಿ ಮಾಡಿರುವುದು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರವೇ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದಾರೆ.

ಪ್ರಧಾನಿ ಮೋದಿ, ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಆರೋಪಿಗಳಿಗೆ ಶಿಕ್ಷೆ ಖಚಿತಪಡಿಸಲು ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಲಾಗುವುದು ಎಂದು ಘೋಷಿಸಿದ್ದಾರೆ. ಯುವಕರ ಭವಿಷ್ಯ ಸರ್ಕಾರದ ಮೊದಲ ಆದ್ಯತೆ ಎಂದು ಭರವಸೆ ನೀಡಿದ್ದಾರೆ.

ಪ್ರಧಾನಿ ನಿರ್ಧಾರದ ಕುರಿತು ಪ್ರತಿಕ್ರಿಯಿಸಿದ ರಾಹುಲ್ ಗಾಂಧಿ, ಯುವಕರ ಭವಿಷ್ಯಕ್ಕೆ ಹೆಚ್ಚು ಹಾನಿ ಮಾಡಿರುವುದು ನೀವೇ.



ದೇಶದ ಶಿಕ್ಷಣ ವ್ಯವಸ್ಥೆ ಹಾಳಾಗಲು ನೀವು ಅವಕಾಶ ನೀಡಿದ್ದೀರಿ. ಇದಕ್ಕೆ ಕಾರಣರಾದವರನ್ನೇ ರಕ್ಷಿಸಿದ್ದೀರಿ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ಕಿಡಿಕಾರಿದ್ದಾರೆ.

ವಿದ್ಯಾರ್ಥಿಗಳ ಪ್ರಮುಖ ಬೇಡಿಕೆಗಳನ್ನು ಉಲ್ಲೇಖಿಸಿದ ರಾಹುಲ್ ಗಾಂಧಿ, ಈ ಕೆಳಗಿನ ಮೂರು ಬೇಡಿಕೆಗಳನ್ನು ತಕ್ಷಣ ಈಡೇರಿಸಬೇಕು ಎಂದು ಒತ್ತಾಯಿಸಿದ್ದಾರೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಬೇಕು. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರ ವಿದ್ಯಾರ್ಥಿಗಳಲ್ಲಿ ಅಧಿಕೃತವಾಗಿ ಕ್ಷಮೆ ಕೇಳಬೇಕು. ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ. ಇದನ್ನು ಮೊದಲು ಮೋದಿ ಈಡೇರಿಸಬೇಕು ಎಂದು ರಾಹುಲ್ ಆಗ್ರಹಿಸಿದ್ದಾರೆ.

# ಫಾಸ್ಟ್ ಟ್ರ್ಯಾಕ್ ಕೋರ್ಟ್ ಸ್ಥಾಪನೆ

## ನೀಟ್ ಅಕ್ರಮ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ: ಮೋದಿ ಘೋಷಣೆ

**ನವದೆಹಲಿ:** ನೀಟ್ ಪರೀಕ್ಷಾ ಅಕ್ರಮ ಹಾಗೂ ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಭಾಗಿಯಾದ ಅಪರಾಧಿಗಳಿಗೆ ತ್ವರಿತ ವಿಚಾರಣೆ ನಡೆಸಿ ಶಿಕ್ಷೆ ವಿಧಿಸಲು ಫಾಸ್ಟ್‌ಕ್ ಕೋರ್ಟ್ ಸ್ಥಾಪಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

ದೇಶಾದ್ಯಂತ ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ ಹಾಗೂ ಜಂತರ್ ಮಂತರ್‌ನಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ ತೀವ್ರಗೊಳ್ಳುತ್ತಿರುವ ಬೆನ್ನಲ್ಲೇ ಮೌನ ಮುರಿದಿರುವ ಮೋದಿ ಅವರು ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ನಮ್ಮ ಯುವಜನತೆಯ ಭವಿಷ್ಯ ಮತ್ತು ಕ್ಷೇಮಾಭಿವೃದ್ಧಿಗಿಂತ ನಮಗೆ ಬೇರೇನೂ ಮುಖ್ಯವಲ್ಲ. ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳಲ್ಲಿ ಭಾಗಿಯಾದವರಿಗೆ ಅತ್ಯಂತ ವೇಗವಾಗಿ ಮತ್ತು ಕಠಿಣವಾದ ಶಿಕ್ಷೆ ಸಿಗುವಂತೆ ಮಾಡಲು ಫಾಸ್ಟ್–ಕ್



ನ್ಯಾಯಾಲಯಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ಅಗತ್ಯವಿರುವ ಎಲ್ಲಾ ಕಾನೂನು ಮತ್ತು ಆಡಳಿತಾತ್ಮಕ ಕ್ರಮಗಳನ್ನು ತಕ್ಷಣವೇ ಕೈಗೊಳ್ಳುವಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ನಮ್ಮ ಯುವಕರ ಹಾಗೂ ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳುಮಾಡಲು ಯತ್ನಿಸುವ ಯಾವುದೇ ವ್ಯಕ್ತಿಯನ್ನು ಅಥವಾ ಶಕ್ತಿಯನ್ನು ಯಾವುದೇ ಕಾರಣಕ್ಕೂ ಕ್ಷಮಿಸುವುದಿಲ್ಲ ಎಂದು ಹೇಳಿದ್ದಾರೆ.

### ಪ್ರಧಾನ್ ರಾಜೀನಾಮೆವರೆಗೂ ಪ್ರತಿಭಟನೆ ನಿಲ್ಲಲ್ಲ: ಅಭಿಜಿತ್

**ನವದೆಹಲಿ:** ಪ್ರಶ್ನೆಪತ್ರಿಕೆ ಸೋರಿಕೆ ತಡೆಗೆ ಫಾಸ್ಟ್‌ಕ್ ನ್ಯಾಯಾಲಯ ಸ್ಥಾಪಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ನೀಡಿರುವ ಭರವಸೆಯನ್ನು ಕಾಕ್ರೋಚ್ ಜನತಾ ಪಾರ್ಟಿ ತಿರಸ್ಕರಿಸಿದೆ.

ಪ್ರಧಾನಿ ಪೋಸ್ಟ್ ಪ್ರಕಟವಾದ ಬೆನ್ನಲ್ಲೇ ಸಿಜೆಪಿ ನಾಯಕ ಅಭಿಜಿತ್ ದೀಪ್ಕೆ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು. ಅದುವರೆಗೂ ವಿದ್ಯಾರ್ಥಿಗಳ ಪ್ರತಿಭಟನೆ ನಿಲ್ಲುವುದಿಲ್ಲ ಎಂಬ ತನ್ನ ಪ್ರಮುಖ ಪುಟ 2ಕ್ಕೆ

**ಮೊದಲನೇ ಪುಟದಿಂದ**

## ಮೊಟ್ಟೆ ಎಸೆದವನ ಬಂಧನ

ಮೊಟ್ಟೆಗಳನ್ನು ಎಲ್ಲಿಂದ ತಂದಿದ್ದ? ಘಟನೆ ಪೂರ್ವನಿಯೋಜಿತವೇ, ಮೊಟ್ಟೆ ಎಸೆಯಲು ಯಾರಾದರೂ ಸೂಚನೆ ನೀಡಿದ್ದರೇ ಹಾಗೂ ಪುಣ್ಯೇಶ್ ಜೊತೆಗೆ ಇದ್ದವರು ಯಾರು ಎಂಬ ಬಗ್ಗೆ ಪೊಲೀಸರು ವಿಚಾರಣೆ ನಡೆಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಾಜಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪ್ರಧಾನ್ ರಾಜೀನಾಮೆವರೆಗೂ ಪ್ರತಿಭಟನೆ ನಿಲ್ಲಲ್ಲ: ಅಭಿಜಿತ್

ಬೇಡಿಕೆಯನ್ನು ಪುನರುಚ್ಚರಿಸಿದೆ. ಸರ್ಕಾರದ ನಿರ್ಧಾರಗಳಿಗೆ ತೃಪ್ತರಾಗದ ಸಿಜೆಪಿ, ಸಾಮಾಜಿಕ ಜಾಲತಾಣಗಳಲ್ಲಿ ಧರ್ಮೇಂದ್ರ ಪ್ರಧಾನ್ ತಕ್ಷಣವೇ ರಾಜೀನಾಮೆ ನೀಡಬೇಕು ಎಂದು ಕಟ್ಟುನಿಟ್ಟಾಗಿ ಆಗ್ರಹಿಸಿದೆ.

## ವಿದ್ಯಾರ್ಥಿ ನಾಯಕರೊಂದಿಗೆ ಚರ್ಚೆಗೆ ಸಿದ್ಧ: ಜಿತೇಂದ್ರ ಸಿಂಗ್

ಈ ಮಾತುಕತೆಗಳು ನಡೆಯಬಹುದು. ನಾವು ಯಾವುದೇ ಪ್ರತಿಷ್ಠೆಗೆ ಬಿದ್ದಿಲ್ಲ ಎಂದು ಜಿತೇಂದ್ರ ಸಿಂಗ್ ಹೇಳಿದರು.

ಜೆ.ಪಿ. ನಡ್ಡಾ ಮತ್ತು ನಾನು ಖುದ್ದು ಚರ್ಚೆಗೆ ಉಪಸ್ಥಿತರಿರುತ್ತೇವೆ. ನಿರಂತರವಾಗಿ ಮಾತುಕತೆ ನಡೆಸುವ ಮೂಲಕವೇ ನಾವು ಹಂತ-ಹಂತವಾಗಿ ಪರಿಹಾರದತ್ತ ಸಾಗಬಹುದು. ಇದು ವಿದ್ಯಾರ್ಥಿಗಳ ಹಿತರಕ್ಷಣೆಗಾಗಿ ಸರ್ಕಾರ ಕೈಗೊಳ್ಳುತ್ತಿರುವ ಸಾಲು ಸಾಲು ಕ್ರಮಗಳ ಭಾಗವಾಗಿದೆ. ನಾವೆಲ್ಲರೂ ಅತ್ಯಂತ ವಿನಮ್ರತೆಯಿಂದ ನಿಮ್ಮಲ್ಲಿ ಮನವಿ ಮಾಡುತ್ತಿದ್ದೇವೆ. ದಯವಿಟ್ಟು ಮಾತುಕತೆಗೆ ಬನ್ನಿ ಎಂದು ಸಚಿವರು ಪ್ರತಿಭಟನಾ ನಿರತ ಯುವಕರಿಗೆ ಆಹ್ವಾನ ನೀಡಿದ್ದಾರೆ.

## ಬರ ಪರಿಸ್ಥಿತಿ ಎದುರಿಸಲು ಸಿದ್ಧ

ಮುಂಗಾರಿನಲ್ಲಿ ಸ್ವಲ್ಪ ಮಳೆಯಾಗಿದ್ದರಿಂದ ರೈತರು ಬೀಜ ಬಿತ್ತನೆ ಮಾಡಿದ್ದಾರೆ. ಆಮೇಲೆ ಮಳೆಯಾಗಿಲ್ಲ. ಈಗ ಬಿತ್ತನೆ ಮಾಡಿದ್ದೆಲ್ಲ ಒಣಗಿ ಹೋಗಿದೆ. ಈಗ ಮತ್ತೆ ಆಗಸ್ಟ್ ತಿಂಗಳಲ್ಲಿ ಮಳೆಯಾದರೆ ಬೀಜ ಬಿತ್ತನೆ ಮಾಡುವ ನಿರೀಕ್ಷೆಯಿದೆ ಎಂದು ಹೇಳಿದರು.

## ವಿದ್ಯಾರ್ಥಿ ಚಳವಳಿಗೆ ಅಣ್ಣಾ ಹಜಾರೆ ಎಂಟ್ರಿ

ಅಣ್ಣಾ ಹಜಾರೆ ಕಳವಳ ವ್ಯಕ್ತಪಡಿಸಿದರು. ಸರ್ಕಾರ ಸರ್ವಾಧಿಕಾರದ ಮಾರ್ಗ ಬಿಟ್ಟು, ವಿದ್ಯಾರ್ಥಿಗಳೊಂದಿಗೆ ನೇರ ಸಂವಾದದ ಮೂಲಕ ಅವರ ಸಮಸ್ಯೆಗಳನ್ನು ಪರಿಹರಿಸಬೇಕು. ಪ್ರಜಾಪ್ರಭುತ್ವದಲ್ಲಿ ಸಂವಾದ ಮತ್ತು ಚರ್ಚೆ ಮಾರ್ಗವನ್ನು ಅಭಿಪ್ರಾಯ ವ್ಯತ್ಯಾಸಗಳಿಗೆ ಉತ್ತರವಾಗಿ ಸ್ವೀಕರಿಸಬಾರದು ಎಂದು ಅಣ್ಣಾ ಹಜಾರೆ ಅಭಿಪ್ರಾಯ ವ್ಯಕ್ತಪಡಿಸಿದರು.

ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ
**ಜಿಲ್ಲಾ ಕೌಶಲ್ಯಾಭಿವೃದ್ಧಿ, ಅಧಿಕಾರಿಗಳ ಕಾರ್ಯಾಲಯ**
ನಂ: 5/1, ವಿನೋಬಾ ರಸ್ತೆ, ಮಾನಸಗಂಗೋತ್ರಿ, ಪ್ರೀಮಿಯರ್ ಸ್ಟುಡಿಯೋ ಎದುರು
ಮೈಸೂರು-570006. ದೂ.ಸಂ.: 0821-2970815
e-mail ID:-dsdomysore@gmail.com

ಸಂ.: ಜಿ.ಕೌ.ಕ.ಮೈ/ಹೊ.ಗು./ವಿ.ವ-1/2026-28 ದಿನಾಂಕ: 22.07.2026

**ಮರು ಇ - ಟೆಂಡರ್ ಪ್ರಕಟಣೆ**
**(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)**

ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ, ಮೈಸೂರು ಇಲ್ಲಿನ ಅಧೀನದಲ್ಲಿರುವ ಮಹಿಳಾ ವಿದ್ಯಾಪೀಠ, ನಂಜನಗೂಡು ಇಲ್ಲಿಗೆ ಅವಶ್ಯವಿರುವ **ಇಬ್ಬರು (02) ಹಗಲು/ರಾತ್ರಿಪಾಳಿ ಕಾವಲುಗಾರರನ್ನು** ಹೊರಸಂಪನ್ಮೂಲ ಸಂಸ್ಥೆಯಿಂದ ಪಡೆಯಲು 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಸೇವೆಯನ್ನು ಒದಗಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ **https://kppp.karnataka.gov.in** ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು.

1) ಟೆಂಡರ್‌ನ್ನು ಸಲ್ಲಿಸಲು ಕಡೆಯ **ದಿನಾಂಕ: 29.07.2026 ಸಂಜೆ 05.00 ಗಂಟೆಯವರೆಗೆ.** 2) ಟೆಂಡರ್ ತೆರೆಯುವ **ದಿನಾಂಕ: 30.07.2026 ರ ಸಂಜೆ 05:15 ಗಂಟೆಗೆ** ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

| ಕ್ರ.ಸಂ. | ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಇಎಂಡಿ ಮೊತ್ತ (ರೂ.ಗಳಲ್ಲಿ) | ಕಾಲಾವಧಿ |
|---|---|---|---|---|
| 1 | DSDEL/2026-27/SE0075/ call-2 (Security Guard) | 7.3 | 15000/- | 12 ತಿಂಗಳು |

**ಸೂಚನೆ:** ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್ ನಲ್ಲಿ ನೋಡಿಕೊಳ್ಳುವುದು.

ಸಹಿ/- ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ
ಮೈಸೂರು ಜಿಲ್ಲೆ, ಮೈಸೂರು

DIPR/MYS/481/SA/2026-27

**ಕರ್ನಾಟಕ ಸರ್ಕಾರ**
**ಜಿಲ್ಲಾ ಆಸ್ಪತ್ರೆ ಮತ್ತು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ,**
**ಕೆ.ಆರ್. ಆಸ್ಪತ್ರೆ, ಮೇಟಗಳ್ಳಿ, ಮೈಸೂರು**
**Ph: 0821-2517555 Email: dsmysuruhfws@karnataka.gov.in**

**ಕ್ರ.ಸಂ. 1 ಟೆಂಡರ್ ಹೆಸರು:** Anti Rabies vaccine 1 ML ಸರಬರಾಜು ಮಾಡಲು ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನ. **ಟೆಂಡರ್ ಸಂಖ್ಯೆ:** DHFWS/2026-27/IND2575 **ಟೆಂಡರ್ ಸಲ್ಲಿಸಲು ಪ್ರಾರಂಭ ಹಾಗೂ ಕೊನೆಯ ದಿನಾಂಕ:** 17.07.2026 to 31.07.2026 http://kppp.karnataka.gov.in **ಟೆಂಡರ್ ಮೌಲ್ಯ:** ರೂ:12,00,000/-
**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:** ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ಮತ್ತು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಮೈಸೂರು ಹಾಗೂ http://kppp.karnataka.gov.in

ಸಹಿ/- ಜಿಲ್ಲಾ ಶಸ್ತ್ರಚಿಕಿತ್ಸಕರು

DIPR/DDMYS/473/KSMCA/314/2026-27

## ಶ್ರೀರಾಮನಹುಂಡಿ ಕಳವು: ನ್ಯಾಯಮೂರ್ತಿಗಳಿಂದ ತನಿಖೆಗೆ ಆಗ್ರಹ

**ಮೈಸೂರು:** ಶ್ರೀರಾಮನ ದೇವಾಲಯ ದೇಶದ ಸಮಸ್ತ ಹಿಂದೂಗಳಿಗೂ ಸಂಬಂಧ ಪಟ್ಟ ವಿಚಾರವಾಗಿರುವ ಹಿನ್ನೆಲೆಯಲ್ಲಿ ಶ್ರೀರಾಮನಹುಂಡಿ ಕಳವು ವಿಚಾರವನ್ನು ಸುಪ್ರೀಂ ಕೋರ್ಟ್ ನ್ಯಾಯಾಧೀಶರ ನೇತೃತ್ವದ ತನಿಖಾ ಸಮಿತಿಯ ತನಿಖೆ ನಡೆಸಬೇಕೆಂದು ಮಾಜಿ ಸಚಿವ ಹಾಗೂ ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ್ ಸೊರಕೆ ಆಗ್ರಹಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಶ್ರೀರಾಮ ದೇವರ ಹುಂಡಿ ಕಳತನವಾಗಿದೆ. ಅದರ ಸತ್ಯಾಂಶ ಹೊರ ಬರಬೇಕು. ಶ್ರೀರಾಮನ ಮೇಲೆ ದೇಶದ ಜನರು ಇರಿಸಿದ್ದ ಭಕ್ತಿ, ಶ್ರದ್ಧೆ ಭಾವನೆಗೆ ಧಕ್ಕೆ, ಆಘಾತವಾಗಿದೆ. ಅದಕ್ಕೆ ಕಾರಣರಾದವರಿಗೆ ಕಠಿಣ ಶಿಕ್ಷೆ ಆಗಬೇಕಿದೆ. ಹೀಗಾಗಿ ರಾಮನ ಹುಂಡಿ ಕದ್ದವರು, ಮತವನ್ನು ಖದೀಯಲಾರರೆ ಎಂದು ಅಭಿಯಾನ ನಡೆಸುತ್ತಿದ್ದೇವೆ.



ರಾಮನಗರ, ಉಡುಪಿ, ಬಾಗಲಕೋಟೆ, ಬಿಜಾಪುರ, ಬೆಳಗಾವಿ ಎಲ್ಲಾ ಕಡೆ ಜಾಗೃತಿ ತರುವ ಕೆಲಸ ಮಾಡುತ್ತಿದ್ದೇವೆಂದರು.

ಹೀಗಾಗಿ ಶ್ರೀರಾಮನ ಹುಂಡಿ ಕಳವು ಸಮಗ್ರ ತನಿಖೆ ಆಗಬೇಕು. ಸದರಿ ಟ್ರಸ್ಟ್ ನಲ್ಲಿ ಸಾಕಷ್ಟು ಧರ್ಮಗುರುಗಳ ಹೆಸರಿದ್ದು, ಅವರೆಲ್ಲರಿಗೂ ಅಪಕೀರ್ತಿ ಅಂಟಬಾರದು ಎಂದಾದರೆ ತನಿಖೆಯಾಗಬೇಕಿದೆ ಎಂದರು. ಕೆಪಿಸಿಸಿ ಪ್ರಚಾರ ಸಮಿತಿ ಉಪಾಧ್ಯಕ್ಷ ಕೋಟೆ ಎಂ.ಶಿವಣ್ಣ, ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳ ಎತ್ತಿಕಟ್ಟುವುದು ನಿಲ್ಲದಿದ್ದರೆ ಹೋರಾಟ

**ಮೈಸೂರು:** ನೀಟ್ ವಿಚಾರದಲ್ಲಿ ವಿದ್ಯಾರ್ಥಿಗಳನ್ನು ಎತ್ತಿಕಟ್ಟುವ ಕೆಲಸ ಕಾಂಗ್ರೆಸ್ ನಿಲ್ಲಿಸದಿದ್ದರೆ ನಾವು ಸಹ ಪರ್ಯಾಯ ಹೋರಾಟದ ಸಭೆ ನಡೆಸಬೇಕಾಗುತ್ತದೆ ಎಂದು ಬಿಜೆಪಿ ನಗರಾಧ್ಯಕ್ಷ, ಮಾಜಿ ಶಾಸಕ ಎಲ್.ನಾಗೇಂದ್ರ ತಿಳಿಸಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ವಿದ್ಯಾರ್ಥಿಗಳನ್ನು ಎತ್ತಿಕಟ್ಟುವ ಕೆಲಸವನ್ನು ಕಾಂಗ್ರೆಸ್ ಮಾಡುವುದಕ್ಕೆ ನಿನ್ನೆ ನಡೆದ ಶಾಸಕ ನೇತೃತ್ವದ ಕಾರ್ಯಕ್ರಮವೇ ಸಾಕ್ಷಿಯಾಗಿದೆ. ಇದೇ ಮಾದರಿಯಲ್ಲಿ ದೆಹಲಿಯಲ್ಲೂ ವಿದ್ಯಾರ್ಥಿಗಳನ್ನು ಎತ್ತಿಕಟ್ಟುವ ಕೆಲಸ ಮಾಡುತ್ತಿದ್ದಾರೆ. ಇಂತಹ ಹೇಯ ಕೃತ್ಯ ಮಾಡುವುದನ್ನು ಕಾಂಗ್ರೆಸ್ ನಿಲ್ಲಿಸಬೇಕೆಂದು ಎಚ್ಚರಿಸುತ್ತೇನೆ.

ಮಹಾರಾಣಿ ಕಾಲೇಜಿನಲ್ಲಿ ನೀಟ್ ನಲ್ಲಿ ಮೃತಪಟ್ಟವರ ಫ್ಲೆಕ್ಸ್ ಅಳವಡಿಸಿ ಹಾಗೂ ಒಳಗೆ ರಾಹುಲ್ ಗಾಂಧಿ ಚಿತ್ರ ಬಳಸಿಕೊಂಡು ಕಾರ್ಯಕ್ರಮ ಮಾಡಲು ಅನುಮತಿ ಕೊಟ್ಟವರು ಯಾರು?, ಕಾನೂನಲ್ಲಿ ಇಂತಹ ಕಾರ್ಯಕ್ರಮ ಮಾಡಲು ಅವಕಾಶವಿದೆಯೇ? ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗುಸಬೇಕು. ಪೊಲೀಸರು ಅನೈತಿಕ ಫ್ಲೆಕ್ಸ್ ತೆರವುಗೊಳಿಸದೇ ಅಸಹಾತಕರಂತೆ ಪಕ್ಷದ ಏಜೆಂಟರಂತೆ ವರ್ತಿಸುತ್ತಿದ್ದಾರೆ. ಈ




ಹಿಂದೆ ಕಿಮ್ಮನೆ ರತ್ನಾಕರ್ ಅವಧಿಯಲ್ಲೂ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿತ್ತು. ಅವರು ರಾಜೀನಾಮೆ ಕೊಟ್ಟಿದ್ದರೆ, ಮುಂದೆ ಆಗದ ರೀತಿ ಹೇಗೆ ತಡೆಬೇಕೆಂಬುದರ ಕುರಿತು ಸಲಹೆ ಇದ್ದರೆ ಕೊಡಿ. ಲೋಕಸಭೆಯಲ್ಲಿ ಚರ್ಚಿಸಲು ನಿಮಗೆ ಆಗುತ್ತಿಲ್ಲ. ಹೊರಗೆ ಪ್ರತಿಭಟನೆ ನಾಟಕ ಆಡುತ್ತಿದ್ದಿರಿ. ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಮೃತರಾದಾಗ ಸಿಎಂ, ಡಿಸಿಎಂ ಅಥವಾ ಸಚಿವರು ರಾಜೀನಾಮೆ ಕೊಟ್ಟರೆ? ಹೀಗಿರುವಾಗ ಕೇಂದ್ರದ ರಾಜೀನಾಮೆ ಕೇಳಲು ನಿಮಗೆ ಯಾವುದೇ ನೈತಿಕತೆ ಇದಿಯಾ ಎಂದು ಪ್ರಶ್ನಿಸಿದರು.

ಮಾಜಿ ಮೇಯರ್ ಸಂದೇಶ್ ಸ್ವಾಮಿ, ನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಂ.ರಘು, ರುದ್ರಮೂರ್ತಿ, ಸೋಮಸುಂದರ್ ಪರೀಕ್ಷಿತ್ ರಾಜೇ ಅರಸ್ ಇದ್ದರು.

# ಅಮೆರಿಕಾ ಏಜೆಂಟ್ ರೀತಿ ಕೈ ವರ್ತನೆ

### ಮಾಜಿ ಸಂಸದ ಪ್ರತಾಪಸಿಂಹ ಹೇಳಿಕೆ । ಎಸ್ ಐಆರ್ ಪ್ರಚಾರ ರಥಕ್ಕೆ ಚಾಲನೆ

**ಮೈಸೂರು:** ನೀಟ್ ಪ್ರತಿಭಟನೆ ವಿಚಾರದಲ್ಲಿ ಕಾಂಗ್ರೆಸ್ ನವರು ಅಮೇರಿಕಾದ ಏಜೆಂಟ್ ಆಗಿದ್ದೀರಾ?, ಕಾಂಗ್ರೆಸ್ ಅಮೇರಿಕಾ ಏಜೆಂಟ್ ರೀತಿ ವರ್ತಿಸುತ್ತಿದ್ದಾರೆ ಎಂದು ಮಾಜಿ ಸಂಸದ ಪ್ರತಾಪಸಿಂಹ ತಿಳಿಸಿದರು.

ಮೈಸೂರಿನ ಒಂಟಿಕೊಪ್ಪಲಿನ ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ಪ್ರತಾಪ್ ಸಿಂಹ ಸ್ನೇಹ ಬಳಗ ವತಿಯಿಂದ ಆಯೋಜಿಸಿದ್ದ ಎಸ್ ಐಆರ್ ಪ್ರಚಾರ ರಥಕ್ಕೆ ಚಾಲನೆ ನೀಡಿ ಮಾತನಾಡಿದರು. ನೇಪಾಳ, ಬಾಂಗ್ಲಾ ಮಾದರಿ ದೆಹಲಿಯಲ್ಲಿ ಗಲಾಟೆ ವಿಚಾರವಾಗಿ ಪ್ರತಿಕ್ರಯಿಸಿ, ಇದರ ಹಿಂದೆ ಅಮೇರಿಕನ್ ಡೀಪ್ ಸ್ಟೇಟ್ ನ ಪಾತ್ರ ಇದೆ. ಈ ಹಿಂದೆ ನೇಪಾಳದಲ್ಲಿ ಬಾಂಗ್ಲಾದೇಶದಲ್ಲಿ ಈ ರೀತಿ ಪ್ರಯತ್ನ ನಡೆದಿತ್ತು. ಇದರ ಹಿಂದೆ ಬೇರೆ ಬೇರೆಯದ್ದೆ ಉದ್ದೇಶಗಳು ಇತ್ತು. ಇದು ಜಗತ್ ಜಾಗಿರಾಗಿದೆ. ಅಮೇರಿಕನ್ ಅಜೆಂಡ್ ವನ್ನ ಕಾಂಗ್ರೆಸ್ ಇಲ್ಲಿ ಜಾರಿಗೊಳಿಸುವ ಯತ್ನ ನಡೆಸುತ್ತಿದ್ದಾರೆ. ಮೋದಿ ಪ್ರಚಾರ ತಗ್ಗಿಸಲು ಈ ರೀತಿ ಅಮೇರಿಕ ಯತ್ನ ನಡೆಯುತ್ತಿದೆ. ದೇಶದ ಜನ ಮೋದಿಗೆ ಬೆನ್ನಿಗೆ ನಿಂತಿದ್ದಾರೆ. ಇದು ನರೇಂದ್ರ ಮೋದಿಗೆ ಯಾವ ರೀತಿ ಮಟ್ಟ ಹಾಕಬೇಕೆಂಬುದು ಗೊತ್ತಿದೆ ಎಂದರು.

ದೆಹಲಿಯಲ್ಲಿ ನೀಟ್ ಹೋರಾಟ ವಿಚಾರವಾಗಿ ಪ್ರತಿಕ್ರಯಿಸಿ,ಈ ವಿಚಾರದಲ್ಲಿ ಪರಸ್ಪರ ದೋಷಾರೋಪ ಮಾಡುವುದಿಲ್ಲ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಾಗಿರುವುದು ನಮಗೆಲ್ಲ ನೋವಾಗಿದೆ. ಕಾಂಗ್ರೆಸ್ ಸರ್ಕಾರದಲ್ಲಿ ಆಗಿದ್ದಿದ್ದರೆ ಯಾರೂ ಬೇಜಾರು ಮಾಡಿಕೊಳ್ಳುತ್ತಿರಲಿಲ್ಲ. ಅವರ ಅವಧಿಯಲ್ಲಿ ಸಾಲು ಸಾಲು ಹಗರಣ ನಡೆದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಬಿಜೆಪಿ ಸರ್ಕಾರದ ಅವದಿಯಲ್ಲಿ ನಡೆದಿರುವುದು ನಮಗೆಲ್ಲ ನೋವಿನ ವಿಚಾರ. ಈ ಅಕ್ರಮದಲ್ಲಿ ಭಾಗಿಯಾದವರನ್ನು ಪತ್ತೆ ಮಾಡಿ ಜೈಲಿಗೆ ಕಳುಹಿಸುವ ಕೆಲಸವನ್ನು ನರೇಂದ್ರ ಮೋದಿ



ಮಾಡಿದ್ದಾರೆಂದರು.

2014 ರಲ್ಲಿ 51,000 ಮೆಡಿಕಲ್ ಸೀಟುಗಳು ಮಾತ್ರ ಇತ್ತು. ಆಗ ಖಾಸಗಿ ಅವರ ಕಪಿಮುಷ್ಠಿಯಲ್ಲಿ ಮೆಡಿಕಲ್ ಸೀಟುಗಳಿದ್ದವು. ನರೇಂದ್ರ ಮೋದಿ ಪ್ರಧಾನಿಯಾದ ನಂತರ ಈ ಮಾಫಿಯಾವನ್ನು ಒಡೆದು ಹಾಕಿದರು. 2016 ರಲ್ಲಿ ನೀಟ್ ಪರೀಕ್ಷೆ ತೆಗೆದುಕೊಂಡು ಬಂದು ದೇಶದಲ್ಲಿ ಏಕರೂಪದ ಪರೀಕ್ಷೆ ನಡೆಯುತ್ತಿದೆ. 1,36000 ಸೀಟಿಗೆ ಏರಿಕೆ ಆಗಿದೆ. 320 ಇದ್ದ ಮೆಡಿಕಲ್ ಕಾಲೇಜುಗಳು 825 ಆಗಿದ್ದಾವೆ. ಇದನ್ನೆಲ್ಲ ಬಿಟ್ಟು ಕೆಲವು ಎಡಬಿಡಂಗಿಗಳು ಸೇರಿಕೊಂಡು ಹೋರಾಟ ಮಾಡುತ್ತಿದ್ದಾರೆಂದರು.

ಎಆರ್ ರಾಜ್ಯದಲ್ಲಿ ನಡೆಯುತ್ತಿದೆ. ಜನರಲ್ಲಿ ಬಹಳ ಗೊಂದಲ ಇದೆ. ಎಆರ್ ಫಾರಂಗಳನ್ನ ಬಿಎಗಳು ತಂದು ಕೊಡಬೇಕಿತ್ತು. ಫಾರಂ ವಿತರಣೆ ಮಾಡುವುದು ಸಾಕಷ್ಟು ಗೊಂದಲಗಳಾಗಿದೆ. ಮತಗಟ್ಟೆಗಳಲ್ಲಿ ಪ್ರತಿ ಭಾನುವಾರ ಫಾರಂ ಕೊಡಬೇಕೆಂದು ಮನವಿ ಮಾಡಿದ್ದಿವಿ. ನಮ್ಮ ಮನವಿಗೆ ಜಿಲ್ಲಾಧಿಕಾರಿಗಳು ಸ್ಪಂದಿಸಿ ಭಾನುವಾರ ಮತಗಟ್ಟೆಗಳಲ್ಲಿ ಫಾರಂ ಭರ್ತಿ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಹೀಗಾಗಿ ಚಾಮರಾಜ ಕ್ಷೇತ್ರದಲ್ಲಿ ಅಭಿಯಾನ ಮಾಡಲಾಗುತ್ತಿದೆ.

ಇದಕ್ಕೆ ಇಂದು ಪ್ರಚಾರದ ವಾಹನಗಳಿಗೆ ಚಾಲನೆ ನೀಡಲಾಗಿದೆ. ಬಿಜೆಪಿ ಕಾರ್ಯಕರ್ತರು ಮತಗಟ್ಟೆಗಳಲ್ಲಿ ಅರ್ಜಿ ಭರ್ತಿ ಮಾಡಲು ಸಹಾಯ ಮಾಡುತ್ತಾರೆ. ಓಟರ್ ಐಡಿ ಇಲ್ಲದದ್ರೆ ಮತದಾನದ ಹಕ್ಕು ಇರುವುದಿಲ್ಲ. ಎಲ್ಲರೂ ಎಆರ್ ಪ್ರಕ್ರಿಯೆಲ್ಲಿ ಭಾಗಿಯಾಗಬೇಕೆಂದು ಮನವಿ ಮಾಡಿದರು.

ಬಿಜೆಪಿ ಶಾಸಕನಿಗೆ ಮೊಟ್ಟೆ ಹೊಡೆದ ವಿಚಾರವಾಗಿ ಪ್ರತಿಕ್ರಯಿಸಿ, ಕಾಂಗ್ರೆಸ್ ಕಚೇರಿ ಹೋದರೆ ಮೊಟ್ಟೆ ಹೊಡಿತ್ತೀರಾ, ಇದು ಒಳ್ಳೆಯ ಬೆಳವಣಿಗೆಯಲ್ಲ. ಕಾಂಗ್ರೆಸ್ ಗೆ ಇರುವ ಫಾಲೋವರ್ಸ್ ಗಿಂತ ನನೊಬ್ಬನಿಗೆ ಹೆಚ್ಚು ಫಾಲೋವರ್ಸ್ ಸೋಶಿಯಲ್ ಮೀಡಿಯಾದಲ್ಲಿ ಇದ್ದಾರೆ. ತುರ್ತು ಪರಿಸ್ಥಿತಿ ತರುವ ರೀತಿ ನಡೆದುಕೊಳ್ಳುತ್ತಿದ್ದೀರಾ. ಇದನ್ನಲ್ಲಾ ಬಿಟ್ಟು ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸ ಮಾಡಿ ಎಂದರು.

ಪ್ರತಾಪ್ ಸಿಂಹ ವಿರುದ್ಧ ಕೈ ಕಾರ್ಯಕರ್ತರು ದಿಕ್ಕಾರ ಕೂಗಿದ ವಿಚಾರವಾಗಿ ಪ್ರತಿಕ್ರಯಿಸಿ, ನಾನು 12 ವರ್ಷದಿಂದ ಇದೆವಲ್ಲವನ್ನ ಎದುರಿಸಿದ್ದೇನೆ. ಇಂತಹ ವಿಚಾರಕ್ಕೆ ನಾನು ಜಗ್ಗದು ಇಲ್ಲಾ ಬಗ್ಗೋದು ಇಲ್ಲಾ. ಹರೀಶ್ ಗೌಡರೇ ನಿಮಗೆ ಒಂದು ಮುಕ್ಕಾಲು ವರ್ಷ ಅಧಿಕಾರ ಇದೆ. ಈಗಲಾದರೂ ಚಾಮರಾಜ ಕ್ಷೇತ್ರದ ಅಭಿವೃದ್ಧಿ ಮಾಡಿ. ಗ್ಯಾಸ್ ಪೈಪ್ ಲೈನ್ ಕೊಡಿ ಅಂದ್ರೆ ಪಾಲಿಕೆಗೆ ನಷ್ಟ ಆಗುತ್ತೆ ಅಂತೀರಾ, ಚಿಲ್ಲರೆ ರಾಜಕಾರಣಗಳನ್ನ ಬಿಡಿ ಎಂದರು. ಕಾರ್ಯಕ್ರಮದಲ್ಲಿ ನಗರಪಾಲಿಕೆ ಮಾಜಿ ಸದಸ್ಯರಾದ ಪ್ರಶಾಂತ್ ಗೌಡ, ಸತೀಶ್, ಎಂ.ಯು.ಸುಬ್ಬಯ್ಯ, ಬಿಜೆಪಿ ಮುಖಂಡರಾದ ದಿನೇಶ್ ಗೌಡ, ಕಿರಣ್ ಗೌಡ ಸೇರಿ ಅನೇಕರು ಭಾಗಿಯಾಗಿದ್ದರು.

### ಕಾಂಗ್ರೆಸ್ ನವರು ರಕ್ತ ಹಿರೋ ತಿಗಣೆ ರೀತಿ ಆಗಿದ್ದೀರಾ

**ಕಾಂಗ್ರೆಸ್ ನವರು ರಕ್ತ ಹಿರೋ ತಿಗಣೆ ರೀತಿ ಆಗಿದ್ದೀರಾ. ತಿಗಣೆಗಳು ಹೋಗಿ ಜಿರಳೆಗಳ ಜೊತೆ ಸೇರಿಕೊಂಡಿದ್ದೀರಾ. ರಾಜ್ಯದ ಸಿಎಂ ಕೂಡ ಅಲ್ಲೇ ಹೋಗಿ ಕುಳಿತಿದರು. ವ್ಯವಸ್ಥೆಯಲ್ಲಿ ಲೋಪ ಆಗುತ್ತದೆ. ಪ್ರಶ್ನೆ ಪತ್ರಿಕೆ ತಯಾರು ಮಾಡುವರು ಸೇರಿ ಕೆಲವೊಂದು ವಿಭಾಗದಲ್ಲಿ ಎಷ್ಟೇ ಕಟ್ಟಿ ನಿಟ್ಟಿನ ಕ್ರಮತೆಗೆದುಕೊಂಡರು ಕೆಲವೊಮ್ಮೆ ಲೋಪವಾಗುತ್ತದೆ. ರಾಜ್ಯದಲ್ಲಿ ಕಿಮ್ಮನೇ ರತ್ನಾಕರ್ ಸಚಿವರಾಗಿದ್ದಾಗ ಎಷ್ಟು ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾತ್ತು. ಆಗ ಅವರ ಮೇಲೆ ಕ್ರಮ ಆಯ್ತು? ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದು ಕೂಡ ಮೋದಿ ತಪ್ಪಲ್ಲ. ಮೋದಿ ನೀಟ್ ಮೂಲಕ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದಾರೆ. ಕಾಂಗ್ರೆಸ್ ನವರು ನೀವೆ ಯಾಕೆ ಹೋರಾಟ ರೂಪಿಸುತ್ತಿಲ್ಲ. ಸದನದಲ್ಲಿ ನಿಮಗೆ ಮಾತನಾಡುವ ಹಕ್ಕಿದೆ, ಅಲ್ಲಿ ಮಾತನಾಡಿ ಎಂದರು.**

**ಮೊದಲನೇ ಪುಟದಿಂದ**

## ಅರಾಜಕತೆ ಸೃಷ್ಟಿಗೆ ಕಾಂಗ್ರೆಸ್, ವಿಪಕ್ಷಗಳ ಯತ್ನ: ವಿಜಯೇಂದ್ರ

13 ಮಂದಿ ಆರೋಪಿಗಳನ್ನು ಬಂಧಿಸಿ ಸೂಕ್ತ ಕಾನೂನು ಕ್ರಮ ಕೈಗೊಂಡಿವೆ ಎಂದು ಹೇಳಿದರು.

ಯುವಜನತೆ ಈ ದೇಶದ ಭವಿಷ್ಯ. ವಿರೋಧ ಪಕ್ಷಗಳು ಇಂತಹ ದುಷ್ಟ ರಾಜಕೀಯವನ್ನು ಬದಿಗಿಟ್ಟು, ಸಂಸತ್ತಿನ ಅಧಿವೇಶನದಲ್ಲಿ ಸಕಾರಾತ್ಮಕವಾಗಿ ಚರ್ಚೆಗೆ ಬರಬೇಕೆಂದು ಆಗ್ರಹಿಸಿದರು.

## ನನ್ನದು ಪರಿಶುದ್ಧ ಆಡಳಿತ

ಎಂದು ಹೇಳುವುದಿಲ್ಲ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು. ಬಿಜೆಪಿಯವರು ಹಿಂದೆ ಏನೇನು ಮಾಡಿದ್ದರು ಎಂದು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಲಾಠಿ, ಮಚ್ಚು, ರೈಫಲ್ ಗಳು ಸಿಕ್ಕಿದ್ದವು. ಪೊನ್ನಂಪೇಟೆ ಶಾಲೆಯ ಆವರಣದಲ್ಲಿ ರೈಫಲ್ ತರಬೇತಿ ನೀಡಿದ್ದರು. ನಿಮ್ಮದೂ ಇತಿಹಾಸಗಳಿವೆ ಎಂದು ತಿರುಗೇಟು ನೀಡಿದರು.

## ಮೋದಿ ಆಗ ಏಕೆ ಮಾತನಾಡಲಿಲ್ಲ?

ಪ್ರಶ್ನೆ ಪತ್ರಿಕೆ ಸೋರಿಕೆಯಾದಾಗ ಇಂತಹ ಘಟನೆ ಬಗ್ಗೆ ಯಾರಾದರೂ ಜವಾಬ್ದಾರಿ ಹೊರಬೇಕಲ್ಲವೇ? ಇದಕ್ಕೆ ಯಾರು ಹೊಣೆ? ಎಂದು ಕಿಡಿಕಾರಿದರು.

ಪ್ರಶ್ನೆ ಪತ್ರಿಕೆ ಸೋರಿಕೆ ಬಗ್ಗೆ ಸಂಸತ್ತಿನಲ್ಲಿ ಚರ್ಚೆಯಾಗಲಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲವೂ ಚರ್ಚೆಯಾಗಬೇಕು. ನಾವು ಯುವಕರ ಭವಿಷ್ಯದ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ಈಗಾಗಲೇ ಸುಮಾರು 100ಕ್ಕೂ ಹೆಚ್ಚು ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿವೆ ಎಂದರು.

ಪ್ರಶ್ನೆ ಪತ್ರಿಕೆ ಸೋರಿಕೆ ರಾಜಕೀಯ ಪಕ್ಷಗಳ ವಿಚಾರವಲ್ಲ. ದೇಶದ ಭವಿಷ್ಯದ ವಿಚಾರ. ಪಾರದರ್ಶಕ, ಶಕ್ತಿಯುತ, ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿ. ಯಾವುದೇ ಪರೀಕ್ಷೆಗಳು ನಡೆದರೂ ಪಾರದರ್ಶಕವಾಗಿರಬೇಕು. ಶಿಕ್ಷಣದ ಗುಣಮಟ್ಟವನ್ನು ನಾವು ಕಾಪಾಡಬೇಕಿದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಸಚಿವ ಸಂಪುಟ ವಿಸ್ತರಣೆ ಸದ್ಯದಲ್ಲಿಯೇ ಆಗುತ್ತದೆ. ಕಾಂಗ್ರೆಸ್ ನಾಯಕರು ದೆಹಲಿಯಲ್ಲಿ ಬ್ಯುಸಿಯಾಗಿದ್ದಾರೆ. ಅವರು ಕರೆದ ಕೂಡಲೇ ಹೋಗುತ್ತೇನೆ. ಪಟ್ಟಿ ಸಿದ್ಧವಾಗಿದೆ, ಎಲ್ಲವೂ ಸುಸೂತ್ರವಾಗಿ ನಡೆಯುತ್ತದೆ ಎಂದರು.

## ಕುಡಿವ ನೀರಿನ ಕೊರತೆ ಆಗದಂತೆ ಕೈಗೊಳ್ಳಿ: ಡಾ.ಎಸ್.ಸೆಲ್ವಕುಮಾರ್

**ಮೈಸೂರು:** ಕುಡಿಯುವ ನೀರಿಗೆ ಯಾವುದೇ ಕೊರತೆ ಆಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಿ ಎಂದು ಎಂದು

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಡಾ ಎಸ್ ಸೆಲ್ವಕುಮಾರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ನ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಬರ ನಿರ್ವಹಣೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕುಡಿಯುವ ನೀರಿಗೆ ಯಾವುದೇ ಕೊರತೆ ಆಗದಂತೆ ವ್ಯವಸ್ಥೆ ಮಾಡಿಕೊಳ್ಳಿ. ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಗ್ರಾಮಗಳನ್ನು ಪಟ್ಟಿ ಮಾಡಿಕೊಂಡು, ನೀರಿನ ಮೂಲಗಳನ್ನು ಗುರುತಿಸಿಕೊಳ್ಳಿ. ಅಗತ್ಯ ಇರುವ ಕಡೆ ಖಾಸಗಿ ಬೋರ್ವೆಲ್ ಹಾಗೂ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಳೆ ಕೊರತೆ ಉಂಟಾಗಿರುವುದರಿಂದ ಬಿತ್ತನೆಯೂ ಕಡಿಮೆ ಆಗಿದೆ. ಬಿತ್ತನೆ ಆಗಿರುವ ಬೆಳೆಗಳಲ್ಲಿ ಕುಂಠಿತ ಆಗಿ ಇಳುವರಿಯೂ ಕಡಿಮೆ ಆಗಿದೆ. ಮುಂದಿನ ದಿನಗಳಲ್ಲಿ ಮಳೆ ಕೊರತೆ ಉಂಟಾದರೂ ಜಾನು



ವಾರುಗಳಿಗೆ ಮೇವು ಕೊರತೆ ಆಗದಂತೆ ಮೇವು ಬೆಳೆಯಲು ಅಗತ್ಯ ಸಂಖ್ಯೆಯ ಮೇವು ಕಿಟ್ ಗಳನ್ನು ವಿತರಣೆ ಮಾಡಿ. ಸಾಕಷ್ಟು ರಸಗೊಬ್ಬರದ ದಾಸ್ತಾನು ಇಟ್ಟುಕೊಳ್ಳಿ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರಿಗೆ ಸೂಚನೆ ನೀಡಿದರು.

ಕೆಆರ್‌ಎಸ್‌ನಲ್ಲಿ 17 ಟಿಎಂಸಿ, ಇದೆ ಕಬಿನಿಯಲ್ಲಿ 13 ಟಿಎಂಸಿ ನೀರು ಸಂಗ್ರಹವಿದೆ. ಹೇಮಾವತಿಯ ಗೊರೂರು ಡ್ಯಾಂ ನಲ್ಲಿ 21 ಟಿಎಂಸಿ ನೀರು ಇದೆ. 16 ಗ್ರಾಮಗಳಲ್ಲಿ ಟ್ಯಾಂಕರ್ ಮತ್ತು ಖಾಸಗಿ ಬೋರ್ವೆಲ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ರಮ್ಮನಹಳ್ಳಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಟ್ಯಾಂಕರ್ ಮೂಲಕ ನೀರು ನೀಡಲಾಗುತ್ತಿದೆ. ಪ್ರಸ್ತುತ ಇರುವ ನೀರು ಕುಡಿಯುವ ನೀರಿಗೆ ಸಾಕಾಗುತ್ತದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಯುಕೇಶ್ ಕುಮಾರ್, ಮಹಾನಗರ ಪಾಲಿಕೆಯ ಆಯುಕ್ತೆ ಎಂ.ಕೆ.ಸವಿತಾ ಸೇರಿ ಉಪಸ್ಥಿತರಿದ್ದರು.

# ವಿದ್ಯುತ್ ಮೂಲಸೌಕರ್ಯ ಯೋಜನೆಗೆ ಚಾಲನೆ

**ಮೈಸೂರು:** ರೈತರ ಮುಖದಲ್ಲಿ ಮಂದಹಾಸ ಮೂಡಿಸಿದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಮೈಸೂರು ಜಿಲ್ಲೆಯ ವಿದ್ಯುತ್ ಮೂಲಸೌಕರ್ಯ ಕಾಮಗಾರಿಗೆ ಚಾಲನೆ ನೀಡಲಾಯಿತು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ), ಸ್ಥಳೀಯ ರೈತರು, ರೈತ ಸಂಘದ ಮುಖಂಡರು ಹಾಗೂ ಪೊಲೀಸ್ ಇಲಾಖೆ ಸಹಕಾರದೊಂದಿಗೆ ಭೂ ಮಾಲೀಕರಿಗೆ ಪರಿಹಾರದ ಡಿಡಿ ವಿತರಣೆ ಮಾಡಿ, ಸ್ಥಗಿತಗೊಂಡಿದ್ದ ಕಾಮಗಾರಿಗೆ ಗುರುವಾರ ಚಾಲನೆ ನೀಡಲಾಯಿತು. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ), ಮೈಸೂರು ಜಿಲ್ಲೆ ಮೂಲಕ ಮೈಸೂರು ತಾಲೂಕಿನ 220ಕೆವಿ ಕಡಕೊಳ-ವಾಜಮಂಗಲ ಮಾರ್ಗದ ವಿದ್ಯುತ್ ಸಂಪರ್ಕ ಮೂಲಸೌಕರ್ಯ ಕಾಮಗಾರಿಯನ್ನು 2011ರಲ್ಲಿ ಕೈಗೆತ್ತಿಕೊಂಡಿತ್ತು, ಕಾರಣಾಂತರಗಳಿಂದ ನೆನೆಗುದಿಗೆ ಬಿದ್ದಿತ್ತು. ನಿಗಮದ ಸತತ ಪ್ರಯತ್ನ ಹಾಗೂ ಭೂ ಮಾಲೀಕರು ಹಾಗೂ ರೈತರ ಜೊತೆಗಿನ ಸೌಹಾರ್ದಯುತ ಸಂವಹನದ ಮೂಲಕ ಯೋಜನೆ ಪೂರ್ಣಗೊಳ್ಳಲು ಸಹಕಾರ ದೊರೆತಿದೆ. ಈ ಮೂಲಕ ನಿಗಮ



ಕಾಮಗಾರಿಯನ್ನು ಆರಂಭಿಸಿದ್ದು, 40-50 ದಿನಗಳೊಳಗೆ ವಿದ್ಯುತ್ ಮಾರ್ಗದ ಲೈನ್ ಜೋಡಣೆ ಕಾರ್ಯ ಪೂರ್ಣಗೊಳ್ಳಲಿದೆ.

ನಿಗಮವು 2011 ರಲ್ಲಿ ಕಡಕೊಳ ಹಾಗೂ ವಾಜಮಂಗಲ ನಡುವೆ 220 ಕೆವಿ ವಿದ್ಯುತ್ ಸಂಪರ್ಕ ಯೋಜನೆಯನ್ನು ರೂಪಿಸತ್ತು, ಯೋಜನೆಯಂತೆ 83 ವಿದ್ಯುತ್ ಟವರ್‌ಗಳನ್ನು ನಿರ್ಮಿಸಲಾಗಿತ್ತು, ವಿದ್ಯುತ್ ಲೈನ್ ಜೋಡಿಸುವ ಕಾಮಗಾರಿ ಉಳಿಕೆಯಾಗಿತ್ತು. ಈ ನಡುವೆ ಭೂ ಮಾಲೀಕರು ಹಾಗೂ ರೈತರು ಹೆಚ್ಚಿನ ಪರಿಹಾರಕ್ಕೆ ಮನವಿ ಮಾಡಿದ್ದರು. ಇಂಧನ ಇಲಾಖೆ ಮಾನ್ಯ ಇಂಧನ ಸಚಿವರ ಕೆ.ಜೆ.ಜಾರ್ಜ್ ಅವರ ನಿರ್ದೇಶನದ ಮೇರೆಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಅವರು ಸೂಕ್ತ ಪರಿಹಾರವನ್ನು ಭೂ ಮಾಲೀಕರು ಹಾಗೂ ರೈತರರಿಗೆ ಒದಗಿಸಿಕೊಡುವ ಮೂಲಕ ಸ್ಥಗಿತಗೊಂಡಿದ್ದ ಕಾಮಗಾರಿಯನ್ನು ಪೂರ್ಣಗೊಳಿಸಲು ಸಹಕಾರ ಕೋರಿದ್ದರು.

ನಿಗಮದ ಸೌಹಾರ್ದಯುತ ನಡೆಗೆ ಭೂಮಾಲೀಕರು ಹಾಗೂ ರೈತರು ಹರ್ಷವ್ಯಕ್ತಪಡಿಸಿದ್ದು, ನಿಗಮದ ಯೋಜನೆಗಳಿಗೆ ಪೂರ್ಣ ಸಹಕಾರ ನೀಡುವ ಭರವಸೆ ನೀಡಿದ್ದಾರೆ. ವಿದ್ಯುತ್ ಯೋಜನೆಗಳು, ಕೃಷಿ ಬೆಳವಣಿಗೆ ಹಾಗೂ ಸಮಗ್ರ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಸ್ಪಂದಿಸಿದ ನಿಗಮಕ್ಕೆ ಧನ್ಯವಾದ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕವಿಪ್ರನಿನಿಯ ಕಾರ್ಯನಿರ್ವಾಹಕ ಇಂಜಿನಿಯರ್ ಪೂರ್ಣಚಂದ್ರ ತೇಜಸ್ವಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ವಿನೋದ್, ಸಹಾಯಕ ಇಂಜಿನಿಯರ್ ನವೀನ್, ಚಾವಿಸನಿನಿ ಅಧಿಕಾರಿಗಳು, ಸಿಬ್ಬಂದಿ, ಮೈಸೂರು ದಕ್ಷಿಣ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ಸುನೀಲ್, ನಿಗಮದ ಮೈಸೂರು ಬೋರ್ಡ್ ವಕೀಲ ಜಗದೀಶ್ ಇತರರು ಉಪಸ್ಥಿತರಿದ್ದರು.

> **ಇಂಧನ ಇಲಾಖೆಯ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವಿದ್ಯುತ್ ಮೂಲಸೌಕರ್ಯ ನಿರ್ಮಾಣದಲ್ಲಿ ಮಹತ್ವದ ಮೈಲಿಗಲ್ಲು ಸಾಧಿಸುತ್ತಿದೆ. ಈ ನಿಟ್ಟಿನಲ್ಲಿ ಭೂಮಾಲೀಕರು ಹಾಗೂ ರೈತರ ಸಹಕಾರ ಬಹಳ ಮುಖ್ಯವಾಗಲಿದೆ. ರೈತರಿಗೆ ತೊಂದರೆಯಾಗದಂತೆ ಪ್ರಸರಣ ನಿಗಮ ಪರಿಹಾರ ಮತ್ತು ಅಗತ್ಯ ನೆರವು ನೀಡಲು ಸದಾ ಸಿದ್ಧವಿದೆ ನಮ್ಮದೊಂದಿಗೆ ವಿಶ್ವಾಸವಿರಿಸಿ ಸಹಕರಿಸಿದರೆ.**
> **ಕೆ.ಜೆ.ಜಾರ್ಜ್**
> ಇಂಧನ ಹಾಗೂ ಪ್ರವಾಸೋದ್ಯಮ ಸಚಿವ

> **ಭೂ ಮಾಲೀಕರು ಹಾಗೂ ರೈತರು ನಿಗಮದ ಜೊತೆ ಸಹಕಾರ ನೀಡಿದರೆ ಬರಲಿರುವ ದಿನಗಳಲ್ಲಿ ವೇಗವಾಗಿ ಕಾಮಗಾರಿ ಮುಗಿಸಿ ರೈತರಿಗೆ ಹಾಗೂ ಸಾರ್ವಜನಿಕರಿಗೆ ಗುಣಮಟ್ಟದ ವಿದ್ಯುತ್ ಸೇವೆ ಒದಗಿಸಲಾಗುವುದು.**
> **ರಮೇಶ್** ಅಧೀಕ್ಷಕ ಇಂಜಿನಿಯರ್, ಯೋಜನೆಗಳು-ಕವಿಪ್ರನಿನಿ, ಮೈಸೂರು

**ಮೊದಲನೇ ಪುಟದಿಂದ**

## ಬಿಜೆಪಿ ಗೂಂಡಾಗಳಿಂದ ಕಲ್ಲು ತೂರಾಟ

ತೂರಾಟ ನಮ್ಮ ಕಡೆಯಿಂದ ನಡೆದಿಲ್ಲ. ಬಿಜೆಪಿ ಗೂಂಡಾಗಳು ಈ ಕೃತ್ಯ ಎಸಗುತ್ತಿದ್ದಾರೆ. ಪೊಲೀಸರು ಕಲ್ಲುಗಳನ್ನು ತುಂಬಿರುವ ಟ್ರಕ್‌ಗಳನ್ನು ತರುತ್ತಿದ್ದಾರೆ. ಬಿಜೆಪಿಯ ಗೂಂಡಾಗಳು ಬಂದು ಕಲ್ಲು ತೂರಾಟ ನಡೆಸಿದ ನಂತರ ಸಿಜೆಪಿ ಕಾರ್ಯಕರ್ತರ ಹೆಸರನ್ನು ಕೆಡಿಸುತ್ತಿದ್ದಾರೆ ಎಂದು ದೂರಿದರು.

ನಾವು ಕಳೆದ ಒಂದು ತಿಂಗಳಿನಿಂದ ಶಾಂತಿಯುತವಾಗಿ ಧರಣಿ ಕುಳಿತಿದ್ದೇವೆ. ಈ ಒಂದು ತಿಂಗಳಲ್ಲಿ ಇಂತಹ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಆದರೆ ಈಗ ಈ ಹೋರಾಟ ಬೃಹತ್ ರೂಪ ಪಡೆದುಕೊಳ್ಳುತ್ತಿದ್ದಂತೆ ಜನರನ್ನು ಪ್ರಚೋದಿಸಲು ಬಿಜೆಪಿಯವರು ಹೊರಗಿನಿಂದ ಗೂಂಡಾಗಳನ್ನು ಕಳುಹಿಸುತ್ತಿದ್ದಾರೆ ಎಂದು ಆರೋಪಿಸಿದರು.

ಆದ್ದರಿಂದ ನಮ್ಮ ಬೇಡಿಕೆಗಳು ಈಡೇರುವವರೆಗೂ ನಮ್ಮ ಹೋರಾಟ ಮುಂದುವರಿಯುತ್ತದೆ. ಆದರೆ ಸೋನಮ್ ಅವರ ಜೀವ ನಮಗೆ ಅತ್ಯಂತ ಅಮೂಲ್ಯವಾಗಿದೆ. ಅವರು ತಮ್ಮ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಅಭಿಜಿತ್ ದೀಪ್ಕೆ ಮನವಿ ಮಾಡಿದರು.

## ಎಸ್.ಐ.ಆರ್: ಮತದಾರರ ಪಟ್ಟಿಯ ಪಾರದರ್ಶಕ ಪರಿಷ್ಕರಣೆ

# ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಹಕಾರ ಅಗತ್ಯ: ಜಿಲ್ಲಾಧಿಕಾರಿ

**ಚಾಮರಾಜನಗರ:** ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯದಲ್ಲಿ ಮತದಾರರ ಪಟ್ಟಿಯ ಪಾರದರ್ಶಕ ತಯಾರಿಕೆಗೆ ಪ್ರಮುಖ ರಾಜಕೀಯ ಪಕ್ಷಗಳ ಸಹಕಾರ ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ-2026ರ ಸಂಬಂಧ ಗಣತಿ ನಮೂನೆ ವಿತರಣೆ ಹಾಗೂ ಮತದಾರರ ಗಣಕೀಕರಣ ಕೆಲಸ ಕಾರ್ಯಗಳ ಪ್ರಗತಿ ಕುರಿತು ನೊಂದಾಯಿತ ಮಾನ್ಯತೆ ಪಡೆದ ರಾಷ್ಟ್ರೀಯ ಹಾಗೂ ರಾಜ್ಯ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾರತ ಚುನಾವಣಾ ಆಯೋಗದ ನಿರ್ದೇಶನದನ್ವಯ ಜಿಲ್ಲೆಯಲ್ಲಿ ವೇಗವಾಗಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಪ್ರಗತಿಯಲ್ಲಿದ್ದು, ಮತದಾರರಿಗೆ ಗಣತಿ ನಮೂನೆ ವಿತರಣೆ ಹಾಗೂ ಗಣಕೀಕರಣ ಪ್ರಕ್ರಿಯೆಯಲ್ಲಿ ಜಿಲ್ಲೆ ಮುಂಚೂಣಿಯಲ್ಲಿದೆ. ಜಿಲ್ಲೆಯಲ್ಲಿ ಪುರುಷರು, ಮಹಿಳೆಯರು ಹಾಗೂ ಇತರರು ಸೇರಿದಂತೆ ಒಟ್ಟು 8,80,224 ಮತದಾರರಿದ್ದು, ಈಗಾಗಲೇ ಎಲ್ಲ ಮತದಾರರಿಗೆ ಗಣತಿ ನಮೂನೆಗಳನ್ನು ವಿತರಿಸಲಾಗಿದೆ. ಈ ಪೈಕಿ ಜುಲೈ 22ರ ಬೆಳಿಗ್ಗೆ 8 ಗಂಟೆಯವರೆಗೆ 6,91,988 ನಮೂನೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ ಗಣತಿ ನಮೂನೆ ವಿತರಣೆ ಸಂದರ್ಭದಲ್ಲಿ ಕಂಡುಬಂದಿರುವ ಗೈರು, ಸ್ಥಳಾಂತರ, ನಿಧನ, 2 ಕಡೆ ಹೆಸರು ಇರುವವರು ಹಾಗೂ ಇತರೆ ಕಾರಣಗಳಿರುವ ಒಟ್ಟು 50,099 ಮತದಾರರನ್ನು ಆಯಾ ವಿಧಾನಸಭಾ ಕ್ಷೇತ್ರದ ಮತಗಟ್ಟೆವಾರು ಗುರುತಿಸ ಲಾಗಿದೆ. ನೊಂದಾಯಿತ ಮಾನ್ಯತೆ ಪಡೆದ ರಾಷ್ಟ್ರೀಯ ಹಾಗೂ ರಾಜ್ಯ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಈ ಬಗ್ಗೆ ತಮ್ಮ ಸಲಹೆ, ಅಭಿಪ್ರಾಯ ನೀಡಿದ್ದಲ್ಲಿ ನಿಯ ಮಾನುಸಾರ ಪರಿಶೀಲಿಸಲಾಗುವುದು. ಯಾವುದೇ ಅರ್ಹ ಮತದಾರರು ಮತದಾರರ ಪಟ್ಟಿ ಸೇರ್ಪಡೆಯಿಂದ ಬಿಟ್ಟುಹೋಗದಂತೆ ತಡೆಯುವುದು ಪರಿಷ್ಕರಣೆ ಕಾರ್ಯದ ಮುಖ್ಯ ಉದ್ದೇಶವಾಗಿದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.



### ಗಣತಿ ನಮೂನೆಗಳ ವಿತರಣೆಯಲ್ಲಿ ವ್ಯತ್ಯಾಸವಾಗಬಾರದು

**ಮತಗಟ್ಟೆವಾರು ಗಣತಿ ನಮೂನೆಗಳ ವಿತರಣೆಯಲ್ಲಿ ವ್ಯತ್ಯಾಸವಾಗಬಾರದು. ಆಯಾ ಮತಗಟ್ಟೆಗಳಿಗೆ ಸ್ಥಳೀಯ ಮತಗಟ್ಟೆ ಅಧಿಕಾರಿಗಳನ್ನೆ ನಿಯೋಜಿಸಬೇಕು. 5ರಿಂದ 10 ವಾಗಳಿಗೆ ಸಹಾಯವಾಣಿ ತೆರೆಯಬೇಕು. 2004ರಲ್ಲಿ ಮತದಾನ ಮಾಡಿದ ಕೆಲವರ ಗಣತಿ ನಮೂನೆ ಶೀಘ್ರವಾಗಿ ಜನರೇಟ್ ಆಗಬೇಕು. 18 ವರ್ಷ ತುಂಬಿದ ಹೊಸಬರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲು ಫಾರಂ-6 ಅನ್ನು ಮತಗಟ್ಟೆ ಅಧಿಕಾರಿಗಳು ತ್ವರಿತವಾಗಿ ವಿತರಿಸಬೇಕು. ಜಿಲ್ಲೆಯ ಹನೂರು ಭಾಗದಲ್ಲಿ (2 ಕಡೆ ಹೆಸರು ಇರುವ ಪಟ್ಟಿ) ಡೂಪ್ಲಿಕೇಷನ್ ಆಗುತ್ತಿರುವುದನ್ನು ಪರಿಶೀಲಿಸಿ ಸರಿಪಡಿಸಬೇಕು. ಗಣತಿ ನಮೂನೆಗಳು ಸಂಪೂರ್ಣ ವಿತರಣೆಯಾಗಿದೆ ಎಂದು ಹೇಳಲಾಗುತ್ತಿದೆ. ಕೆಲವೆಡೆ ನಮೂನೆಗಳು ವಿತರಣೆಯಾಗಿಲ್ಲ ಎಂಬುದು ಸೇರಿದಂತೆ ಇತರೆ ಅಭಿಪ್ರಾಯ, ಸಲಹೆಗಳನ್ನು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಭೆಯಲ್ಲಿ ಮಂಡಿಸಿದರು.**

ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ಕೆ ಅನುಕೂಲವಾಗುವಂತೆ ತೆರೆಯಲಾಗಿರುವ ಸಹಾಯವಾಣಿ ಮಾದರಿಯಲ್ಲಿ ಫೆಸಿಲಿಟಿ ಕೇಂದ್ರಗಳನ್ನು ತೆರೆಯಲಾಗಿದೆ. ಎಲ್ಲಾ ತಾಲೂಕುಗಳ ಬಿ.ಎಲ್.ಓಗಳು ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಪ್ರತಿತಿಂಗಳು ಸಭೆ ನಡೆಸಿ ಸಲಹೆ, ಸಹಕಾರ ಪಡೆಯುವಂತೆ ತಿಳಿಸಲಾಗಿದೆ. ಈಗಾಗಲೇ ಗುರುತಿಸಲಾಗಿರುವ ಮತದಾರರ ವಿವರಗಳನ್ನು ಖಚಿತಪಡಿಸಿಕೊಂಡು ಮತಗಟ್ಟೆ ಅಧಿಕಾರಿಗಳಿಗೆ (ಬಿ.ಎಲ್.ಓ) ಮಾಹಿತಿ ನೀಡಲು ತಾವು ನೇಮಕ ಮಾಡಿರುವ ಬಿ.ಎಲ್.ಎ-2 ಗಳಿಗೆ ಅವಶ್ಯ ನಿರ್ದೇಶನ ನೀಡುವಂತೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

ಇದೇ ವೇಳೆ ಮಾತನಾಡಿದ ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ಅವರು ಮತದಾರರಿಗೆ ಗಣತಿ ನಮೂನೆ ಹಂಚಿಕೆ ಹಾಗೂ ಗಣಕೀಕರಣ ಪ್ರಕ್ರಿಯೆಯು ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ವೇಗವಾಗಿ ನಡೆಯುತ್ತಿದೆ. ನಗರಪ್ರದೇಶದಲ್ಲಿ ಅಲ್ಪ ವಿಳಂಬವಾಗುತ್ತಿದೆ. ಮುಂದಿನ ದಿನಗಳಲ್ಲಿ ಇದನ್ನು ಸರಿಪಡಿಸಲಾಗುವುದು ಎಲ್ಲಾ ಬಿ.ಎಲ್.ಓ ಗಳು ಸ್ವಯಂ ಪ್ರೇರಣೆಯಿಂದ ಮತದಾರರಿಗೆ ಕರೆಮಾಡಿ ಗಣತಿ ನಮೂನೆಗಳನ್ನು ತಲುಪಿಸುವ ಕೆಲಸ ಮಾಡುತ್ತಿದ್ದಾರೆ. ಜಿಲ್ಲೆಯಾದ್ಯಂತ ಬಿ.ಎಲ್.ಓ ಮೇಲ್ವಿಚಾರಕರು ಕ್ರಿಯಾಶೀಲತೆಯಿಂದ ಪರಿಷ್ಕರಣೆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರು.

ನಗರಸಭೆ ಪೌರಾಯುಕ್ತರಾದ ಪರಶುರಾಮ ಛಲವಾದಿ, ನೊಂದಾಯಿತ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಎಚ್.ಎಸ್. ತೋಂಟದಾರ್ಯಸ್ವಾಮಿ, ಎನ್. ನಾಗಯ್ಯ, ಎಸ್. ಬಾಲಸುಬ್ರಮಣ್ಯ, ಶಕುಂತಲ, ಆರ್. ಪುರುಷೋತ್ತಮ, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

### ಅಭಿಪ್ರಾಯಗಳನ್ನು ಆಲಿಸಿದ ಡಿಸಿ ಶ್ರೀರೂಪ

ಸಲಹೆ, ಅಭಿಪ್ರಾಯಗಳನ್ನು ಆಲಿಸಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಪರಿಷ್ಕೃತ ವೇಳಾಪಟ್ಟಿ ಈಗಾಗಲೇ ಪ್ರಕಟವಾಗಿದ್ದು, ಕರಡು ಮತದಾರರ ಪಟ್ಟಿ ಆಗಸ್ಟ್ 17ರಂದು ಪ್ರಕಟವಾಗಲಿದೆ. ನಂತರ ಈಗಾಗಲೇ ಗುರುತಿಸಲಾಗಿರುವ ಗೈರು, ಸ್ಥಳಾಂತರ, ನಿಧನ, 2 ಕಡೆ ಹೆಸರು ಇರುವವರು ಬಗ್ಗೆ ಪುನರ್ ಪರಿಶೀಲನೆ ನಡೆಸುವಂತೆ ಎಲ್ಲಾ ಮತಗಟ್ಟೆ ಅಧಿಕಾರಿಗಳಿಗೆ ಸೂಚಿಸಲಾಗುವುದು. ಅಲ್ಲದೆ ಗಣತಿ ನಮೂನೆಗಳನ್ನು ಮತದಾರರಿಗೆ ವಿತರಿಸುವ ಸಂದರ್ಭದಲ್ಲಿ ಫಾರಂ-6 ಅನ್ನು 18 ವರ್ಷ ತುಂಬಿದ ಅರ್ಹರಿಗೆ ವಿತರಿಸುವಂತೆ ಎಲ್ಲಾ ಬಿ.ಎಲ್.ಓ ಗಳಿಗೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ ಎಂದು ಜಿಲ್ಲಾಧಿಕಾರಿಯವರು ಹೇಳಿದರು.

## ಕೇಬಲ್ ಅಳವಡಿಸಲು ರಸ್ತೆ ಗುಂಡಿ



**ಗುಂಡ್ಲುಪೇಟೆ:** ಲೋಕೋಪಯೋಗಿ ಇಲಾಖೆ ಪೂರ್ವಾನುಮತಿ ಪಡೆಯದೆ ಬಿಎಸ್‌ಎನ್‌ಎಲ್ ನಿಗಮ ವತಿಯಿಂದ ನೇಮಿಸಲ್ಪಟ್ಟಿರುವ ಗುತ್ತಿಗೆದಾರರು ಕೇಬಲ್ ಅಳವಡಿಸಲು ರಸ್ತೆಯನ್ನು ಕತ್ತರಿಸುತ್ತಿರುವುದು ಕಂಡುಬಂದಿರುತ್ತದೆ.

ಈ ರಸ್ತೆಯು ರಾಜ್ಯ ಹೆದ್ದಾರಿ ರಸ್ತೆಯಾಗಿದ್ದು ಹಾಗೂ ಗ್ರಾಮೀಣ ರಸ್ತೆಗಳಾಗಿದ್ದು ನೇಮಿಸಿರುವ ಗುತ್ತಿಗೆದಾರರು ರಸ್ತೆಯ ಕ್ಯಾರೇಜ್‌ವೇಯಿಂದ 0.30 ಮೀ ನಿಂದ 1.00 ಮೀ. ಬಿಟ್ಟು ರಸ್ತೆಯನ್ನು ಅಗೆದು ಅಗೆದ ಮಣ್ಣನ್ನು ಮಣ್ಣನ್ನು ಕ್ಯಾರೇಜ್‌ವೇ (3.75 ಮೀ ಅಗಲ) ನಲ್ಲಿಯೇ ರಾಶಿ ಹಾಕಿರುತ್ತಾರೆ. ಇದರಿಂದಾಗಿ ವಾಹನಗಳ ಸಂಚಾರಕ್ಕೆ ಅಡಚಣೆಯಾಗಿದ್ದು ಅಪಘಾತಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಸರ್ಕಾರದ ಆದೇಶ ಲೋಕೋಪಯೋಗಿ ಇಲಾಖೆಯ ನಿಯಮಾನುಸಾರ ರಸ್ತೆಯನ್ನು ಕತ್ತರಿಸಲು ನಿಗಧಿತ ಶುಲ್ಕವನ್ನು ಪಾವತಿಸಿ ಕಾರ್ಯಪಾಲಕ ಇಂಜಿನಿಯರ್ ರವರಿಂದ ಅನುಮತಿಯನ್ನು ಪಡೆದು ನಂತರ ರಸ್ತೆ ಅಗೆತವನ್ನು ಮಾಡಬೇಕಾಗಿರುತ್ತದೆ. ಆದರೆ ಃಖಓಐ ನೇಮಿಸಲ್ಪಟ್ಟಿರುವ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಿಂದ ನಿಯಮಾನುಸಾರ ರಸ್ತೆಯನ್ನು ಕತ್ತರಿಸಲು ಅನುಮತಿಯನ್ನು ಪಡೆಯದೆ ಅನಧಿಕೃತವಾಗಿ ರಸ್ತೆಯನ್ನು ಅಗೆದಿರುವ ಗುತ್ತಿಗೆದಾರರ ವಿರುದ್ಧ ಅಗತ್ಯ ಕ್ರಮ ವಹಿಸಬೇಕು ಎಂಬ ಒತ್ತಾಯ ಕೇಳಿ ಬಂದಿದೆ.

ತಾಲ್ಲೂಕಿನ ಬರಗಿ ಮುಖ್ಯರಸ್ತೆ, ಶಿವಪುರ -ಹಂಗಳ ರಸ್ತೆ, ಮಳವಳ್ಳಿ ನೇನೆಕಟ್ಟೆ ಮುಂಟೀಪುರ ರಸ್ತೆ, ರಾಷ್ಟ್ರೀಯ ಹೆದ್ದಾರಿ ಮೂಲಕ ವೀರನಪುರ, ಬನ್ನಿತಾಳಪುರ ರಸ್ತೆ, ಹೊನ್ನಶೆಟ್ಟರಹುಂಡಿ, ಹುಲಸಗುಂದಿ ಭೀಮನಭೀಡು ಹೊಂಗಹಳ್ಳಿ ರಸ್ತೆ, ಚನ್ನಮಲ್ಲೀಪುರ ರಸ್ತೆ, ಸೋಮಹಳ್ಳಿ ಹೆಮ್ಮರಗಾಲ ರಸ್ತೆ, ಕಾಳನಹುಂಡಿ, ಕೋಟೆಕೆರೆ, ಬೋಗಯ್ಯನಹುಂಡಿ ಬೆಟ್ಟದಮಾದಳ್ಳಿ ರಸ್ತೆ, ರಾಮನಾಥಪುರ- ತೆರಕಣಾಂಬಿ ರಸ್ತೆ, ಯಲ್ಲಿ ಅನುಮತಿ ಇಲ್ಲದೆ ರಸ್ತೆ ಬದಿ ಹಗೆದಿದ್ದಾರೆ ರಸ್ತೆ ಬದಿ ಕುಡಿಯುವ ನೀರಿನ ಪೈಪ್ ಗಳಿದ್ದು ಹೊಡೆದು ಹೋದರೆ ದುರಸ್ತೆಯಾಗದೆ ಜನರಿಗೆ ಕುಡಿಯುವ ನೀರಿನ ಸಮಸ್ಯೆ ತಲೆದೋರುತ್ತದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

> **ಈ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ನಮ್ಮ ಇಂಜಿನೀಯರ್ ದೂರು ನೀಡಿದ್ದಾರೆ, ಎಲ್ಲಿ ಕದ್ದು ಕೆಲಸ ಮಾಡುತಿದ್ದಾರೆ ಅದನ್ನು ತಡೆಯಲಾಗಿದೆ, ಜನರು ಇದರ ಬಗ್ಗೆ ಹೆಚ್ಚೆತ್ತುಕೊಂಡು ತಕ್ಷಣ ಲೋಕೋಪಯೋಗಿ ಇಲಾಖೆಗೆ ಮಾಹಿತಿ ನೀಡಬೇಕು ಪೊಲೀಸರು ಇಂತವರ ವಿರುದ್ಧ ಕ್ರಮ ಕೈಗೊಳ್ಳಬೇಕು.**
> **ರವಿಕುಮಾರ್** ಎಇಇ ಲೋಕೋಪಯೋಗಿ ಇಲಾಖೆ.

### ರಸ್ತೆಗಳು ಹಗೆದು ರಸ್ತೆಗೆ ಹಾನಿ

**ಬಿಎಸ್ ವೆನ್ ಎಲ್ ಗುತ್ತಿಗೆ ಪಡೆದವರು ವೆಲ್ಲಾ ರಸ್ತೆಗಳು ಹಗೆದು ರಸ್ತೆಗೆ ಹಾನಿ ಮಾಡುತಿದ್ದಾರೆ ಇಲಾಖೆಗಳು ಹಾಗೂ ಗ್ರಾ.ಪಂ ಯಿಂದ ಅನುಮತಿ ಪಡೆದು ಇಂತಿಷ್ಟು ಹಣ ಪಾವತಿಸಿ ಪಯೊಣಟಜಜಜುಟಜಜ ಲೈನ್ ಸಂಪರ್ಕದ ಬಗ್ಗೆ ಮಾಹಿತಿ ಪಡೆದು ಕೆಲಸ ಮಾಡಬೇಕು ಅಲ್ಲದೆ ರಸ್ತೆಗೆ ಮಣ್ಣು ಸುರಿದು ಅಪಘಾತಗಳು ಸಂಭವಿಸುವಂತೆ ಮಾಡುತಿದ್ದು ಇದರ ಬಗ್ಗೆ ಲೋಕೋಪಯೋಗಿ ಇಲಾಖೆ ಕ್ರಮವಹಿಸಬೇಕು.**

## ಕನ್ನಡ, ಸಂಸ್ಕೃತಿ ಇಲಾಖೆಯಿಂದ 'ಸಾಧಕರೊಂದಿಗೆ ಸಂವಾದ'

### ಬಾಲ್ಯ, ಶಿಕ್ಷಣ, ಕಲಾಪ್ರದರ್ಶನಕ್ಕೆ ಕುಟುಂಬದವರ ಮತ್ತು ಸರ್ಕಾರದ ಪ್ರೋತ್ಸಾಹ ಸ್ಮರಣೀಯ: ಐಮುಡಿಯಂಡ ರಾಣಿಮಾಚಯ್ಯ

**ಮಡಿಕೇರಿ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗ ಹಾಗೂ ಕೊಡಗು ಜಿಲ್ಲೆ ವತಿಯಿಂದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಐಮುಡಿಯಂಡ ರಾಣಿ ಮಾಚಯ್ಯ ಅವರೊಂದಿಗೆ ಸಾಧಕರೊಂದಿಗೆ ಸಂವಾದ ತಿಂಗಳ ಅತಿಥಿ ಕಾರ್ಯಕ್ರಮವು ನಗರದ ಜೂನಿಯರ್ ಕಾಲೇಜಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಸಭಾಂಗಣದಲ್ಲಿ ಗುರುವಾರ ಅರ್ಥಪೂರ್ಣವಾಗಿ ನಡೆಯಿತು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಹಾಗೂ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷರಾದ ರಾಣಿ ಮಾಚಯ್ಯ ಅವರು ಸಾಧಕರೊಂದಿಗೆ ಸಂವಾದ ತಿಂಗಳ ಅತಿಥಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಬಾಲ್ಯ, ಶಿಕ್ಷಣ, ಕಲಾ ಪ್ರದರ್ಶನ, ಹಾಗೆಯೇ ಸರ್ಕಾರದ ಪ್ರೋತ್ಸಾಹ ಹೀಗೆ ತಮ್ಮ ಜೀವನ ಚರಿತ್ರೆ ಬಗ್ಗೆ ಎಳೆ ಎಳೆಯಾಗಿ ಮಾಹಿತಿ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೈಸೂರು ವಿಭಾಗದ ಜಂಟಿ ನಿರ್ದೇಶಕರಾದ ನಿರ್ಮಲಾ ಮಠಪತಿ ಅವರು ಸಾಧಕರೊಂದಿಗಿನ ಸಂವಾದ ತಿಂಗಳ ಅತಿಥಿ ಕಾರ್ಯಕ್ರಮ ನಡೆಸಿಕೊಟ್ಟರು.

ಐಮುಡಿಯಂಡ ರಾಣಿ ಮಾಚಯ್ಯ ಅವರು ತಂದೆಯವರು ವ್ಯಾಪಾರ ಮಾಡುತ್ತಿದ್ದರು. ಕಾಕೋಟುಪರಂಬುನ ತೋಟದಲ್ಲಿ ಜೀವನ ಮಾಡುತ್ತಿದ್ದೇವು. ಅಲ್ಲಿಯೇ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಪಡೆದು, ವಿರಾಜಪೇಟೆಯ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರೌಢಶಾಲೆ ಮತ್ತು ಕಾಲೇಜು ವಿಧ್ಯಾಭ್ಯಾಸ ನಡೆಯಿತು ಎಂದು ಅವರು ಸ್ಮರಿಸಿದರು.



ನಂತರ ಪದವಿಗೆ ಬರುವ ಹಂತದಲ್ಲಿ ಮದುವೆ ಮಾಡಲಾಯಿತು. ಆ ಸಂದರ್ಭದಲ್ಲಿ ಕೊಡಗಿನ ಸಾಂಪ್ರದಾಯಿಕ ಉಮ್ಮತ್ತಾಟ್ ಕಲಾ ಪ್ರದರ್ಶನವನ್ನು ಮೆಲ್ಲ ಮೆಲ್ಲಗೆ ನೀಡಲಾಗುತ್ತಿದ್ದು, ಇದನ್ನು ಒಂದು ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕವಾಗಿ ಮತ್ತಷ್ಟು ಎತ್ತರಕ್ಕೆ ಬೆಳೆಸಲು ಶ್ರಮಿಸಲಾಯಿತು ಎಂದು ರಾಣಿಮಾಚಯ್ಯ ಅವರು ವಿವರಿಸಿದರು.

70 ರ ದಶಕದಲ್ಲಿ ಹೆಣ್ಣು ಮಕ್ಕಳು ಮನೆಯಿಂದ ಹೊರಬರಲು ಪೋಷಕರು ಬಿಡುತ್ತಿರಲಿಲ್ಲ. ಆದರೂ ಸಹ ಕೊಡಗಿನ ಸಾಂಪ್ರದಾಯಿಕ ಕಲಾ ಪ್ರದರ್ಶನವನ್ನು ಮತ್ತಷ್ಟು ಪಸರಿಸಲು ಶ್ರಮಿಸಲಾಯಿತು. ಆ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರೋತ್ಸಾಹ ಅಪಾರವಾಗಿದೆ ಎಂದು ರಾಣಿ ಮಾಚಯ್ಯ ಅವರು ನುಡಿದರು.

ಜೂನಿಯರ್ ಕಾಲೇಜಿನ ಪ್ರಾಂಶುಪಾಲರಾದ ವಿಜಯ, ಇತರರು ಇದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕುಮಾರ ಸ್ವಾಗತಿಸಿದರು. ಶಿಕ್ಷಕಿ ಜಯಲಕ್ಷ್ಮಿ ನಿರೂಪಿಸಿದರು.

## ನಾಡಪ್ರಭು ಕೆಂಪೇಗೌಡರು ಎಲ್ಲಾ ಸಮುದಾಯಕ್ಕೂ ಅನ್ನದಾತ

### ಕೆಂಪೇಗೌಡರ ಸಾಧನೆಯನ್ನು ಅಂದಿನ ವಿದ್ಯಾವಂತರು ಮರೆ ಮಾಚಿದ್ದರು: ಅನ್ನದಾನೇಶ್ವರನಾಥ ಸ್ವಾಮೀಜಿ



**ಚನ್ನಪಟ್ಟಣ:** ಇಂದು ಬೆಂಗಳೂರಿಗೆ ಯಾರೇ ಹೋದರು ಅವರಿಗೆ ಅನ್ನ ಹಾಕುತ್ತಿರುವುದು ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯ ಶ್ರಮದಿಂದ. ಆದರೆ ಅವರ ಸಾಧನೆಯನ್ನು ಅಂದಿನ ಕೆಲ ವಿದ್ಯಾವಂತರು ಮರೆಮಾಚಿದ್ದರು ಎಂದು ಆದಿಚುಂಚನಗಿರಿ ಅಂಧರ ಶಾಲೆಯ ಪೀಠಾಧ್ಯಕ್ಷರಾದ ಡಾ. ಅನ್ನದಾನೇಶ್ವರನಾಥ ಸ್ವಾಮೀಜಿಗಳು ಆತಂಕ ವ್ಯಕ್ತಪಡಿಸಿದರು.

ತಾಲೂಕಿನ ಬೇವೂರು ಶ್ರೀ ಸಿದ್ದರಾಮೇಶ್ವರ ವಿದ್ಯಾಸಂಸ್ಥೆಯಲ್ಲಿ ಗುರುವಾರ ಆಯೋಜಿಸಿದ್ದ ಕೆಂಪೇಗೌಡ ಜಯಂತೋತ್ಸವದ ದಿವ್ಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿ ಮಾತನಾಡಿ ಇಂದು ಬೆಂಗಳೂರು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ. ಯಾವುದೇ ಸಮುದಾಯವಿರಲಿ, ಯಾವುದೇ ಜಾತಿ, ಧರ್ಮದವರಿರಲಿ ಯಾವ ರಾಜ್ಯದವರೆ ಇರಲಿ ಬೆಂಗಳೂರಿನಲ್ಲಿ ಕೆಲಸ ಮತ್ತು ಆಶ್ರಯ ಪಡೆದು ಜೀವನ ಕಟ್ಟಿಕೊಳ್ಳುತ್ತಾರೆ ಎಂದರೆ ಅದಕ್ಕೆ ನಾಡಪ್ರಭು ಕೆಂಪೇಗೌಡರು ತಮ್ಮ ದೂರದೃಷ್ಟಿಯಿಂದ ಬೆಂಗಳೂರನ್ನು ನಿರ್ಮಾಣ ಮಾಡಿದ್ದೆ ಕಾರಣವಾಗಿದೆ. ಆದರೆ ಇವರ ಸಾಧನೆಯನ್ನು ಅಂದು ವಿದ್ಯೆ ಕಲಿತಿದ್ದ ಕೆಲವೇ ಮಂದಿಗಳು ಎನ್ನುವಂತಿದ್ದ ಕೆಲ ಬ್ರಾಹ್ಮಣರು, ಕೆಲ ಪುರೋಹಿತರು ಕೆಂಪೇಗೌಡರ ಸಾಧನೆಯನ್ನು ಸಮಾಜಕ್ಕೆ ತಿಳಿಯದಂತೆ ಮರೆಮಾಚಿದ್ದರು.

ವೇದಿಕೆಯಲ್ಲಿ ನಗರಸಭಾ ಮಾಜಿ ಉಪಾಧ್ಯಕ್ಷ ಬಿ.ಪಿ. ಮುದ್ದುಕೃಷ್ಣೇಗೌಡ, ಸಂಸ್ಥೆಯ ಅಧ್ಯಕ್ಷ ದೊಡ್ಡಮಾದೇಗೌಡ. ಉಪಾಧ್ಯಕ್ಷ ಜಿತೇಂದ್ರಕುಮಾರ್, ಖಜಾಂಚಿ ಬಿ.ಕೆ. ಮನು, ನಿರ್ದೇಶಕರುಗಳಾದ ಚೇತನ್ ಬಿ.ಸಿ., ಬಿ.ಎಲ್. ನವೀನ್‌ಕುಮಾರ್, ರೈತ ಸಂಘದ ಕೆ.ಎನ್. ರಾಜಣ್ಣ, ಜಗದಾಪುರ ಕೃಷ್ಣೇಗೌಡ, ಶಿವಲಿಂಗೇಗೌಡ ನಾಗವಾರ, ನಗರಸಭಾ ಸದಸ್ಯ ನಾರಾಯಣ್ (ಕಂಠಿ), ಮೆಣಸಿಗನಹಳ್ಳಿ ಮಹೇಶ್ ಹಾಗೂ ಪ್ರಾಂಶುಪಾಲ ಡಿಸಿ ಸುರೇಶ್, ಉಪಪ್ರಾಂಶಪಾಲರಾದ ಗೌರಮ್ಮ ಉಪನ್ಯಾಸಕರು, ಶಿಕ್ಷಕವೃಂದ, ಮಕ್ಕಳು, ಸಿಬ್ಬಂದಿ ಸೇರಿದಂತೆ ಪೋಷಕರು ಇದ್ದರು.

## ಪಿಎಲ್‌ಡಿ ಬ್ಯಾಂಕ್ ಚುನಾವಣೆ: ಬಿಜೆಪಿ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ



**ಗುಂಡ್ಲುಪೇಟೆ:** ತಾಲೂಕಿನ (ಪಿಎಲ್‌ಡಿ) ಬ್ಯಾಂಕ್‌ನ ನಿರ್ದೇಶಕರ ಚುನಾವಣೆಗೆ ನಾಮಪತ್ರ ಸಲ್ಲಿಕೆ ಆಗಸ್ಟ್ 2ರಂದು ನಡೆಯಲಿರುವ ಚುನಾವಣೆಗೆ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುತ್ತಿದ್ದು, ರಾಜಕೀಯ ಚಟುವಟಿಕೆಗಳು ಗರಿಗೆದರಿವೆ.

ಈ ಚುನಾವಣೆಯಲ್ಲಿ ಒಟ್ಟು 14 ಸ್ಥಾನಗಳಿಗೆ ಮತದಾನ ನಡೆಯಲಿದ್ದು, 13 ಸ್ಥಾನಗಳು ಸಾಲಗಾರರ ಕ್ಷೇತ್ರಕ್ಕೆ ಹಾಗೂ ಒಂದು ಸ್ಥಾನ ಸಾಲಗಾರರಲ್ಲದ ಕ್ಷೇತ್ರಕ್ಕೆ ಮೀಸಲಾಗಿವೆ.

ಗುರುವಾರ ಸಾಲಗಾರರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಗಳಾಗಿ ಮಾಡ್ರಹಳ್ಳಿ ನಾಗೇಂದ್ರ ಹಾಗೂ ಮಾಜಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಚನ್ನಮಲ್ಲಿಪುರ ಬಸವಣ್ಣ ಅವರ ತಾಯಿ ದೇವಮ್ಮ ಅವರು ಚುನಾವಣಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಕೆ ವೇಳೆ ಅಭ್ಯರ್ಥಿಗಳಾದ ನಾಗೇಂದ್ರ ಹಾಗೂ ದೇವಮ್ಮ ಅವರೊಂದಿಗೆ ಬಾಬು ಮಂಚಹಳ್ಳಿ, ಮಲ್ಲೇಶ್ ಮಾಡ್ರಹಳ್ಳಿ, ಮಲ್ಲಿಕಾರ್ಜುನ್ ಶ್ಯಾನಡ್ರಹಳ್ಳಿ, ಪ್ರಸಾದ್ ಹಸಗೂಲಿ, ಮಹೇಂದ್ರ, ಮಾಜಿ ಅಧ್ಯಕ್ಷ ಮಹೇಶ್ ಮಳವಳ್ಳಿ, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ನವೀನ್ ಮೌರ್ಯ ಸೇರಿದಂತೆ ಬಿಜೆಪಿ ಮುಖಂಡರು, ಕಾರ್ಯಕರ್ತರು ಹಾಗೂ ಬೆಂಬಲಿಗರು ಉಪಸ್ಥಿತರಿದ್ದರು.

## 24ರಿಂದ ಕಾಲೇಜು ಉಪನ್ಯಾಸಕರಿಗೆ, ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರಿಗೆ ತರಬೇತಿ

**ಮಡಿಕೇರಿ:** ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕೊಡಗು ಜಿಲ್ಲಾ ಸಂಸ್ಥೆಯ ವತಿಯಿಂದ ಜುಲೈ, 24 ರಿಂದ ಜುಲೈ, 30 ರವರೆಗೆ ಕಾಲೇಜು ಉಪನ್ಯಾಸಕರಿಗೆ ಹಾಗೂ ಪ್ರಾಥಮಿಕ/ ಪ್ರೌಢಶಾಲಾ ಶಿಕ್ಷಕರಿಗೆ ಜಿಲ್ಲಾ ಮಟ್ಟದಲ್ಲಿ ಮೂಲ ಮತ್ತು ಮುಂದುವರೆದ ತರಬೇತಿಯು ಕುಶಾಲನಗರ ಕೊಡವ ಸಮಾಜದಲ್ಲಿ ನಡೆಯಲಿದೆ ಎಂದು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ಜಿಲ್ಲಾ ಸಂಘಟಕರಾದ ಯು.ಸಿ.ದಮಯಂತಿ ಅವರು ತಿಳಿಸಿದ್ದಾರೆ.

## ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 40,21,039 ಎನ್ಯೂಮರೇಷನ್ ಫಾರ್ಮ್ ವಿತರಣೆ: ಕಾಂತರಾಜು ಪಿ.ಎಸ್

**ಬೆಂಗಳೂರು:** ಬೆಂಗಳೂರು ನಗರ ಜಿಲ್ಲೆಯಲ್ಲಿ ಜುಲೈ 23 ರಂದು ನಡೆದ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ -2026 ಪ್ರಕ್ರಿಯೆ ಚುರಿಕಿನಿಂದ ಸಾಗಿದ್ದು, ಜಿಲ್ಲೆಯಲ್ಲಿ ಒಟ್ಟು 40,21,039 ಮತದಾರರು ಇದ್ದು, ಇದ್ದುವರೆಗೂ ಜಿಲ್ಲೆಯಾದ್ಯಂತ ಒಟ್ಟು 40,21,039ಮತದಾರರ ಎನ್ಯೂಮರೇಷನ್ ಫಾರ್ಮ್ ಳನ್ನು ವಿತರಿಸಲಾಗಿದ್ದು, 1479950ಎನ್ಯೂಮರೇಷನ್ ಫಾರ್ಮ್ ಳನ್ನು ಡಿಜಿಟಲೀಕರಣಗೊಳಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಕಾಂತರಾಜು ಪಿ,ಎಸ್ ತಿಳಿಸಿದ್ದಾರೆ.

ಈವರೆಗೆ ಮನೆ ಮನೆ ಭೇಟಿಯ ಸಂದರ್ಭದಲ್ಲಿ ಮತದಾರರು ಸ್ವತಃ ಆನ್ ಲೈನ್ ಮೂಲಕ 1,58081 ಅರ್ಜಿಗಳನ್ನು ಸಲ್ಲಿಸಿದ್ದಾರೆ.

141072 ಮಂದಿ ಮತದಾರರು ಮನೆಯಲ್ಲಿ ಗೈರು ಹಾಜರಿದ್ದು, 620704 ಮಂದಿ ಶಾಶ್ವತ ವಲಸೆ ಹಾಗೂ 83068 ಮಂದಿ ಮೃತಪಟ್ಟಿರುವುದು ವರದಿಯಾಗಿದೆ ಎಂದು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ವಿದ್ಯುತ್ ವ್ಯತ್ಯಯ

**ರಾಮನಗರ:** 66/11 ಕೆವಿ ಮೆಳೆಹಳ್ಳಿ ವಿದ್ಯುತ್ ಉಪಕೇಂದ್ರದ ಮಾರ್ಗದಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದೆ. ಆದ ಕಾರಣ ಮೆಳೆಹಳ್ಳಿ, ಹರೀಸಂದ್ರ, ತಿಮ್ಮಸಂದ್ರ, ಅಂಕನಹಳ್ಳಿ, ಮದರಸಾಬರದೊಡ್ಡಿ, ಲಕ್ಕಸಂದ್ರ, ಪಾದರಹಳ್ಳಿ, ರಾಂಪುರ, ಲಕ್ಷ್ಮೀಪುರ, ಸುಗ್ಗನಹಳ್ಳಿ, ಗುಂಗರಹಳ್ಳಿ, 66ಕೆವಿ ಅದಾನಿ ಸೋಲಾರ್ ಐ.ಪಿ.ಪಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಜು. 24ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 4 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂನ ರಾಮನಗರ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಭಾರತೀಯ ವಾಯುಪಡೆ ಏರ್‌ಮ್ಯಾನ್ ವೃತ್ತಿಗೆ ಅರ್ಜಿ ಆಹ್ವಾನ

**ಹಾಸನ:** ಭಾರತೀಯ ವಾಯುಪಡೆಯು ಭಾರತದ / ಗೂರ್ಖಾ (ನೇಪಾಳ) ಪುರುಷ ಅಭ್ಯರ್ಥಿಗಳನ್ನು ಭಾರತೀಯ ವಾಯುಪಡೆಗೆ ಏರ್‌ಮ್ಯಾನ್ ಆಗಿ ಗ್ರೂಪ್ 'ಜ' (ತಾಂತ್ರಿಕವಲ್ಲದ) ವೈದ್ಯಕೀಯ ಸಹಾಯಕ ವೃತ್ತಿಗೆ ಸೇರಲು ನೇಮಕಾತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.



ಅರ್ಜಿ ಸಲ್ಲಿಸಲು ಜು.26 ಕೊನೆಯ ದಿನಾಂಕವಾಗಿರುತ್ತದೆ, ಅಭ್ಯರ್ಥಿಗಳು ವೆಬ್‌ಸೈಟ್ https://iafrecruitment.edcil.co.in ಮೂಲಕ ನೊಂದಣಿ ಮಾಡಿಕೊಳ್ಳಬಹುದಾಗಿದೆ, ಸೆ.22 ಮತ್ತು ಸೆ.23 ಆನ್‌ಲೈನ್ ಪರೀಕ್ಷೆ, ಅರ್ಜಿ ಸಲ್ಲಿಸಲು (ಎ) ವೈದ್ಯಕೀಯ ಸಹಾಯಕ ವೃತ್ತಿಗೆ (10+2 ಹೊಂದಿರುವ ಅಭ್ಯರ್ಥಿಗಳಿಗೆ), ಅಭ್ಯರ್ಥಿಯು ಅವಿವಾಹಿತರಾಗಿರಬೇಕು ಮತ್ತು 01 ಜುಲೈ 2006 ಮತ್ತು 01 ಜುಲೈ 2010 (ಎರಡೂ ದಿನಾಂಕಗಳನ್ನು ಒಳಗೊಂಡಂತೆ) ನಡುವೆ ಜನಿಸಿದವರಾಗಿರಬೇಕು, (ಬಿ) ವೈದ್ಯಕೀಯ ಸಹಾಯಕ ವೃತ್ತಿಗೆ (ಫಾರ್ಮಸಿಯಲ್ಲಿ ಡಿಪ್ಲೊಮಾ/ ಬಿ.ಫಾರ್ಮಾ/ಫಾರ್ಮಸಿಯಲ್ಲಿ ಬಿ.ಎಸ್ಸಿ ಹೊಂದಿರುವ ಅಭ್ಯರ್ಥಿಗಳಿಗೆ), ಅವಿವಾಹಿತ ಅಭ್ಯರ್ಥಿಯು 01 ಜುಲೈ 2003 ಮತ್ತು 01 ಜುಲೈ 2008 (ಎರಡೂ ದಿನಾಂಕಗಳನ್ನು ಒಳಗೊಂಡಂತೆ) ನಡುವೆ ಜನಿಸಿರಬೇಕು, ವಿವಾಹಿತ ಅಭ್ಯರ್ಥಿಯು 01 ಜುಲೈ 2003 ಮತ್ತು 01 ಜುಲೈ 2006 (ಎರಡೂ ದಿನಾಂಕಗಳನ್ನು ಒಳಗೊಂಡಂತೆ) ನಡುವೆ ಜನಿಸಿದವರಾಗಿರಬೇಕು ಎಂದು ತಿಳಿಸಿದ್ದಾರೆ.

### ಸಮಾಜ ಸುಧಾರಕ ಶ್ರೀನಿಧಿ ಕುದರ್ ಬಣ್ಣನೆ

# ಡಾ.ಎಸ್.ಜಾನಕಿ ಅವರ ಗೀತೆಗಳು ಎಂದಿಗೂ ಜೀವಂತ

**ಚಾಮರಾಜನಗರ:** ಭಾರತದ ಹಲವಾರು ಭಾಷೆಗಳಲ್ಲಿ ಸುಮಾರು 48 ಸಾವಿರಕ್ಕೂ ಹೆಚ್ಚು ಹಾಡುಗಳನ್ನು ಹಾಡಿರುವ ಡಾ.ಎಸ್.ಜಾನಕಿ ಅವರ ಗೀತೆಗಳನ್ನು ಎಂದಿಗೂ ಜೀವಂತವಾಗಿರುತ್ತದೆ ಎಂದು ಯುವ ಉದ್ಯಮಿ ಹಾಗೂ ಸಮಾಜ ಸುಧಾರಕ ಶ್ರೀನಿಧಿ ಕುದರ್ ಬಣ್ಣಿಸಿದರು.

ನಗರದ ಶ್ರೀ ಭುವನೇಶ್ವರಿ ವೃತ್ತದಲ್ಲಿ ಡಾ. ಎಸ್.ಪಿ.ಬಾಲಸುಬ್ರಮ್ಮಣ್ಯಂ ಗಾನ ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ಮತ್ತು ಯುವ ಕರ್ನಾಟಕ ವೇದಿಕೆ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಡಾ.ಎಸ್.ಜಾನಕಿ ನುಡಿ ನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಡಾ.ಎಸ್.ಜಾನಕಿ ಅವರು ದಕ್ಷಿಣ ಭಾರತದ ಎಲ್ಲಾ ಭಾಷೆಗಳಲ್ಲಿಯೂ ಹಾಡುಗಳನ್ನು ಹಾಡಿದ್ದಾರೆ. ಅದಲ್ಲದೇ ಉತ್ತರ ಭಾರತದಲ್ಲೂ ಹಾಡುವ ಮೂಲಕ ಗಮನ ಸೆಳೆದಿದ್ದರು. ಭಾರತವಲ್ಲದೇ ಶ್ರೀಲಂಕಾ, ಜಪಾನ್ ಹಾಗೂ ಇನ್ನಿತರೆ ದೇಶಗಳ ಹಲವಾರು ಭಾಷೆಗಳಲ್ಲೂ ಅವರು ಹಾಡಿದ್ದಾರೆ. ಅವರ ದೇಹ ನೆಲದಲ್ಲಿ ಮಣ್ಣಾಗಿರಬಹುದು. ಆದರೆ ಅವರ ಹಾಡುಗಳಲ್ಲಿ ಎಸ್.ಜಾನಕಿ ಅವರು ಸದಾ ಕಾಲ ಜೀವಂತವಾಗಿ ಉಳಿಯಲಿದ್ದಾರೆ ಎಂದರು.



ಡಾ.ಎಸ್.ಜಾನಕಿಯವರು ಮೂಲತಃ ಆಂಧ್ರ ಪ್ರದೇಶದವರಾಗಿದ್ದರೂ, ಕನ್ನಡಿಗರು ಹಾಗೂ ಮೈಸೂರಿನ ಮೇಲೆ ಅಪಾರವಾದ ಪ್ರೀತಿಯನ್ನು ಹೊಂದಿದ್ದರು. ಕನ್ನಡ ಭಾಷೆಯಲ್ಲೇ ಅತಿಹೆಚ್ಚು ಹಾಡುಗಳನ್ನು ಹಾಡಿದ್ದಾರೆ. ಈ ನಿಟ್ಟಿನಲ್ಲಿ ಅವರನ್ನು ಸ್ವರ ಸರಸ್ವತಿ ಅಂದರೂ ತಪ್ಪಾಗಲಾರದು. ಆಗಾಗಿ ರಾಜ್ಯ ಸರ್ಕಾರ ಮೈಸೂರಿನಲ್ಲಿ ಡಾ.ಎಸ್.ಜಾನಕಿ ಅವರ ಹೆಸರಿನಲ್ಲಿ ಸ್ಮಾರಕವನ್ನು ನಿರ್ಮಿಸಿ, ಅವರ ಸೇವೆಯನ್ನು ಶಾಶ್ವತವಾಗಿ ಉಳಿಸಬೇಕು ಎಂದರು.

ಈ ವೇಳೆ ಡಾ.ಎಸ್.ಜಾನಕಿ ಅವರ ನುಡಿ ನಮನ ಕಾರ್ಯಕ್ರಮದ ಅಂಗವಾಗಿ ಸುಮಾರು 300 ಜನರಿಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಯಿತು.

ಈ ಸಂದರ್ಭದಲ್ಲಿ ಡಾ.ಎಸ್.ಪಿ.ಬಾಲಸುಬ್ರಮ್ಮಣ್ಯಂ ಗಾನ ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ಅಧ್ಯಕ್ಷ ಶಿವಣ್ಣ ಹೊಸೂರು, ಕಾರ್ಯದರ್ಶಿ ಎನ್.ಜೋಸೆಫ್, ಉಪಾಧ್ಯಕ್ಷರಾದ ವಸಂತಮ್ಮ, ಗೌರವಾಧ್ಯಕ್ಷರಾದ ಬಂಗಾರು, ಸಂಘಟನಾ ಕಾರ್ಯದರ್ಶಿ ನಿಂಗರಾಜು ಆಟೋ, ನಗರಸಭೆ ಮಾಜಿ ಸದಸ್ಯ ಗಣೇಶ್ ದಿಕ್ಷೀತ್, ಮುಖಂಡರಾದ ಆಲೂರು ಮಲ್ಲು, ಯುವ ಕರ್ನಾಟಕ ವೇದಿಕೆಯ ತಾಲೂಕು ಅಧ್ಯಕ್ಷ ಆರ್.ರಾಘವೇಂದ್ರ, ಗೌರವಾಧ್ಯಕ್ಷ ಸುಂದರ್ ರಾಮಸಮುದ್ರ, ತಾಲೂಕು ಉಪಾಧ್ಯಕ್ಷರಾದ ರಾಜೇಂದ್ರ ಮಡಿವಾಳ, ಕಾರ್ಯದರ್ಶಿ ಮಹೇಶ್, ಪ್ರಮೋದ್, ಕಲಾ ಪೋಷಕರಾದ ಕೃಷ್ಣ ನಾಯಕ್, ಎಂ.ಶಂಕರ್, ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹೊನ್ನಮ್ಮ, ಜಾನಪದ ಕಲಾವಿದ ಗೌರಿಶಂಕರ್ ಹಾಗೂ ಸೋಬಾನೆ ಕಲಾವಿದರು ಹಾಗೂ ಇತರರು ಹಾಜರಿದ್ದರು.



# ಆ. 15 ರಂದು ವಿಜೃಂಭಣೆಯಿಂದ ಸ್ವಾತಂತ್ರ್ಯ ದಿನಾಚರಣೆ ಆಚರಿಸಲು ಸಕಲ ಸಿದ್ಧತೆ: ಡಾ. ಕುಮಾರ

**ಮಂಡ್ಯ:** ಆಗಸ್ಟ್ 15ರಂದು ನಡೆಯಲಿರುವ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅರ್ಥಪೂರ್ಣ, ಶಿಸ್ತುಬದ್ಧ ಹಾಗೂ ವಿಜೃಂಭಣೆಯಿಂದ ಆಚರಿಸಲು ಅಗತ್ಯವಿರುವ ಎಲ್ಲಾ ಸಿದ್ಧತೆಗಳನ್ನು ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಡಳಿತದ ವತಿಯಿಂದ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ದಿನಾಚರಣೆ ರಾಷ್ಟ್ರೀಯ ಹೆಮ್ಮೆಯ ಸಂಕೇತವಾಗಿದ್ದು, ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರು, ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ಆಕರ್ಷಕ ಪಥಸಂಚಲನವನ್ನು ಆಯೋಜಿಸಬೇಕು. ಪೊಲೀಸ್ ಇಲಾಖೆ, ಗೃಹರಕ್ಷಕ ದಳ, ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಸಿಸಿ, ಎನ್‌ಎಸ್‌ಎಸ್ ಹಾಗೂ ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳ ತಂಡಗಳು ಶಿಸ್ತುಬದ್ಧವಾಗಿ ಪಥಸಂಚಲನದಲ್ಲಿ ಭಾಗವಹಿಸುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ದೇಶಭಕ್ತಿ, ರಾಷ್ಟ್ರೀಯ ಏಕತೆ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗವನ್ನು ಬಿಂಬಿಸುವ ನೃತ್ಯ, ಗೀತಗಾಯನ ಹಾಗೂ ಇತರೆ ಪ್ರದರ್ಶನಗಳಿಗೆ ಆದ್ಯತೆ ನೀಡಬೇಕು. ಉತ್ತಮ ಪ್ರದರ್ಶನ ನೀಡುವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು ಎಂದು ಹೇಳಿದರು.

ಆಗಸ್ಟ್ 14ರ ರಾತ್ರಿ ಜಿಲ್ಲೆಯ ಎಲ್ಲಾ ಸರ್ಕಾರಿ ಕಚೇರಿಗಳು, ಪ್ರಮುಖ ವೃತ್ತಗಳು ಹಾಗೂ ಸಾರ್ವಜನಿಕ ಕಟ್ಟಡಗಳಲ್ಲಿ ದೀಪಾಲಂಕಾರ ಮಾಡುವ ಮೂಲಕ ಸ್ವಾತಂತ್ರ್ಯ ದಿನಾಚರಣೆಗೆ ವಿಶೇಷ ಮೆರುಗು ನೀಡಬೇಕು ಎಂದು ತಿಳಿಸಿದರು.

**ಪ್ಲಾಸ್ಟಿಕ್ ರಾಷ್ಟ್ರಧ್ವಜಗಳಿಗೆ ಕಟ್ಟುನಿಟ್ಟಿನ ನಿಷೇಧ**

ಪ್ಲಾಸ್ಟಿಕ್ ರಾಷ್ಟ್ರಧ್ವಜಗಳ ಮಾರಾಟ ಹಾಗೂ ಬಳಕೆಗೆ ಯಾವುದೇ ಅವಕಾಶ ನೀಡಬಾರದು. ಒಂದು ವೇಳೆ ಮಾರಾಟ ಅಥವಾ ಬಳಕೆ ಕಂಡುಬಂದಲ್ಲಿ ನಗರಸಭೆ ಹಾಗೂ ಸಂಬಂಧಿಸಿದ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರು ಕಾಗದ ಅಥವಾ ಬಟ್ಟೆಯಿಂದ ತಯಾರಿಸಿದ ರಾಷ್ಟ್ರಧ್ವಜಗಳನ್ನು ಮಾತ್ರ ಬಳಸುವಂತೆ ಜಾಗೃತಿ ಮೂಡಿಸಬೇಕು ಎಂದು ಸೂಚಿಸಿದರು.

ಕಾರ್ಯಕ್ರಮ ನಡೆಯುವ ಜಿಲ್ಲಾ ಕ್ರೀಡಾಂಗಣದಲ್ಲಿ ಕುಡಿಯುವ ನೀರು, ಸ್ವಚ್ಛ ಶೌಚಾಲಯ, ಆಸನ ವ್ಯವಸ್ಥೆ, ವಾಹನ ನಿಲುಗಡೆ, ತುರ್ತು ವೈದ್ಯಕೀಯ ಸೇವೆ, ಅಗ್ನಿಶಾಮಕ ಮತ್ತು ಭದ್ರತಾ ವ್ಯವಸ್ಥೆ ಸೇರಿದಂತೆ ಎಲ್ಲಾ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ಕಲ್ಪಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ಹಣಾಧಿಕಾರಿ ಕೆ. ಆರ್. ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ವಿ. ಜೆ. ಶೋಭಾರಾಣಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಇಂದು ಹನೂರಿನಲ್ಲಿ ಪತ್ರಿಕಾ ದಿನಾಚರಣೆ ಸಮಾರಂಭ



**ಹನೂರು:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಹನೂರು ತಾಲ್ಲೂಕು ಘಟಕದ ವತಿಯಿಂದ ಪತ್ರಿಕಾ ದಿನಾಚರಣೆ ಸಮಾರಂಭವನ್ನು ಜುಲೈ 24ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಕಮ್ಮವಾರಿ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಮಲೆ ಮಹದೇಶ್ವರ ಬೆಟ್ಟದ ಸಾಲೂರು ಬೃಹ್ಮಠದ ಪೀಠಾಧ್ಯಕ್ಷ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ವಹಿಸಲಿದ್ದಾರೆ.

ಹನೂರು ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಆರ್. ಮಂಜುನಾಥ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಚಾಮರಾಜನಗರ ಸಂಸದ ಸುನೀಲ್ ಬೋಸ್ ಅವರು ಜ್ಯೋತಿ ಬೆಳಗಲಿದ್ದಾರೆ. ಮಾಜಿ ಶಾಸಕ ಆರ್. ನರೇಂದ್ರ ಅವರು ಡಿ.ವಿ.ಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜನಾಯ್ಡು ಜಿ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್. ಎನ್. ಸಿದ್ದಲಿಂಗಸ್ವಾಮಿ ಅವರು ಆಶಯ ನುಡಿಗಳನ್ನಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕಿ ಪರಿಮಳ ನಾಗಪ್ಪ, ಬಿಜೆಪಿ ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಜನಧ್ವನಿ ಬಿ. ವೆಂಕಟೇಶ್, ಮಾನಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ಎಸ್. ದತ್ತೇಶ್‌ಕುಮಾರ್, ಸಮಾಜ ಸೇವಕ ಹಾಗೂ ಬಿಜೆಪಿ ಮುಖಂಡ ನಿಶಾಂತ್, ತಹಸೀಲ್ದಾರ್ ಚೈತ್ರ ಕೆ.ಎನ್, ಇಒ ಉಮೇಶ್, ಹನೂರು ಪಟ್ಟಣ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಆನಂದ್ ಮೂರ್ತಿ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ರೇಖಾ, ಕಮ್ಮ ಸಮುದಾಯದ ಅಧ್ಯಕ್ಷ ದಿನ್ನಮಣಿನಾಯ್ಡು, ರಾಜ್ಯ ಸಮಿತಿ ಸದಸ್ಯ ಮಹೇಂದ್ರ ಸಿ, ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಸಾದ್ ಎಸ್. ಲಕ್ಕೂರು ಭಾಗವಹಿಸಲಿದ್ದಾರೆ.

**ಪ್ರಶಸ್ತಿ ಪ್ರದಾನ:** ಸಮಾರಂಭದಲ್ಲಿ ಶ್ರೀಮತಿ ಸಾವಿತ್ರಮ್ಮ ಗೋವಿಂದನಾಯ್ಡು ದತ್ತಿ ಪ್ರಶಸ್ತಿಯನ್ನು ವಿಜಯವಾಣಿ ತಾಲ್ಲೂಕು ವರದಿಗಾರ ಎಸ್. ಲಿಂಗರಾಜು ಅವರಿಗೆ ನೀಡಿ ಗೌರವಿಸಲಾಗುವುದು.


ಅದೇ ರೀತಿ ಚೆಸ್ಕಾಂ ಇಲಾಖೆಯ ಹನೂರು ಉಪವಿಭಾಗದಲ್ಲಿ ಉತ್ತಮ ಸೇವೆ ಸಲ್ಲಿಸಿರುವ ಎಇಇ ಬಿ. ರಂಗಸ್ವಾಮಿ ಅವರಿಗೆ "ಉತ್ತಮ ಸೇವಕ" ಪ್ರಶಸ್ತಿ ನೀಡಲಾಗುವುದು.

ತಾಲ್ಲೂಕಿನ ಎಲ್ಲಾ ಪತ್ರಕರ್ತ ಮಿತ್ರರು ಸಮಾರಂಭದಲ್ಲಿ ಭಾಗವಹಿಸಬೇಕು ಎಂದು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜನಾಯ್ಡು ಜಿ ಮತ್ತು ಪ್ರಧಾನ ಕಾರ್ಯದರ್ಶಿ ಪ್ರಭುಸ್ವಾಮಿ ಎಂ ಮನವಿ ಮಾಡಿದ್ದಾರೆ.

## ಯುವನಿಧಿ ಯೋಜನೆಗೆ ಅರ್ಜಿ ಆಹ್ವಾನ

**ಮಡಿಕೇರಿ:** 2024, 2025, ಹಾಗೂ 2026ರಲ್ಲಿ ಪದವಿ, ಡಿಪ್ಲೋಮಾ, ಸ್ನಾತಕೋತ್ತರ ಪದವಿ ಉತ್ತೀರ್ಣರಾಗಿ 6 ತಿಂಗಳಾದರೂ ಸರ್ಕಾರಿ , ಖಾಸಗಿ, ಸ್ವಯಂ ಉದ್ಯೋಗ ಹೊಂದಿಲ್ಲದವರು ಮತ್ತು ಉನ್ನತ ವಿದ್ಯಾಭ್ಯಾಸ ಮುಂದುವರೆಸದೆ ಇರುವ ವಿದ್ಯಾರ್ಥಿಗಳು ಕರ್ನಾಟಕ ಒನ್, ಗ್ರಾಮ ಒನ್, ಮತ್ತು ಬಾಪೂಜಿ ಸೇವಾ ಕೇಂದ್ರಗಳಿಗೆ ಭೇಟಿ ನೀಡಿ ಅಥವಾ http://sevasindhugs.karnataka.gov.in ಪೋರ್ಟಲ್ ಮೂಲಕ ಉಚಿತವಾಗಿ ಯುವನಿಧಿ ಯೋಜನೆಗೆ ಅರ್ಜಿ ಸಲ್ಲಿಸಬಹುದು. ಪದವೀಧರರಿಗೆ, ಸ್ನಾತಕೋತ್ತರ ಪದವೀಧರರಿಗೆ ಪ್ರತಿ ತಿಂಗಳು ರೂ.3,000 ಗಳು ಹಾಗೂ ಡಿಪ್ಲೋಮಾ ಪಡೆದವರಿಗೆ ರೂ.1500 ಗಳನ್ನು ನಿರುದ್ಯೋಗ ಭತ್ಯೆಯನ್ನಾಗಿ ಉದ್ಯೋಗ ಸಿಗುವವರೆಗೆ ಅಥವಾ ಗರಿಷ್ಠ 2 ವರ್ಷಗಳವರೆಗೆ ನೀಡಲಾಗುತ್ತದೆ ಮತ್ತು ಈಗಾಗಲೇ ನೋಂದಾಯಿಸಿಕೊಂಡು ಹಣ ಪಡೆಯತ್ತಿರುವ ಫಲಾನುಭವಿಗಳು, ಪ್ರತಿ ತಿಂಗಳಿಗೊಮ್ಮೆ ಸ್ವಯಂ ಘೋಷಣೆಯನ್ನು ಮಾಡಿಕೊಳ್ಳಬೇಕಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಸಹಾಯವಾಣಿ ಸಂಖ್ಯೆ 1800599–7154 ಗೆ ಕರೆ ಮಾಡುವ ಮೂಲಕ ಅಥವಾ ಜಿಲ್ಲಾ ಉದ್ಯೋಗ ವಿನಿಮಯ ಅಧಿಕಾರಿ, ಕೊಡಗು ಜಿಲ್ಲೆ, ಮಡಿಕೇರಿ ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದು ಉದ್ಯೋಗಾಧಿಕಾರಿ ಅವರು ತಿಳಿಸಿದ್ದಾರೆ.

## ಬಿಲ್ಲು–ಬಾಣದಿಂದ ಐಎಎಸ್‌ಗೆ



ಡಾ.ಸುಧಾಕರ.ಜಿ.ಲಕ್ಕವಳ್ಳಿ

ವೆನಾಡಿನ ನಿಬಿಡ ಕಾಡಿನ ನಡುವೆ, ವೈಮಳೆ ಬಂದರೆ ಸೋರುವ ಪುಟ್ಟ ಗುಡಿಸಲು.ಇಟ್ಟಿಗೆಯ ಬದಲು ಬಟ್ಟೆಯನ್ನೇ ಗೋಡೆಯಾಗಿಸಿಕೊಂಡ ಬದುಕು. ಬಿಲ್ಲು–ಬಾಣಗಳನ್ನು ಹೆಣೆದು ಜೀವನ ಸಾಗಿಸುತ್ತಿದ್ದ ದಿನಗೂಲಿ ದಂಪತಿಯ ಪುತ್ರಿ ಶ್ರೀಧನ್ಯಾ ಸುರೇಶ್ ಅವರು. ಬಡತನದ ಕಂಟಕಗಳು ಮೈತುಂಬಾ ಚುಚ್ಚಿದರೂ, ಅವರ ಕನಸಿನ ರೆಕ್ಕೆಗಳಿಗೆ ಮಾತ್ರ ಧಕ್ಕೆ ತಗಲಲಿಲ್ಲ.



ಕೀಳರಿಮೆಯ ಕಾರ್ಮೋಡವನ್ನು ಸೀಳಿ, ಅಕ್ಷರದ ದೀವಟಿಗೆಯ ಬೆಳಕಿನಲ್ಲಿ ಮುನ್ನಡೆದರು.

ಅತೀವ ಕಷ್ಟದ ನಡುವೆಯೂ ಬಿಎಸ್ಸಿ ಪದವಿ ಪಡೆದು, ಕೊಯಿಕ್ಕೋಡ್‌ನಲ್ಲಿ ಪ್ರಾಣಿಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಸಾಧಿಸಿದರು. ಆದರೆ ಒಂದೇ ನೌಕರಿಗೆ ಸೀಮಿತರಾಗಲು ಅವರು ಒಪ್ಪಲಿಲ್ಲ. ತಮ್ಮ ಸಮುದಾಯದ ಮೌನ ರೋದನಕ್ಕೆ ದನಿಯಾಗಬೇಕೆಂಬ ಮಹದಾಸೆ ಅವರನ್ನು ರಾಜಧಾನಿ ದೆಹಲಿಯತ್ತ ಸೆಳೆಯಿತು. ಯುಪಿಎಸ್‌ಸಿ ಎಂಬ ವಿಶಾಲ ಸಾಗರಕ್ಕೆ ಧೈರ್ಯದಿಂದ ಧುಮುಕಿದರು.

ಸ್ಫೂರ್ತಿ ಸುದ್ದಿ - 77

2018ರ ಪರೀಕ್ಷೆಯಲ್ಲಿ 410ನೇ ರ?ಯಾಂಕ್ ಗಳಿಸುವ ಮೂಲಕ ಕೇರಳದ ಬುಡಕಟ್ಟು ಸಮುದಾಯದಿಂದ ಐಎಎಸ್‌ಗೆ ಆಯ್ಕೆಯಾದ ಪ್ರಥಮ ಮಹಿಳೆ ಎಂಬ ಐತಿಹಾಸಿಕ ಹೆಗ್ಗಳಿಕೆಗೆ ಪಾತ್ರರಾದರು. ಯಾರೂ ಚಲಿಸದ ಹಾದಿಯಲ್ಲಿ ಸ್ವಯಂ ದಾರಿ ನಿರ್ಮಿಸಿದ ಅಪರೂಪದ ಚೇತನ ಅವರದು. ಪ್ರಸ್ತುತ ಕೇರಳ ನೋಂದಣಿ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ವ್ಯಕ್ತಿಯ ಹಿನ್ನೆಲೆಯಲ್ಲ, ಛಲ ಮತ್ತು ಪರಿಶ್ರಮವೇ ಭವಿಷ್ಯವನ್ನು ನಿರ್ಧರಿಸುತ್ತವೆ ಎಂಬುದಕ್ಕೆ ಅವರ ಬದುಕೇ ಜೀವಂತ ಸಾಕ್ಷಿ. ಸೌಕರ್ಯಗಳ ಕೊರತೆಯನ್ನು ನೆಪವಾಗಿಟ್ಟುಕೊಳ್ಳುವ ಇಂದಿನ ಯುವ ಸಮೂಹಕ್ಕೆ ಶ್ರೀಧನ್ಯಾ ಅವರ ಸಾಧನೆ ನಿಜಕ್ಕೂ ದಾರಿದೀಪ, ಧೈರ್ಯದ ಕಿಡಿ. ಅವರ ಯಶೋಗಾಥೆ ಲಕ್ಷಾಂತರ ಮನಸ್ಸುಗಳಿಗೆ ಸ್ಫೂರ್ತಿಯ ಚಿಲುಮೆ.

# ಬಿಗ್ ಬಾಸ್ ಒಂದು ಲೆಕ್ಕವೇ
## ನಾವು ಮರೆತುಬಿಟ್ಟಿರುವ ನಮ್ಮ ಮೊದಲ ವಿಜಯಗಾಥೆ!



ರೂಪ ಮಂಜುನಾಥ ಹೊಳೆನರಸೀಪುರ

**ಪೀಠಿಕೆ**

ಕೈಕಾಲುಗಳನ್ನು ಆಡಿಸಲೂ ಆಗದ ಇಕ್ಕಟ್ಟು! ಜೋರಾಗಿ ಕೊಡವಿದರೆ ಗೋಡೆಗಳಿಗೆ ತಾಗುವಷ್ಟು ಕಿರಿದಾದ ಕೋಣೆ. ಕಣ್ಣಗಲಿಸಿ ಎತ್ತ ತಿರುಗಿದರೂ ಹಗಲೋ, ರಾತ್ರಿಯೋ ತಿಳಿಯದ ಕಗ್ಗತ್ತಲು. ದ್ರವದಿಂದ ತುಂಬಿದ ಆ ಪುಟ್ಟ ಪ್ರಪಂಚದಲ್ಲಿ ದಿನವಿಡೀ ಇರುವುದರಿಂದ ಚರ್ಮವೆಲ್ಲ ಸುಕ್ಕುಗಟ್ಟಿದಂತೆಯೇ. ಮಾತನಾಡುವ ಸ್ಥಿತಿಯಲ್ಲಿಲ್ಲ; ಮನದ ಭಾವನೆಗಳನ್ನು ಹಂಚಿಕೊಳ್ಳಲು ಯಾರೂ ಇಲ್ಲ.ಸದಾ ಸ್ಮಶಾನ ಮೌನ!ಒಂದು ರೀತಿಯ ಶೂನ್ಯ ಭಾವನೆ!ಏಕಾಂತ ರೋಧನೆ!

ಇಂಥ ಸ್ಥಿತಿಯಲ್ಲಿ ಸುಮಾರು 280 ದಿನಗಳನ್ನು ಕಳೆಯುವುದೆಂದರೆ, ಅಯ್ಯಯ್ಯೋ! ಇದು ಸಾಧ್ಯವೇ ಎಂದು ಯಾರಾದರೂ ಉದ್ಗರಿಸುವರು.

ಆದರೆ, ಭೂಮಿಯ ಮೇಲೆ ಜನಿಸಿರುವ ಪ್ರತಿಯೊಬ್ಬ ಮನುಷ್ಯನೂ ಈ ಘಟ್ಟವನ್ನು ದಾಟಿಯೇ ಈ ಲೋಕಕ್ಕೆ ಬಂದಿದ್ದಾನೆ ಎಂಬುದು ಅಚ್ಚರಿಯಾದರೂ ಸತ್ಯ. ಅಲ್ಲವೇ

ಮೇಲೆ ಹೇಳಿರುವ ಈ ವರ್ಣನೆ ಅಂಡಮಾನ್‌ನ ಸೆಲ್ಯುಲರ್ ಜೈಲಿನ ಕಥೆಯಲ್ಲ. ಅದು ನಾವೆಲ್ಲರೂ ಒಮ್ಮೆ ಒಂಭತ್ತು ತಿಂಗಳು ಒಂಭತ್ತು ದಿನಗಳ ಕಾಲ ವಾಸಿಸಿ ಭೂಮಿಗೆ ಬಿದ್ದ, ತಾಯಿಯ ಗರ್ಭಗುಡಿಯ ವಾಸದ ಕಥೆ!

ಹಾಗಾದರೆ ನೀವೇ ಹೇಳಿ ಈ ಕ್ಲಿಷ್ಟಾದ್ಭುತ, ಕಠಿಣಾತಿಕಠಿಣ ಪಯಣದ ಮುಂದೆ ಬಿಗ್ ಬಾಸ್ ಪಯಣ ಯಾವ ಲೆಕ್ಕ ಬಿಗ್ ಬಾಸ್‌ನಂತಹ ರಿಯಾಲಿಟಿ ಶೋಗಳಲ್ಲಿ "ನಾವು ಇಷ್ಟು ದಿನ ನಾಲ್ಕು ಗೋಡೆಗಳ ಮಧ್ಯೆ ಬಂದಿಯಾಗಿದ್ದೆವು" ಎಂದು ದೊಡ್ಡದಾಗಿ ಹೇಳಿಕೊಳ್ಳುವ ಸ್ಪರ್ಧಿಗಳ ಸಾಹಸ ಈ ವಾಸದ ಮುಂದೆ ಯಾವ ಮಹಾ

ಜೀವನದಲ್ಲಿ ಕಷ್ಟ ಬಂದಾಗ ನನಗೆ ಸಾಧ್ಯವಿಲ್ಲ , ನಾನು ಸೋತುಬಿಡುತ್ತೇನೆ , ಇನ್ನು ನನ್ನಿಂದ ಆಗುವುದಿಲ್ಲ ಎಂಬ ಮಾತುಗಳು ನಮ್ಮ ಮನಸ್ಸಿನಲ್ಲಿ ಸುಲಭವಾಗಿ ಮೂಡುತ್ತವೆ. ಆದರೆ ಒಂದು ಕ್ಷಣ ನಿಂತು ನಮ್ಮ ಜೀವನದ ಆರಂಭವನ್ನು ನೆನಪಿಸಿಕೊಂಡರೆ ಹೇಗೆ

ನಮ್ಮಲ್ಲಿ ಪ್ರತಿಯೊಬ್ಬರೂ ಈ ಭೂಮಿಯ ಮೇಲೆ ಮೊದಲ ಹೆಜ್ಜೆ ಇಡುವುದಕ್ಕೂ ಮುನ್ನ, ತಾಯಿಯ ಗರ್ಭದಲ್ಲಿ ಸುಮಾರು ಒಂಬತ್ತು ತಿಂಗಳು ದ್ರವರೂಪದ ಪರಿಸರದಲ್ಲಿ ಬೆಳೆಯುತ್ತೇವೆ. ಕತ್ತಲೆ, ಇಕ್ಕಟ್ಟು, ಅನಿಶ್ಚಿತತೆ ಇವೆಲ್ಲದರ ನಡುವೆ ಜೀವದ ಬೆಳವಣಿಗೆ ನಡೆಯುತ್ತದೆ. ಆ ಅದ್ಭುತ ಪ್ರಯಾಣವನ್ನು ಯಶಸ್ವಿಯಾಗಿ ಮುಗಿಸಿದ ನಾವು, ಇಂದು ಎದುರಾಗುವ ಸಣ್ಣ ಸವಾಲುಗಳ ಎದುರು ಏಕೆ ಭಯಪಡಬೇಕು

**ನಮ್ಮ ಮೊದಲ ಹೋರಾಟವೇ ಅಸಾಧಾರಣ:** ಮನುಷ್ಯನ ಜೀವನದ ಮೊದಲ ಅಧ್ಯಾಯವೇ ಒಂದು ಅದ್ಭುತ ಪಯಣ.

ಗರ್ಭದಲ್ಲಿರುವ ಮಗುವಿಗೆ ಉಸಿರಾಡಲು ಶ್ವಾಸಕೋಶ ಬಳಸುವ ಅಗತ್ಯವಿಲ್ಲ. ಆಮ್ಲಜನಕ ಮತ್ತು ಪೋಷಕಾಂಶಗಳು ತಾಯಿಯ ಪ್ಲಾಸೆಂಟಾ ಮತ್ತು ಹೊಕ್ಕಳಬಳ್ಳಿಯ ಮೂಲಕ ದೊರೆಯುತ್ತವೆ. ಮಗುವಿನ ಸುತ್ತಲೂ ಇರುವ ಆಮ್ನಿಯೋಟಿಕ್ ದ್ರವವು ಅದನ್ನು ಸುರಕ್ಷಿತವಾಗಿ ಕಾಪಾಡುತ್ತದೆ.

ವಿಜ್ಞಾನದ ದೃಷ್ಟಿಯಿಂದ ನೋಡಿದರೆ, ಗರ್ಭದಲ್ಲಿರುವ ಮಗು ನೀರಿನೊಳಗೆ ಉಸಿರಾಡುವುದಿಲ್ಲ ; ಬದಲಾಗಿ, ಸಂಪೂರ್ಣ ವಿಭಿನ್ನ ಜೈವಿಕ ವ್ಯವಸ್ಥೆಯ ಮೂಲಕ ಬದುಕುತ್ತದೆ. ಆದರೂ, ಆ ಪರಿಸ್ಥಿತಿ ಭೂಮಿಯ ಮೇಲಿನ ಜೀವನಕ್ಕಿಂತ ಸಂಪೂರ್ಣ ವಿಭಿನ್ನವಾದ ಒಂದು ಅದ್ಭುತ ಅನುಭವ ಎನ್ನುವುದಂತೂ ಅಷ್ಟೇ ಸತ್ಯ.

**ಪ್ರಕೃತಿಯ ಮೊದಲ ಪಾಠಹೊಂದಿಕೊಳ್ಳುವ ಶಕ್ತಿ**

ಮನುಷ್ಯನು ಹುಟ್ಟಿದ ಕ್ಷಣದಿಂದಲೇ ಬದುಕುವುದನ್ನು ಕಲಿಯುವುದಿಲ್ಲ. ಅವನು ಹುಟ್ಟುವ ಮೊದಲೇ ಹೊಂದಿಕೊಳ್ಳುವುದನ್ನು ಕಲಿತಿರುತ್ತಾನೆ.

ಒಂಬತ್ತು ತಿಂಗಳು ಒಂದೇ ಸಣ್ಣ ಜಾಗದಲ್ಲಿ ಬೆಳೆಯುತ್ತಾನೆ.

ಕತ್ತಲೆಯಲ್ಲಿಯೇ ಬೆಳಕನ್ನು ಕಾಣುವ ತಯಾರಿ ಮಾಡಿಕೊಳ್ಳುತ್ತಾನೆ.

ಹೊರಗಿನ ಜಗತ್ತನ್ನು ನೋಡದೆ, ಅದರಿಗಾಗಿ ತನ್ನನ್ನು ರೂಪಿಸಿಕೊಳ್ಳುತ್ತಾನೆ.

**ಇದು ನಮಗೆ ಪ್ರಕೃತಿ ನೀಡುವ ಮೊದಲ ಸಂದೇಶ:** ಬದಲಾವಣೆ ಭಯವಲ್ಲ; ಅದು ಬೆಳವಣಿಗೆಯ ಆರಂಭ!

**ಇಂದಿನ ಬದುಕಿಗೆ ಈ ಪಾಠ ಏಕೆ ಅಗತ್ಯ :** ಇಂದಿನ ಕಾಲದಲ್ಲಿ ಆತಂಕ, ಒತ್ತಡ, ನಿರಾಶೆ ಮತ್ತು ಆತ್ಮವಿಶ್ವಾಸದ ಕೊರತೆ ನನ್ನಂಥ ಅನೇಕ ಜನರನ್ನು ಕಾಡುತ್ತಿದೆ. ಒಂದು ಪರೀಕ್ಷೆಯಲ್ಲಿ ಸೋತರೆ ಜೀವನವೇ ಮುಗಿದಂತೆ ಭಾವಿಸುವ ವಿದ್ಯಾರ್ಥಿಗಳು ಒಂದು ಉದ್ಯೋಗ ಕಳೆದುಕೊಂಡರೆ ಭವಿಷ್ಯವೇ ಕತ್ತಲೆಯಾಗಿದೆ ಎನ್ನುವ ಯುವಕರು

**ಒಂದು ವೈಫಲ್ಯದಿಂದ ಕನಸುಗಳನ್ನೇ ಕೈಬಿಡುವವರು**

ಸಂಸಾರದ ಒಂದು ನೋವಿಗೆ ಆತ್ಮಹತ್ಯೆಯೇ ಗತಿ ಎಂದು ಗೋಳಾಡುವವರು .

ಇವರೆಲ್ಲರೂ ಒಂದು ವಿಷಯವನ್ನು ನೆನಪಿಸಿಕೊಳ್ಳಬೇಕು.

ನೀವು ಈಗ ಎದುರಿಸುತ್ತಿರುವ ಸಮಸ್ಯೆಗಳು ನಿಮ್ಮ ಜೀವನದ ಮೊದಲ ಹೋರಾಟವಲ್ಲ.

ನಿಮ್ಮ ಮೊದಲ ಹೋರಾಟ ಹಾಗೂ ಜಯವೇ ಗರ್ಭದಲ್ಲಿನ ಆ ಒಂಬತ್ತು ತಿಂಗಳ ಪಯಣ.

**ಜೀವನ ಎಂದರೆ ನಿರಂತರ ರೂಪಾಂತರ:** ಚಿಟ್ಟೆಯಾಗುವ ಮೊದಲು ಹುಳುವಿನ ಜೀವನ ಇರುತ್ತದೆ. ಬೀಜ ಮೊಳಕೆಯಾಗಲು ಮಣ್ಣಿನೊಳಗೆ ಹುದುಗಿರಬೇಕು. ಇಟ್ಟಿಗೆ ಬೆಂಕಿಯಲ್ಲಿ ಬೆಂದೇ ಬಲವಾಗಬೇಕು. ಅದೇ ರೀತಿ ಮನುಷ್ಯನೂ ಸಂಕಷ್ಟಗಳ ಮೂಲಕವೇ ಗಟ್ಟಿಯಾಗುತ್ತಾನೆ.ಆದ್ದರಿಂದ ಸಮಸ್ಯೆಗಳು ನಮ್ಮನ್ನು ಚೂರು ಮಾಡಲು ಬರುವುದಿಲ್ಲ;ಬದಲಾಗಿ ನಮ್ಮೊಳಗಿನ ಸಾಮರ್ಥ್ಯವನ್ನು ಹೊರತರುವುದಕ್ಕೆ ಬರುತ್ತವೆ.ಅಲ್ಲವೇ

**ವಿಜ್ಞಾನ ಮತ್ತು ಪ್ರೇರಣೆ ಎರಡೂ ಜೊತೆಯಾಗಬೇಕು:** ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಅನೇಕ ವಿಡಿಯೋಗಳು ವೈಜ್ಞಾನಿಕ ಸಂಗತಿಗಳನ್ನು ಪ್ರೇರಣಾತ್ಮಕ ಸಂದೇಶಗಳೊಂದಿಗೆ ಜೋಡಿಸುತ್ತವೆ.ಆದರೆ ಅವನ್ನು ಅಕ್ಷರಶಃ ವೈಜ್ಞಾನಿಕ ಸತ್ಯವೆಂದು ಅಲ್ಲ, ಜೀವನದ ರೂಪಕವಾಗಿ ಅರ್ಥೈಸಿಕೊಳ್ಳುವುದು ಮುಖ್ಯ.ವಿಜ್ಞಾನ ನಮಗೆ ಹೇಗೆ ಎಂದು ಹೇಳುತ್ತದೆ.

ಪ್ರೇರಣೆ ಏಕೆ ಎಂದು ಪ್ರಶ್ನಿಸುತ್ತದೆ.ಈ ಎರಡೂ ಒಂದಾದಾಗ ಬದುಕಿನ ಅರ್ಥ ಇನ್ನಷ್ಟು ಸುಂದರವಾಗುತ್ತದೆ.

**ನಾವು ನಿಜವಾಗಿಯೂ ದುರ್ಬಲರೇ :** ಒಂದು ಜೀವಕೋಶದಿಂದ ಆರಂಭವಾದ ನಮ್ಮ ಪಯಣ ಇಂದು ಕೋಟ್ಯಂತರ ಜೀವಕೋಶಗಳ ಅದ್ಭುತ ದೇಹವಾಗಿ ಬೆಳೆದಿದೆ ಎಂದರೆ ಇದಕ್ಕಿಂತ ವಿಸ್ಮಯ ಮತ್ತೊಂದಿದೆಯೇ ಮೊದಲ ಉಸಿರನ್ನು ಪಡೆಯುವ ಮೊದಲೇ ಬದುಕಲು ಕಲಿತವರು ನಾವು. ಮೊದಲ ಮಾತನ್ನು ಆಡದೇ ಸಂಬಂಧಗಳನ್ನು ಕಟ್ಟಿಕೊಂಡವರು ನಾವು. ಮೊದಲ ಹೆಜ್ಜೆ ಇಡುವ ಮುನ್ನವೇ ಅನೇಕ ಬೆಳವಣಿಗೆಯ ಹಂತಗಳನ್ನು ದಾಟಿದವರು ನಾವು.ಹೀಗಿರುವಾಗ ಒಂದು ಸೋಲು, ಒಂದು ನಿರಾಶೆ, ಒಂದು ಅಡೆತಡೆ ನಮ್ಮ ಬದುಕಿನ ಅಂತ್ಯವಾಗಲು ಹೇಗೆ ಸಾಧ್ಯ

ಪ್ರತಿ ಬಾರಿ ಜೀವನ ನಮ್ಮನ್ನು ಪರೀಕ್ಷಿಸಿದಾಗ, ಕನ್ನಡಿಯ ಮುಂದೆ ನಿಂತು ಒಂದು ಮಾತು ಹೇಳಿಕೊಳ್ಳೋಣ

ನಾನು ಈ ಜಗತ್ತಿಗೆ ಬಂದ ಕ್ಷಣವೇ ಒಂದು ಅದ್ಭುತದ ಸಾಕ್ಷಿ. ಒಂಬತ್ತು ತಿಂಗಳ ಗರ್ಭಯಾತ್ರೆಯನ್ನು ಜಯಿಸಿ ಬಂದ ನಾನು, ಇಂದಿನ ಸವಾಲುಗಳನ್ನೂ ಗೆಲ್ಲಬಲ್ಲೆ. ಜೀವನ ನಮ್ಮನ್ನು ಸೋಲಿಸಲು ಹುಟ್ಟಿಸಿಲ್ಲ. ನಮ್ಮ ಜನನವೇ ನಮ್ಮ ಮೊದಲ ಸಾಹಸ ಹಾಗೂ ವಿಜಯದ ಸಂಕೇತ! ಆ ನೆನಪನ್ನು ಉಳಿಸಿಕೊಂಡರೆ, ಭಯಕ್ಕೆ ಜಾಗವಿರುವುದಿಲ್ಲ; ಧೈರ್ಯವೇ ನಮ್ಮ ಶಾಶ್ವತ ಸಂಗಾತಿಯಾಗುತ್ತದೆ!

ತಾಯಿಯ ಗರ್ಭದ ನೀರಿನಲ್ಲಿ ಆರಂಭವಾದ ನಮ್ಮ ಬದುಕಿನ ಪಯಣ, ಸಂಕಷ್ಟಗಳ ಸಾಗರದಲ್ಲೂ ಮುಳುಗದಂತೆ ಬದುಕುವುದನ್ನು ಕಲಿಸುತ್ತದೆ. ನಮ್ಮ ಮೊದಲ ಜಯವನ್ನು ನೆನಪಿಸಿಕೊಳ್ಳುವವನು, ಕೊನೆಯವರೆಗೂ ಸೋಲುವುದಿಲ್ಲ.

ಸಾಮಾನ್ಯವಾಗಿ ಜೀವನದಲ್ಲಿ ನಾವು ಗೆದ್ದ ದೊಡ್ಡ ಯುದ್ಧವನ್ನು ನೆನಪಿಸಿಕೊಳ್ಳುವುದಿಲ್ಲ; ಆದರೆ ಸೋತ ಸಣ್ಣ ಯುದ್ಧಗಳನ್ನು ಮಾತ್ರ ನೆನಪಿಟ್ಟುಕೊಳ್ಳುವುದು ಎಂಥ ವಿಪರ್ಯಾಸವಲ್ಲವೇ

ಗರ್ಭದ ವಿಜ್ಞಾನ (Science Corner)

ತಾಯಿಯ ಗರ್ಭದಲ್ಲಿರುವ ಮಗು ಸಂಪೂರ್ಣವಾಗಿ ನೀರಿನಂತಹ ಆಮ್ನಿಯೋಟಿಕ್ ದ್ರವ (Amniotic Fluid) ದಿಂದ ಆವೃತವಾಗಿರುತ್ತದೆ. ಈ ದ್ರವವು ಮಗುವಿಗೆ ಕೇವಲ ರಕ್ಷಣೆಯನ್ನು ಮಾತ್ರ ನೀಡುವುದಿಲ್ಲ; ಅದರ ಬೆಳವಣಿಗೆಗೆ ಅತ್ಯಂತ ಅನುಕೂಲಕರ ವಾತಾವರಣವನ್ನೂ ಒದಗಿಸುತ್ತದೆ. ಆದರೆ ಇಲ್ಲಿ ಒಂದು ಮುಖ್ಯ ಸಂಗತಿ ತಿಳಿಯಬೇಕು.

**ಮಗು ಮೀನಿನಂತೆ ನೀರಿನಲ್ಲಿರುವ ಆಮ್ಲಜನಕವನ್ನು** ಉಸಿರಾಡುವುದಿಲ್ಲ. ಗರ್ಭದಲ್ಲಿರುವಾಗ ಅದರ ಶ್ವಾಸಕೋಶಗಳು ಸಂಪೂರ್ಣವಾಗಿ ಕಾರ್ಯನಿರ್ವಹಿಸುವುದಿಲ್ಲ. ಮಗುವಿಗೆ ಬೇಕಾದ ಆಮ್ಲಜನಕ ಮತ್ತು ಪೋಷಕಾಂಶಗಳು ತಾಯಿಯ ರಕ್ತದಿಂದ ಪ್ಲಾಸೆಂಟಾ (ಜರಾಯು) ಮತ್ತು ಹೊಕ್ಕಳಬಳ್ಳಿ (Umbilical Cord) ಮೂಲಕ ತಲುಪುತ್ತವೆ.ಆಮ್ನಿಯೋಟಿಕ್ ದ್ರವವು ಮಗುವನ್ನು ಹೊರಗಿನ ಆಘಾತಗಳಿಂದ ರಕ್ಷಿಸುತ್ತದೆ, ದೇಹದ ಉಷ್ಣತೆಯನ್ನು ಸಮತೋಲನದಲ್ಲಿಡುತ್ತದೆ ಹಾಗೂ ಸ್ನಾಯುಗಳು ಮತ್ತು ಮೂಳೆಗಳು ಸರಿಯಾಗಿ ಬೆಳೆಯಲು ಸಹಕಾರಿಯಾಗಿದೆ.ಅಂದರೆ, ಗರ್ಭವು ಕೇವಲ ಹುಟ್ಟುವ ಸ್ಥಳ ವಲ್ಲ; ಅದು ಪ್ರಕೃತಿಯ ಅತ್ಯಂತ ಸುರಕ್ಷಿತ ಪ್ರಯೋಗಾಲಯ!

**ವೈಜ್ಞಾನಿಕ ಸತ್ಯ ಮತ್ತು ಪ್ರೇರಣಾತ್ಮಕ ರೂಪಕ:** ಸಾಮಾಜಿಕ ಜಾಲತಾಣಗಳಲ್ಲಿ ಶಿಶುವು ಒಂಬತ್ತು ತಿಂಗಳು ನೀರಿನೊಳಗೆ ಉಸಿರಾಡುವುದು ಹೇಗೇ ಎಂಬ ಮಾತುಗಳು ಹೆಚ್ಚಾಗಿ ಕೇಳಿಬರುತ್ತವೆ.ವೈಜ್ಞಾನಿಕವಾಗಿ ನೋಡಿದರೆ ಇದು ನಿಖರವಾದ ಹೇಳಿಕೆಯಲ್ಲ.ಮಗು ನೀರಿನೊಳಗೆ ಉಸಿರಾಡುವುದಿಲ್ಲ. ಅದು ತಾಯಿಯ ದೇಹದ ಮೂಲಕವೇ ಆಮ್ಲಜನಕ ಪಡೆಯುತ್ತದೆ.ಆದರೆ ಈ ಮಾತಿನ ಹಿಂದಿನ ಸಂದೇಶ ಬಹಳ ಅಮೂಲ್ಯ.ಜೀವನದ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿಯೂ ಪ್ರಕೃತಿಯು ನಮ್ಮನ್ನು ಸುರಕ್ಷಿತವಾಗಿ ಬೆಳೆಸಿದೆ. ಆದ್ದರಿಂದ ಜೀವನದ ಸಂಕಷ್ಟಗಳನ್ನು ಎದುರಿಸುವ ಶಕ್ತಿ ನಮ್ಮೊಳಗೇ ಇದೆ!

ಈ ವಿಚಾರವಾಗಿ ಒಂದು ಸಣ್ಣ ನೈಜ ಕಥೆ ..

ಜಪಾನ್‌ನ ಒಬ್ಬ ವೈದ್ಯರ ಬಳಿಗೆ ಒಮ್ಮೆ ತುಂಬು ದಿನಗಳ ಗರ್ಭಿಣಿ ಮಹಿಳೆ ಬಂದಳು.

ಡಾಕ್ಟರ್, ನನ್ನ ಮಗುವು ಹುಟ್ಟಿದ ಮೇಲೆ ನಾನು ಮೊದಲಿಗೆ ಏನು ಕಲಿಸಬೇಕು ಎಂದು ಕೇಳಿದಳು. ವೈದ್ಯರು ನಗುತ್ತಾ ಉತ್ತರಿಸಿದರು.

ನಿಮ್ಮ ಮಗು ಕಲಿಯುವುದನ್ನು ಈಗಾಗಲೇ ಒಂಬತ್ತು ತಿಂಗಳ ಹಿಂದೆಯೇ ಆರಂಭಿಸಿದೆ. ನೀವು ಪ್ರಶಾಂತವಾಗಿದ್ದರೆ ಅದು ಶಾಂತಿಯನ್ನು ಕಲಿಯುತ್ತದೆ. ನೀವು ಧೈರ್ಯವಾಗಿದ್ದರೆ ಅದು ಧೈರ್ಯವನ್ನು ಕಲಿಯುತ್ತದೆ.

ಈ ಮಾತು ಕೇವಲ ವೈದ್ಯಕೀಯ ಸತ್ಯವಲ್ಲ; ಬದುಕಿನ ದಿವ್ಯವಾಣಿಯೂ ಹೌದು. ಜೀವನದ ಮೊದಲ ಪಾಠ ಪುಸ್ತಕಗಳಿಂದ ಆರಂಭವಾಗುವುದಿಲ್ಲ.

ತಾಯಿಯ ಗರ್ಭದಲ್ಲಿಯೇ ಆರಂಭವಾಗುತ್ತದೆ.ಸ್ವಾಮಿ ವಿವೇಕಾನಂದರ ಮಾತು ನೆನಪಾಗುತ್ತದೆ ಎದ್ದೇಳಿ, ಜಾಗೃತರಾಗಿ, ಗುರಿ ತಲುಪುವವರೆಗೆ ನಿಲ್ಲಬೇಡಿ. ಈ ಮಾತು ಕೇವಲ ವಯಸ್ಕರಿಗೆ ಮಾತ್ರವಲ್ಲ.ನಾವು ಹುಟ್ಟಿದ ಕ್ಷಣದಿಂದಲೇ ನಮ್ಮ ಅಸ್ತಿತ್ವ ಈ ಸಂದೇಶವನ್ನು ಸಾರುತ್ತಿದೆ. ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಹೇಳಿದ್ದರು

**ಕನಸು ಎಂದರೆ ನಿದ್ರೆಯಲ್ಲಿ ಕಾಣುವುದಲ್ಲ;** ನಿದ್ರೆ ಬಾರದಂತೆ ಮಾಡುವುದೇ ನಿಜವಾದ ಕನಸು. ತಾಯಿಯ ಗರ್ಭದಲ್ಲಿದ್ದ ಪುಟ್ಟ ಜೀವಿಗೂ ಒಂದು ಗುರಿಯಿತ್ತು. ಅದು ದಿನಗಳು ತುಂಬಿವವರೆಗೂ ಆ ಪರಿಸರದಲ್ಲಿಯೇ ಹೋರಾಡಿ ಜನ್ಮ ಪಡೆಯುವುದು. ಅದನ್ನು ಸಾಧಿಸಿತು.ಹಾಗಾದರೆ ನಮ್ಮ ಕನಸುಗಳೂ ಅಸಾಧ್ಯವೇ

ಸ್ವಲ್ಪ ಯೋಚಿಸಿ ನೋಡಿ, ನಾವು ನಮ್ಮ ಜೀವನದ ಮೊದಲ ಹೋರಾಟವನ್ನೇ ಮರೆತುಬಿಟ್ಟಿದ್ದೇವೆ.ಗರ್ಭದಲ್ಲಿದ್ದ ಆ ಪುಟ್ಟ ಜೀವಿಯಾದಾಗಲೇ, ಒಂದು ದಿನ ಈ ವಿಶಾಲ ಜಗತ್ತಿಗೆ ಬಂದೇ ಬರುತ್ತೇನೆ ಎಂಬ ನಂಬಿಕೆಯಿಂದಲೇ ಎಳೆತನದಲ್ಲೇ ಸಮರ ಸಾರಿದ ನಾವು ಇಂದು ದುರ್ಬಲರಾದ ಕಾರಣವೇನೂ ಆ ಎಳೆತನದಲ್ಲಿದ್ದ ಆ ಧೈರ್ಯ ಈಗಿಲ್ಲ ಯಾಕೇ ಜೀವನದ ಮೊದಲ ವಿಜಯ ನಮಗೆ ಕಲಿಸುವ ಐದು ಮಹಾಪಾಠಗಳು

ಬದಲಾವಣೆ ಭಯವಲ್ಲ, ಅದು ಬೆಳವಣಿಗೆಯ ಸೂಚನೆ!


ಗರ್ಭದಿಂದ ಹೊರಬರುವುದು ಮನುಷ್ಯನ ಜೀವನದ ಮೊದಲ ದೊಡ್ಡ ಬದಲಾವಣೆ.ಬದಲಾವಣೆಯನ್ನು ಸ್ವೀಕರಿಸಿದಾಗ ಮಾತ್ರ ಹೊಸ ಬದುಕು ಆರಂಭವಾಗುತ್ತದೆ.

**2. ಕತ್ತಲೆ ಎಂದರೆ ಅಂತ್ಯವಲ್ಲ:** ಒಂಬತ್ತು ತಿಂಗಳು ಬೆಳಕೇ ಕಾಣದೆ ಇದ್ದ ಜೀವಿ, ನಂತರ ಸೂರ್ಯನನ್ನು ನೋಡುತ್ತದೆ.ಹೀಗಿರುವಾಗ ಜೀವನದ ಕತ್ತಲೆ ದಿನಗಳು ಶಾಶ್ವತವೆಂದು ಹೇಗೆ ಹೇಳಬಹುದು

**3. ಕಾಯುವವರಿಗೇ ಫಲ ಸಿಗುತ್ತದೆ:** ಪ್ರಕೃತಿಗೆ ಆತುರವಿಲ್ಲ.ಮಗು ಒಂಬತ್ತು ತಿಂಗಳು ಪೂರ್ಣಗೊಳ್ಳುವವರೆಗೂ ಹೊರಬರುವುದಿಲ್ಲ.ಅದೇ ರೀತಿ ಬದುಕಿನ ಅನೇಕ ಯಶಸ್ಸುಗಳಿಗೂ ಸಮಯ ಬೇಕಾಗುತ್ತದೆ.

**4. ಪ್ರತಿಯೊಬ್ಬರೊಳಗೂ ಅಸಾಧಾರಣ ಸಾಮರ್ಥ್ಯವಿದೆ:** ಒಂದು ಸೂಕ್ಷ್ಮ ಜೀವಕೋಶದಿಂದ ಆರಂಭವಾದ ಪಯಣ ಇಂದು ಮಾತನಾಡುವ, ಯೋಚಿಸುವ, ಕನಸು ಕಾಣುವ,ಭೂಮಂಡಲವನ್ನೇ ಆಳುವಂಥ ಆಕೃತಿಯಾಗಿ ಬೆಳೆದಿದೆ.ಇದಕ್ಕಿಂತ ದೊಡ್ಡ ಪವಾಡ ಮತ್ತೇ ಯಾವುದಿದೆ

**5. ಧೈರ್ಯವು ನಮ್ಮ ಜನ್ಮಸಿದ್ಧ ಹಕ್ಕು:** ನಾವು ಧೈರ್ಯವನ್ನು ಹೊರಗಿನಿಂದ ಪಡೆಯಬೇಕಾಗಿಲ್ಲ.ಅದು ನಮ್ಮೊಳಗೇ ಹುಟ್ಟಿದೆ.ಏಕೆಂದರೆ ನಾವು ಬದುಕಿನ ಮೊದಲ ಪರೀಕ್ಷೆಯನ್ನೇ ಗೆದ್ದು ಬಂದಿದ್ದೇವೆ.



ಬುದ್ಧನು ಹೇಳುತ್ತಾನೆ ನಿಮ್ಮನ್ನು ನೀವು ಗೆದ್ದರೆ, ಸಾವಿರ ಯುದ್ಧಗಳನ್ನು ಗೆದ್ದವನಿಗಿಂತ ನೀವು ಶ್ರೇಷ್ಠರು. ನಮ್ಮೊಳಗಿನ ಭಯವನ್ನು ಗೆಲ್ಲುವುದು ಜೀವನದ ನಿಜವಾದ ವಿಜಯ.

**ಇಂದಿನ ಯುವಜನತೆಗೆ ಒಂದು ಮಾತು:** ಒಂದು ಪರೀಕ್ಷೆಯಲ್ಲಿ ಅಂಕ ಕಡಿಮೆಯಾದರೆ ಜೀವನ ಮುಗಿಯುವುದಿಲ್ಲ.ಒಂದು ಉದ್ಯೋಗ ಕೈತಪ್ಪಿದರೆ ಭವಿಷ್ಯ ಕತ್ತಲಾಗುವುದಿಲ್ಲ.ಒಂದು ಸಂಬಂಧ ಮುರಿದರೆ ಬದುಕಿನ ಅರ್ಥವೇ ಕಳೆದುಹೋಗುವುದಿಲ್ಲ.ಗರ್ಭದಲ್ಲಿದ್ದ ಪುಟ್ಟ ಜೀವಿ ಯಾವ ಪರಿಸ್ಥಿತಿಯಲ್ಲೂ ಬೆಳೆಯುವುದನ್ನು ನಿಲ್ಲಿಸಲಿಲ್ಲ.ನಾವೂ ನಿಲ್ಲಬಾರದು!

ಪ್ರತಿ ಬಾರಿ ಜೀವನ ನಮ್ಮನ್ನು ಪರೀಕ್ಷಿಸಿದಾಗ, ಕನ್ನಡಿಯ ಮುಂದೆ ನಿಂತು ಒಂದು ಪ್ರಶ್ನೆ ಕೇಳಿಕೊಳ್ಳೋಣ.

ಈ ಜಗತ್ತಿಗೆ ಬರಲು ನಾನು ಮೊದಲೇ ಒಂದು ಅದ್ಭುತ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿದ್ದೇನೆ. ಹಾಗಿದ್ದರೆ ಇಂದಿನ ಈ ಸಣ್ಣ ಸಮಸ್ಯೆ ನನ್ನನ್ನು ಹೇಗೆ ಸೋಲಿಸಬಹುದು

ಜೀವನ ನಮ್ಮನ್ನು ಸೋಲಿಸಲು ಬಂದಿಲ್ಲ.ಜೀವನವೇ ನಮ್ಮ ಮೊದಲ ವಿಜಯದ ನೆನಪು.ಆ ನೆನಪನ್ನು ಜಾಗೃತವಾಗಿಟ್ಟುಕೊಂಡರೆ, ಭಯ ಕರಗುತ್ತದೆ ಆತ್ಮವಿಶ್ವಾಸ ಅರಳುತ್ತದೆ ಬದುಕು ಹೊಸ ಅರ್ಥ ಪಡೆಯುತ್ತದೆ.ಅಲ್ಲವೇ

**ವಂದನೆಗಳು.**



# ಅರ್ಜಿ ಆಹ್ವಾನ

**ಮಡಿಕೇರಿ:** ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಂದ 2026–27 ನೇ ಸಾಲಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ನೀಡಲಾಗುವ ದೂರ ಶಿಕ್ಷಣ ಮಾದರಿಯ ಉಚಿತ ಪದವಿ/ಸ್ನಾತ್ತಕೋತ್ತರ ಪದವಿ ಕೋರ್ಸುಗಳಿಗೆ ಆನ್‌ಲೈನ್‌ನ https://dom.karnataka.gov.in ಮತ್ತು https://minority.ksouportal.com ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ಇದರ ಸದುಪಯೋಗ ಪಡಿಸಿಕೊಳ್ಳಲು ಕೋರಿದೆ. ಅರ್ಜಿ ಸಲ್ಲಿಸಲು ಜುಲೈ, 31 ಕೊನೆಯ ದಿನವಾಗಿದೆ. ಅಭ್ಯರ್ಥಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಅಭ್ಯರ್ಥಿಯು ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿರಬೇಕು (ಮುಸ್ಲಿಂ, ಜೈನ್ ಬೌದ್ಧ, ಸಿಖ್ ಮತ್ತು ಪಾರ್ಸಿ ಅಭ್ಯರ್ಥಿಯ ಕುಟುಂಬದ ವಾರ್ಷಿಕ ಒಟ್ಟು ಆದಾಯ ರೂ.8 ಲಕ್ಷಗಳನ್ನು ಮೀರಬಾರದು. ಅಭ್ಯರ್ಥಿಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಿಯಮಗಳ ಅನುಸಾರ ಕನಿಷ್ಟ ಶೈಕ್ಷಣಿಕ ಅರ್ಹತೆಯನ್ನು ಪಡೆದಿರಬೇಕು. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸರ್ಕಾರಿ ನೌಕರರಾಗಿರಬಾರದು. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಹಿಂದಿನ ಸಾಲಿನಲ್ಲಿ ಈ ಯೋಜನೆ ಅಡಿಯಲ್ಲಿ ಪ್ರವೇಶಾತಿಯನ್ನು ಪಡೆದಿರಬಾರದು. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಯಾವುದೇ ಕೋರ್ಸಿನಲ್ಲಿ ಪ್ರಸ್ತುತ ಪ್ರವೇಶಾತಿಯನ್ನು ಪಡೆದಿರಬಾರದು.

ಹೆಚ್ಚಿನ ಮಾಹಿತಿಗೆ ಕಚೇರಿ ದೂರವಾಣಿ ಸಂಖ್ಯೆ: 08272–225528/ 220214 ಹಾಗೂ ಅಲ್ಪಸಂಖ್ಯಾತರ ಸಹಾಯಕವಾಣಿ ಸಂಖ್ಯೆ: 8277799990, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಾಯವಾಣಿ ಸಂಖ್ಯೆ 8690544522, 944866880, 9945366062, 9113512565, 9611418726, 9686576399, 9035395137, 8123469017, 9844010407 ನ್ನು ಹಾಗೂ ತಾಲ್ಲೂಕು ಮಾಹಿತಿ ಕೇಂದ್ರ ಸೋಮವಾರಪೇಟೆ ದೂ.ಸಂ. 8548068519, ತಾಲ್ಲೂಕು ಮಾಹಿತಿ ಕೇಂದ್ರ ವಿರಾಜಪೇಟೆ ದೂರವಾಣಿ ಸಂಖ್ಯೆ 9900731037 ಹಾಗೂ ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ಮೌಲಾನಾ ಆಜಾದ್ ಭವನ, ಎಫ್‌ಎಂಸಿ ಕಾಲೇಜು ಹತ್ತಿರ, ಮಡಿಕೇರಿ ಕೊಡಗು ಜಿಲ್ಲೆ 9972799091 ನ್ನು ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸಿ.ಎಸ್.ಸಚಿನ್ ಅವರು ತಿಳಿಸಿದ್ದಾರೆ.

# ಅರ್ಜಿ ಆಹ್ವಾನ

**ಮಡಿಕೇರಿ:** ಕುಶಾಲನಗರ ತಾಲ್ಲೂಕು ಕುಶಾಲನಗರ ವ್ಯಾಪ್ತಿಯ ಅಲ್ಪಸಂಖ್ಯಾತರ ಮಹಿಳಾ ಪದವಿ ಪೂರ್ವ ಕಾಲೇಜು ಇಲ್ಲಿಗೆ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ 2026–27ನೇ ಸಾಲಿಗೆ 180 ಸಂಖ್ಯಾಬಲದ (ಪ್ರತಿ ವಿಭಾಗಕ್ಕೆ 60 ರಂತೆ) ಸಂಖ್ಯಾಬಲದೊಂದಿಗೆ (ವಿಜ್ಞಾನ ವಿಭಾ–ಪಿಸಿಎಂಬಿ, ವಾಣಿಜ್ಯ ವಿಭಾಗ ಸಿಇಬಿಎ, ಕಲಾ ವಿಭಾಗ ಹೆಚ್‌ಇಪಿಎಸ್ ವಿಷಯಗಳಿಗೆ) ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ಕೂಡಲೇ ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಕೋರಿದೆ. ಹೆಚ್ಚಿನ ಮಾಹಿತಿಗೆ ಕಚೇರಿ ದೂ.ಸಂ. 08272–225528, 220214 ಹಾಗೂ ಪ್ರಾಂಶುಪಾಲರು ಅಲ್ಪಸಂಖ್ಯಾತರ ಮಹಿಳಾ ಪದವಿ ಪೂರ್ವ ಕಾಲೇಜು ಕುಶಾಲನಗರ ತಾಲ್ಲೂಕು, ಕುಶಾಲನಗರ ದೂ.ಸಂ. 6361802037, ತಾಲ್ಲೂಕು ಮಾಹಿತಿ ಕೇಂದ್ರ ಸೋಮವಾರಪೇಟೆ ದೂ.ಸಂ. 8548068519, ತಾಲ್ಲೂಕು ಮಾಹಿತಿ ಕೇಂದ್ರ ವಿರಾಜಪೇಟೆ ದೂ.ಸಂ.9900731037 ಹಾಗೂ ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಮೌಲಾನಾ ಆಜಾದ್ ಭವನ, ಎಫ್‌ಎಂಸಿ ಕಾಲೇಜು ಹತ್ತಿರ, ಮಡಿಕೇರಿ ಕೊಡಗು ಜಿಲ್ಲೆ. 9972799091 ನ್ನು ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸಿ.ಎಸ್.ಸಚಿನ್ ಅವರು ತಿಳಿಸಿದ್ದಾರೆ.

# ಜು.24 ರಿಂದ ಕಾಲೇಜು ಉಪನ್ಯಾಸಕರಿಗೆ ಹಾಗೂ ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರಿಗೆ ತರಬೇತಿ

**ಮಡಿಕೇರಿ:** ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕೊಡಗು ಜಿಲ್ಲಾ ಸಂಸ್ಥೆಯ ವತಿಯಿಂದ ಜುಲೈ, 24 ರಿಂದ ಜುಲೈ, 30 ರವರೆಗೆ ಕಾಲೇಜು ಉಪನ್ಯಾಸಕರಿಗೆ ಹಾಗೂ ಪ್ರಾಥಮಿಕ/ ಪ್ರೌಢಶಾಲಾ ಶಿಕ್ಷಕರಿಗೆ ಜಿಲ್ಲಾ ಮಟ್ಟದಲ್ಲಿ ಮೂಲ ಮತ್ತು ಮುಂದುವರೆದ ತರಬೇತಿಯು ಕುಶಾಲನಗರ ಕೊಡವ ಸಮಾಜದಲ್ಲಿ ನಡೆಯಲಿದೆ ಎಂದು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ಜಿಲ್ಲಾ ಸಂಘಟಕರಾದ ಯು.ಸಿ.ದಮಯಂತಿ ಅವರು ತಿಳಿಸಿದ್ದಾರೆ.

# ಜು.23 ರಂದು ಸಾಧಕರೊಂದಿಗೆ ಸಂವಾದ ಕಾರ್ಯಕ್ರಮ

**ಮಡಿಕೇರಿ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗ ವತಿಯಿಂದ ಜುಲೈ, 23 ರಂದು ಬೆಳಗ್ಗೆ 11 ಗಂಟೆಗೆ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಲಿದೆ.

ತಿಂಗಳ ಅತಿಥಿ ಪದ್ಮಶ್ರೀ ಪುರಸ್ಕೃತ ಹಿರಿಯ ಕಲಾವಿದರು ಹಾಗೂ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷರಾದ ಡಾ.ರಾಣಿ ಮಾಚಯ್ಯ ಅವರೊಂದಿಗೆ ಸಂವಾದ ನಡೆಯಲಿದೆ. ಸಂವಾದದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೈಸೂರು ವಿಭಾಗದ ಜಂಟಿ ನಿರ್ದೇಶಕರಾದ ನಿರ್ಮಲಾ ಮಠಪತಿ ಅವರು ಪಾಲ್ಗೊಳ್ಳಲಿದ್ದಾರೆ.

ರೋಟರಿ ವುಡ್ಸ್‌ನಿಂದ ಜು.26 ರಂದು ಯೋಧನಮನ

ಮಡಿಕೇರಿ ಜು.22(ಕರ್ನಾಟಕ ವಾರ್ತೆ):–ರೋಟರಿ ವುಡ್ಸ್ ಸಂಸ್ಥೆಯ ವತಿಯಿಂದ ಜುಲೈ 26 ರಂದು ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ ಯೋಧ ನಮನ ಕಾರ್ಯಕ್ರಮ ಆಯೋಜಿಸಲಾಗಿದೆ.

ನಗರದ ರೋಟರಿ ಸಭಾಂಗಣದಲ್ಲಿ ಜುಲೈ 26 ರಂದು ಬೆಳಗ್ಗೆ 10.30 ಗಂಟೆಗೆ ಆಯೋಜಿತ ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮವನ್ನು ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ಅವರು ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರೋಟರಿ ಜಿಲ್ಲೆ 3181 ನ ಕ್ಲಬ್ಬಿನ ವಿಸ್ತರಣಾ ಸಮಿತಿ ಅಧ್ಯಕ್ಷ ಅನಿಲ್ ಎಚ್.ಟಿ, ರೋಟರಿ ವಲಯ 6 ರ ಸಹಾಯಕ ಗವರ್ನರ್ ಎಂ.ಡಿ.ರಂಗಸ್ವಾಮಿ, ವಲಯ ಸೇನಾನಿ ಕೆ.ವಸಂತ್ ಕುಮಾರ್, ರೋಟರಿ ವುಡ್ಸ್ ಕಾರ್ಯದರ್ಶಿ ಸ್ಮಿತಾಚಂಗಪ್ಪ ಪಾಲ್ಗೊಳ್ಳಲಿದ್ದು, ಕಾರ್ಯಕ್ರಮದಲ್ಲಿ ಸೈನಿಕ ದಂಪತಿಗೆ ಸನ್ಮಾನ ನೆರವೇರಲಿದೆ ಎಂದು ರೋಟರಿ ವುಡ್ಸ್ ಅಧ್ಯಕ್ಷೆ ಪ್ರಮೀಳಾ ಕೆ.ಶೆಟ್ಟಿ ತಿಳಿಸಿದ್ದಾರೆ.

# ಮಂಡ್ಯದಲ್ಲಿ ಪ್ರಗತಿಪರರ ಪ್ರತಿಭಟನೆ

## ಧರ್ಮೇಂದ್ರ ಪ್ರಧಾನ್ ಭೂತ ದಹನ

**ಮಂಡ್ಯ:** ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ, ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ದೆಹಲಿಯಲ್ಲಿ ದೇಶದ ಯುವಜನತೆ ಶಾಂತಿಯುತವಾಗಿ ನಡೆಸುತ್ತಿದ್ದ ಸಂದರ್ಭದಲ್ಲಿ ಅವರ ಮೇಲೆ ಲಾಠಿಚಾರ್ಜ್ ಮಾಡಿರುವುದನ್ನು ಖಂಡಿಸಿ ಮಂಡ್ಯ ಪ್ರಗತಿಪರ ಸಂಘಟನೆಗಳು ಇಂದು ಪ್ರತಿಭಟನೆ ನಡೆಸಿದರು.

ಮಂಡ್ಯನಗರದ ಸಂಜಯ ವೃತ್ತದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘ ಸಮಿತಿ ಮತ್ತು ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ದಸಂಸ ಮುಖಂಡ ಎಂ.ವಿ.ಕೃಷ್ಣ ಮಾತನಾಡಿ, ಕೇಂದ್ರ ಸರ್ಕಾರ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ನಡೆಸಿದೆ. ಇದೇ ಕಾರಣಕ್ಕೆ ಸರ್ಕಾರ ಪತನವಾಗಲಿದೆ, ಕೂಡಲೇ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಕುಟುಂಬಗಳಿಗೆ ತಲಾ 1 ಕೋಟಿ ಪರಿಹಾರ ನೀಡಬೇಕು. ಅಲ್ಲದೇ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿರುವ ಪ್ರಕರಣದ ತನಿಖೆಗೆ ಎಸ್‌ಐಟಿ ರಚಿಸಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕೇಂದ್ರ ಸಚಿವ ಧಮೇಂದ್ರ ಪ್ರಧಾನ್ ರವರ ಭೂತ ದಹಿಸಲು ಮುಂದಾದಾಗ ಪ್ರತಿಭಟನಾಕಾರರು ಹಾಗೂ ಪೋಲಿಸರ ನಡುವೆ ಮಾತಿನ ಚಕಮಕಿ ನಡೆಯಿತು. ನಂತರ ಪ್ರತಿಭಟನಾಕಾರ ಕೇಂದ್ರ ಸಚಿವ ಧಮೇಂದ್ರ ಪ್ರಧಾನ್ ಭೂತ ದಹಿಸಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ದಸಂಸ ಸಂಚಾಲಕ ಎಂ.ವಿ.ಕೃಷ್ಣ, ದಲಿತ ಸಂಘ ಸಮಿತಿ ಜಿಲ್ಲಾ ಸಂಚಾಲಕರು ಕೆ.ಜಿ.ಶಿವಮೂರ್ತಿ, ಸೋಮರಾಜು, ಸಿಐಟಿಯು.ಸಿ.ಕುಮಾರಿ, ಕಮ್ಯುನಿಸ್ಟ್ ಪಕ್ಷದ ಟಿ.ಎಲ್.ಕೃಷ್ಣೇಗೌಡ, ಕರುನಾಡ ಸೇವಕರು ಸಂಘಟನೆಯ ನಾಗಣ್ಣಗೌಡ, ಕರವೇ ಜಯರಾಂ, ಅರಸು ಹಿಂದುಳಿದ ವೇದಿಕೆಯ ಸಂದೇಶ್, ಮುಖಂಡರಾದ ನಾರಾಯಣ ಸ್ವಾಮಿ, ನಿರಂಜನ್, ದೊಡ್ಡಯ್ಯ.ಶಿವರುದ್ರಯ್ಯ.ಅಹಿಂದ ಮುಖಂಡರು, ಮುರುಘ, ಉಮೇಶ್‌ಉಮ್ಮಡಹಳ್ಳಿ ಹಾಗೂ ಪ್ರದೀಪ್ ಕುಮಾರ್ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.



# ಎಸ್‌ಐಆರ್ ಪ್ರಕ್ರಿಯೆಯಲ್ಲಿ ಗುರಿ ಸಾಧಿಸಿ: ಸಿಇಒ ನಂದಿನಿ

**ನಾಗಮಂಗಲ:** ಮತದಾರರ ಪರಿಷ್ಕರಣೆ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಹೆಚ್ಚಿನ ಶ್ರಮವಹಿಸಿ ನಿಗದಿತ ಗುರಿ ಸಾಧಿಸುವಂತೆ ಮಂಡ್ಯ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ನಂದಿನಿ ಕರೆ ನೀಡಿದರು.

ನಾಗಮಂಗಲದ ಶ್ರೀಸೌಮ್ಯಕೇಶವಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ತಾಲೂಕು ಸ್ವೀಪ್ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಮತದಾರರ ಜಾಗೃತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ನಾಗಮಂಗಲ ತಾಲೂಕಿನಲ್ಲಿ ಮತದಾರರ ನೋಂದಣಿ ಕಾರ್ಯವು ಶೇ.80ರಿಂದ 85ರಷ್ಟು ಪ್ರಗತಿ ಸಾಧಿಸಿರುವುದು ಗಮನಾರ್ಹ ಸಾಧನೆಯಾಗಿದೆ. ಇನ್ನುಳಿದ ಶೇ.10ರಿಂದ 15ರಷ್ಟು ಮತದಾರರನ್ನು ಗುರುತಿಸಿ ನೋಂದಣಿ ಮಾಡಿಸುವುದು ಸವಾಲಿನ ಕೆಲಸವಾಗಿದೆ. ಹಲವು ಮತದಾರರು ಬೇರೆ ಬೇರೆ ಪ್ರದೇಶಗಳಿಗೆ ತೆರಳಿರುವುದರಿಂದ, ಸ್ಥಳೀಯವಾಗಿ ಲಭ್ಯವಿರುವ ಬಿಎಲ್‌ಒಗಳು ಹಾಗೂ ವಾಸದ ಮನೆಗಳ ಮೂಲಕ ಅವರನ್ನು ಗುರುತಿಸಿ, ಎಲ್ಲರನ್ನೂ ಮತದಾರರ ಪಟ್ಟಿಯಲ್ಲಿ ನೋಂದಾಯಿಸುವ ಕಾರ್ಯ ಕೈಗೊಳ್ಳಬೇಕು ಎಂದು ಸೂಚಿಸಿದರು.

ಪ್ರತಿ ತಾಲೂಕಿನಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿನೂತನ ಕಾರ್ಯಕ್ರಮಗಳನ್ನು ಜಾಗೃತಿ ಕಾರ್ಯಕ್ರಮವಾಗಿ ಆಯೋಜಿಸುವ ನಿರೀಕ್ಷೆ ಇದೆ. ನಾಗಮಂಗಲ ತಾಲೂಕಿನಲ್ಲಿ ವಿಶೇಷವಾಗಿ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ವಿಶೇಷ ಚೇತನರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಹಾಗೂ ವಿವಿಧ ಇಲಾಖೆಗಳ ಸಿಬ್ಬಂದಿ ಒಗ್ಗೂಡಿ ಕಾರ್ಯನಿರ್ವಹಿಸಿರುವುದು ಶ್ಲಾಘನೀಯವಾಗಿದೆ ಎಂದು ಹೇಳಿದರು.




ಭುವನೇಶ್ವರಿ ವೃತ್ತದಲ್ಲಿ ಫ್ಲೆಕ್ಸ್, ಬಂಟಿಂಗ್ಸ್ ನಿಷೇಧ : ಪೌರಾಯುಕ್ತ ಪರಶುರಾಮ್ ಛಲವಾದಿ

# ಸರ್ಕಲ್‌ನಲ್ಲಿ ಫ್ಲೆಕ್ಸ್ ಅಳವಡಿಕೆಯಿಂದ ಸಂಚಾರಕ್ಕೆ ಕಿರಿಕಿರಿ; ಅವಘಡಗಳನ್ನು ತಪ್ಪಿಸಲು ಕಟ್ಟುನಿಟ್ಟಿನ ಕ್ರಮ

**ಚಾಮರಾಜನಗರ:** ನಗರದ ಹೃದಯ ಭಾಗವಾದ ಭುವನೇಶ್ವರಿ ವೃತ್ತದಲ್ಲಿ ಯಾವುದೇ ರೀತಿಯ ಫ್ಲೆಕ್ಸ್ ಮತ್ತು ಬಂಟಿಂಗ್ಸ್‌ಗಳನ್ನು ಹಾಕುವುದನ್ನು ಕಡ್ಡಾಯವಾಗಿ ನಿಷೇಧ ಮಾಡಲಾಗಿದೆ. ಇನ್ನು ಮುಂದೆ ಈ ಸರ್ಕಲ್‌ನಲ್ಲಿ ಫ್ಲೆಕ್ಸ್ ಅಳವಡಿಸಿದರೆ ಕಾನೂನು ರೀತ್ಯಾ ಕ್ರಮ ವಹಿಸಲಾಗುತ್ತದೆ ಎಂದು ನಗರಸಭೆ ಪೌರಾಯುಕ್ತ ಪರಶುರಾಮ್ ಛಲವಾದಿ ತಿಳಿಸಿದರು.



ನಗರದ ಭುವನೇಶ್ವರಿ ವೃತ್ತದಲ್ಲಿ ಪೊಲೀಸ್ ಚೌಕಿ ಉದ್ಘಾಟನಾ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸಾರ್ವಜನಿಕರು ವೃತ್ತದಲ್ಲಿ ಫ್ಲೆಕ್ಸ್ ಹಾವಳಿ ಬಗ್ಗೆ ದೂರಿದ್ದರು. ಈ ಹಿನ್ನೆಲೆಯಲ್ಲಿ ನಗರಸಭೆ ಪೌರಾಯುಕ್ತರಿಗೆ ಸೂಕ್ತ ಮಾರ್ಗದರ್ಶನ ನೀಡಿರುವ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಭುವನೇಶ್ವರಿ ವೃತ್ತದಲ್ಲಿ ಯಾವುದೇ ಮಾದರಿಯ ಫ್ಲೆಕ್ಸ್ ಹಾಗೂ ಬಂಡಿಂಗ್ಸ್ ಅಳವಡಿಸಲು ಅನುಮತಿ ನೀಡಬಾರದು. ಕಾನೂನು ಮೀರಿ ಅಳವಡಿಸಿದರೆ ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದ್ದಾರೆ. ಹೀಗಾಗಿ ಸಾರ್ವಜನಿಕರು ಇನ್ನು ಮುಂದೆ ಭುವನೇಶ್ವರಿ ವೃತ್ತದಲ್ಲಿ ಯಾವುದೇ ರೀತಿ ಫ್ಲೆಕ್ಸ್‌ಗಳನ್ನು ಅಳವಡಿಸಬಾರದು. ಇತರೇ ಸರ್ಕಲ್‌ನಲ್ಲಿ ಫ್ಲೆಕ್ಸ್ ಹಾಗೂ ಬಂಡಿಂಗ್ಸ್ ಹಾಕಲು ನಗರಸಭೆಯಿಂದ ಅನುಮತಿಯನ್ನು ಕಡ್ಡಾಯವಾಗಿ ಪಡೆದುಕೊಂಡು ಅಧಿಕೃತವಾಗಿ ಶುಲ್ಕ ಕಟ್ಟಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಪ್ರಮುಖವಾಗಿ ಭುನವೇಶ್ವರಿ ವೃತ್ತದಲ್ಲಿ ಫ್ಲೆಕ್ಸ್ ಅಳವಡಿಕೆಯಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿತ್ತು. ಸಿಗ್ನಲ್‌ಗಳು ಕಾಣ ಸಿದಂತೆ ಉದ್ದದ ಬೋರ್ಡ್‌ಗಳನ್ನು ಹಾಕುವುದು. ರಸ್ತೆಯ ಬದಿಗಳಲ್ಲಿ ಫ್ಲೆಕ್ಸ್‌ಗಳನ್ನು ಹಾಕುವುದರಿಂದ ಎದುರು ಗಡೆಯಿಂದ ಬರುವ ವಾಹನಗಳು ಕಾಣ ಸದೆ ಅಪಘಾತವಾಗುವುದು. ಮತ್ತು ಸರ್ಕಲ್‌ನಲ್ಲಿ ವಾಹನ ಮತ್ತು ಬೈಕ್‌ಗಳನ್ನು ನಿಲ್ಲಿಸಿ, ಫ್ಲೆಕ್ಸ್‌ಗಳನ್ನು ನೋಡುವುದು ನಿಂತು ಸಂಚಾರಕ್ಕೆ ಅಡಚಣೆ ಮಾಡುತ್ತಿದ್ದರು. ಈ ಬಗ್ಗೆ ಟ್ರಾಫಿಕ್ಸ್ ಸಿಗ್ನಲ್ ಉಲ್ಲಂಘನೆಯಗುತಿತ್ತು. ಪ್ರತಿನಿತ್ಯವು ಸಹ ಅನಗತ್ಯವಾಗಿ ಫ್ಲೆಕ್ಸ್‌ಗಳನ್ನು ಅಳವಡಿಸುವುದು, ಹುಟ್ಟು ಹಬ್ಬ, ಜಾತ್ರೆ ಹಾಗು ಜಿಲ್ಲೆಗೆ ಸಂಬಂಧಿಸದ ವಿಚಾರಗಳು ಹಾಗೂ ವ್ಯಕ್ತಿಗಳ ಫ್ಲೆಕ್ಸ್‌ಗಳು ಸಹ ರಾರಾಜಿಸುತ್ತಿದ್ದರು. ಇದರಿಂದ ಸುಗಮ ಸಂಚಾರಕ್ಕೆ ಅಡಚಣೆಯಾಗುತ್ತಿತ್ತು. ಇದೆಲ್ಲವನ್ನು ತಪ್ಪಿಸಲು ಫ್ಲೆಕ್ಸ್ ನಿಷೇಶ ಮಾಡಲಾಗಿದೆ ಎಂದು ಪೌರಾಯುಕ್ತ ಪರಶುರಾಮ್ ಛಲವಾದಿ ತಿಳಿಸಿದರು.

# ವಿ.ಬಿ.ಜಿ. ರಾಮ್ ಜಿ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಿ : ಬಿ.ಕೆ. ಸಂದೇಶ

**ಚಾಮರಾಜನಗರ:** ಕೊಳ್ಳೇಗಾಲ ತಾಲೂಕಿನಲ್ಲಿ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್ ಗಾರ್ ಅಂಡ್ ಅಜೀವಿಕಾ ಮಿಷನ್ ಯೋಜನೆಯ ಟಿಟಿಸಿ ಅನುಷ್ಠಾನಗೊಂಡಿದ್ದು, ಎಲ್ಲರೂ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಸಹಾಯಕ ನಿರ್ದೇಶಕ ಬಿ.ಕೆ ಸಂದೇಶ ತಿಳಿಸಿದರು. ಚಿಕ್ಕಲ್ಲೂರು ಗ್ರಾಮದಲ್ಲಿ ಇಂದು ತಾಲೂಕು ಪಂಚಾಯಿತಿ ವತಿಯಿಂದ ಆಯೋಜಿಸಲಾಗಿದ್ದ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್ ಗಾರ್ ಅಂಡ್ ಅಜೀವಿಕಾ ಮಿಷನ್ ಯೋಜನೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ಜನರನ್ನು ಆರ್ಥಿಕವಾಗಿ ಸ್ವಾವಲಂಬನೆಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರದ ಮಹತ್ವಕಾಂಕ್ಷೆ ಯೋಜನೆಯಾದ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್ ಗಾರ್ ಅಂಡ್ ಅಜೀವಿಕಾ ಮಿಷನ್ ಯೋಜನೆಯು ಜುಲೈ 1 ರಿಂದ ಅಧಿಕೃತವಾಗಿ ಅನು?ಾ?ಟನಕ್ಕೆ ಬಂದಿದೆ. ಎಲ್ಲರೂ ಈ ಯೋಜನೆಯ ಅನುಕೂಲ ಪಡೆಯಬೇಕು ಎಂದರು.

ಗ್ರಾಮೀಣ ಭಾಗದ ಜನರು ಉದ್ಯೋಗ ಅರಸಿ ನಗರಗಳಿಗೆ ವಲಸೆ ಹೋಗುವ ಪರಿಸ್ಥಿತಿ ಕಡಿಮೆ ಮಾಡಿ ಸ್ವಂತ ಊರಿನಲ್ಲಿಯೇ ಉದ್ಯೋಗ ಮತ್ತು ಜೀವನೋಪಾಯಕ್ಕೆ ಅವಕಾಶ ಕಲ್ಪಿಸುವುದು ಮುಖ್ಯ ಉದ್ದೇಶವಾಗಿದೆ. ಉದ್ಯೋಗ ಖಾತರಿ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಿರುವ ಸರ್ಕಾರವು ಗ್ರಾಮೀಣ ಕುಟುಂಬಗಳಿಗೆ 100 ದಿನಗಳಿಂದ 125 ದಿನಗಳ ಉದ್ಯೋಗ ಖಾತರಿ ನೀಡುವ ಮೂಲಕ ಬಡ ಕಾರ್ಮಿಕರ ಬದುಕಿಗೆ ಮತ್ತಷ್ಟು ಭದ್ರತೆ ಒದಗಿಸಿ ಜನರಿಗೆ ಅನುಕೂಲ ಮಾಡಿಕೊಟ್ಟಿದೆ ಎಂದು ಹೇಳಿದರು.



ಕೃಷಿ ಚಟುವಟಿಕೆಯ ಸಮಯದಲ್ಲಿ 60 ದಿನಗಳ ಕಾಲ ವಿರಾಮ ನೀಡುವ ವಿಶೇಷ ವ್ಯವಸ್ಥೆಯನ್ನು ಮಾಡಲಾಗಿದೆ. ಚಿಕ್ಕಲ್ಲೂರು ಮತ್ತು ತೆಳ್ಳನೂರು ಗ್ರಾಮ ಪಂಚಾಯಿತಿಯು ಈ ಯೋಜನೆಯನ್ನು ಸಮರ್ಪಕ ಅನುಷ್ಠಾನ ಮಾಡಬೇಕು ಎಂದರು.

ಹೊಸ ಯೋಜನೆ ಜಾರಿಯಾದರೂ ಮನರೇಗಾ ಯೋಜನೆಯಡಿ ಈಗಾಗಲೇ ನೀಡಿರುವ ಉದ್ಯೋಗ ಚೀಟಿಗಳು ಚಾಲ್ತಿಯಲ್ಲಿ ಇರುತ್ತವೆ. ಹೀಗಾಗಿ ಕೂಲಿ ಕಾರ್ಮಿಕರು ಹೊಸದಾಗಿ ನೋಂದಣಿ ಮಾಡುವ ಅಗತ್ಯವಿಲ್ಲ. ಈ ಯೋಜನೆಯಲ್ಲಿ 318 ಕಾಮಗಾರಿಯನ್ನು ಅನುಷ್ಠಾನ ಮಾಡಲು ಅವಕಾಶವಿದೆ ಎಂದು ಹೇಳಿದರು. ಯೋಜನೆಯಡಿ ಕೆರೆ–ಕಟ್ಟೆ, ಕಾಲುವೆ, ಕುಡಿಯುವ ನೀರು, ಮನೆ ನಿರ್ಮಾಣಕ್ಕೆ ನೆರವು, ಜಲ ಸಂರಕ್ಷಣೆ, ಚೆಕ್ ಡ್ಯಾಂ ನಿರ್ಮಾಣ, ಕೊಳವೆ ಪುನಃಶ್ಚೇತನ, ಸಿ.ಸಿ ರಸ್ತೆ, ಅಂಗನವಾಡಿ ಕಟ್ಟಡ ದುರಸ್ಥಿ, ಪಂಚಾಯತ್ ರಾಜ್ ಕಟ್ಟಡ ದುರಸ್ಥಿ ಮತ್ತು ನಿರ್ವಹಣೆ, ಅಡುಗೆ ಕೋಣೆ, ಆಟದ ಮೈದಾನ, ಶಾಲಾ ಶೌಚಾಲಯ, ಸ್ವ ಸಹಾಯ ಸಂಘದ ಕಟ್ಟಡ ನಿರ್ಮಾಣ ಮತ್ತು ಗೋದಾಮು ನಿರ್ಮಾಣ ಇನ್ನಿತರೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬಹುದಾಗಿದೆ.

ನಗರಸಭೆ ಸಮುದಾಯ ಸಂಘಟನಾಧಿಕಾರಿಗೆ ವೆಂಕಟನಾಯಕ್ ಅವರಿಗೆ ಅಭಿನಂದನಾ ಸಮಾರಂಭ

# ಶೋಭಾನೆ ಮತ್ತು ಜನಪದ ಕಲಾವಿದರನ್ನು ಸರ್ಕಾರ ಗುರುತಿಸಲಿ : ವೆಂಕಟರಮಣಸ್ವಾಮಿ ಪಾಪು ಒತ್ತಾಯ

**ಚಾಮರಾಜನಗರ:** ಜಾನಪದ ಕಲೆಗಳ ತವರೂರು ಚಾಮರಾಜನಗರ ಜಿಲ್ಲೆಯಲ್ಲಿರುವ ಶೋಭಾನೆ ಮತ್ತು ಜಾನಪದ ಕಲಾವಿದರನ್ನು ಗುರುತಿಸಿ ಅವರಿಗೆ ಸೂಕ್ತ ಸೌಲಭ್ಯ ಮತ್ತು ವೇದಿಕೆಯನ್ನು ಕಲ್ಪಿಸಿಕೊಡುವ ಕಾರ್ಯವನ್ನು ಸರ್ಕಾರ ಹಾಗೂ ನಗರಸಭೆ ಮಾಡಬೇಕೆಂದು ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು) ಒತ್ತಾಯಿಸಿದರು

ನಗರದ ರೋಟರಿ ಭವನದಲ್ಲಿ ಚಾ.ನಗರ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರಸಭೆ ಸಮುದಾಯದ ಸಂಘಟನಾಧಿ ಕಾರಿ ವೆಂಕಟನಾಯಕ್ ನಿವೃತ್ತಿ ಹಿನ್ನೆಲೆಯಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದ ನೇತೃತ್ವ ವಹಿಸಿ ಅವರು ಮಾತನಾಡಿದರು.



ನಗರಸಭೆಯ ವ್ಯಾಪ್ತಿಯಲ್ಲಿ ಬಹಳಷ್ಟು ಮಂದಿ ಕಲಾವಿದರು ಇದ್ದಾರೆ. ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಉತ್ತಮ ಹೆಸರು ಮಾಡಿದ್ದಾರೆ. ಆದರೆ, ಇಂಥ ಕಲಾವಿದರಿಗೆ ಕನಿಷ್ಠ ಸೌಲಭ್ಯವು ಸಹ ಸಿಗುತ್ತಿಲ್ಲ. ಅವರಿಗೆ ಮಾಶಾಸನ, ವಸತಿ ಸೌಲಭ್ಯ ಹಾಗೂ ಆರೋಗ್ಯ ಮತ್ತು ವಿಮೆ ಸಲವತ್ತುಗಳನ್ನು ಕಲ್ಪಿಸಬೇಕು. ನಗರಸಭೆ ಪೌರಾಯುಕ್ತ ಪರಶುರಾಮ್ ಛಲವಾದಿ ಅವರು ಈ ಬಗ್ಗೆ ಆಸಕ್ತಿ ವಹಿಸಿ, ಬಡ ಕಲಾವಿದರ ನೆರವಿಗೆ ಬರಬೇಕು ಎಂದರು.

ನಗರಸಭೆ ಸಮುದಾಯ ಸಂಘಟನಾಧಿಕಾರಿಯಾಗಿ ಉತ್ತಮ ಸೇವೆ ಸಲ್ಲಿಸಿ. ಜು. 30 ರಂದು ನಿವೃತ್ತಿ ಹೊಂದುತ್ತಿರುವ ವೆಂಕಟನಾಯಕ್ ಅವರು ಉತ್ತಮ ಅಧಿಕಾರಿಯಾಗಿದ್ದರು. ಜನಸಾಮಾನ್ಯರ ಸಂಕಷ್ಟಗಳಿಗೆ ಸ್ಪಂದಿಸುವ ಗುಣ ಇತ್ತು. ನಗರಸಭೆಯಲ್ಲಿ ಎಲ್ಲಾ ವರ್ಗದ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿದ್ದರು. ಅವರ ನಿವೃತ್ತಿಯಾಗುತ್ತಿದ್ದು, ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಶುಭ ಕೋರಿದರು.

ಕೇಂದ್ರ ಬರ ಪರಿಹಾರ ಸಮಿತಿಯ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ ಮಾತನಾಡಿ, ಅಧಿಕಾರ ಇದ್ದಾಗ ಜನ ಸಾಮಾನ್ಯರ ಸೇವೆಯನ್ನುಮಾಡುವ ಜೊತೆಗೆ ಅವರು ಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡಬೇಕು. ಆಗ ನಿವೃತ್ತಿ ನಂತರವು ಸಹ ಜನರು ಸ್ಮರಿಸಿಕೊಳ್ಳುತ್ತಾರೆ. ಇಂಥವರ ಸಾಲಿನಲ್ಲಿ ವೆಂಕಟನಾಯಕ್ ಅವರು ಇದ್ದಾರೆ. ಅವರು ಅಧಿಕಾರಿಯಾಗಿ ಎಲ್ಲರೊಟ್ಟಿಗೆ ಸ್ಪಂದಿಸುತ್ತಿದ್ದಾರೆ. ಅವರ ಸೇವೆಯನ್ನು ಸ್ಮರಿಸಿ, ಇಂದು ಅಭಿನಂದನಾ ಕಾರ್ಯಕ್ರಮ ಬಹಳ ಅರ್ಥ ಪೂರ್ಣವಾಗಿದೆ ಎಂದರು.

# ಶಾಶ್ವತ ನಿವಾಸಿ ಪ್ರಮಾಣ ಪತ್ರ ನೀಡಲು ಏಕರೂಪದ ವ್ಯವಸ್ಥೆ ಜಾರಿ: ಡಿಸಿ ಕುಮಾರ




**ಮಂಡ್ಯ:** ಸರ್ಕಾರದ ಸೂಚನೆಯಂತೆ ಶಾಶ್ವತ ನಿವಾಸಿ ಪ್ರಮಾಣಪತ್ರಗಳನ್ನು ನೀಡುವ ಉದ್ದೇಶದಿಂದ ಇತ್ತೀಚಿಗೆ ಮಾರ್ಗಸೂಚಿಗಳನ್ನು ನೀಡಿ ಏಕರೂಪ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿರುತ್ತದೆ. ಇದರಂತೆ, ನಾಗರೀಕರು ಶಾಶ್ವತ ನಿವಾಸಿ ಪ್ರಮಾಣಪತ್ರಗಳನ್ನು ಅಗತ್ಯವಿರುವ ನಾಗರೀಕರುಗಳು ತಮ್ಮ ಅರ್ಜಿಗಳನ್ನು ಸಲ್ಲಿಸಿ ಪಡೆಯಬಹುದಾಗಿರುತ್ತದೆ ಮತ್ತು ಅಂತಹ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಜಿಲ್ಲಾಧಿಕಾರಿಗಳು ಸಭೆಯನ್ನು ನಡೆಸಿ, ಎಲ್ಲಾ ತಹಶೀಲ್ದಾರ್ ಗಳಿಗೆ ಹಾಗೂ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದರು.

ಶಾಶ್ವತ ನಿವಾಸಿ ಪ್ರಮಾಣಪತ್ರಕ್ಕಾಗಿ ಅರ್ಜಿಗಳನ್ನು ಅಟಲ್ ಜೀ ಜನಸ್ನೇಹಿ ಕೇಂದ್ರಗಳು, ಬಾಪೂಜಿ ಸೇವಾ ಕೇಂದ್ರಗಳು/ಗ್ರಾಮ ಒನ್ ಕೇಂದ್ರಗಳು/ ಕರ್ನಾಟಕ ಒನ್ ಕೇಂದ್ರಗಳು/ಕಾಮನ್ ಸರ್ವೀಸ್ ಸೆಂಟರ್ ಗಳಲ್ಲಿ ಅಥವಾ https://ajsk.karnataka.gov.in/nk5_online/Login/Login_Public ಜಾಲತಾಣದ ಮೂಲಕ ಸಲ್ಲಿಸಬಹುದು.

ಅರ್ಜಿ ಸ್ವೀಕರಿಸಿದ ನಂತರ ಸಕ್ಷಮ ಪ್ರಾಧಿಕಾರಿಗಳಾದ ತಹಶೀಲ್ದಾರ್ ರವರು ದಾಖಲೆಗಳನ್ನು ಪರಿಶೀಲಿಸಿ, ಪಾರದರ್ಶಕವಾಗಿ ತುರ್ತಾಗಿ ಪ್ರಮಾಣಪತ್ರಗಳನ್ನು ನೀಡುವಂತೆ ಸೂಚಿಸಲಾಯಿತು.

**ಶಾಶ್ವತ ನಿವಾಸಿ ಪ್ರಮಾಣಪತ್ರಗಳನ್ನು ಪಡೆಯಲು ಅರ್ಹರಿರುವ ಅರ್ಜಿದಾರರು:** ರಾಜ್ಯದಲ್ಲಿ ಕನಿಷ್ಟ 10 ವರ್ಷಗಳ ಕಾಲ ಸಾಮಾನ್ಯ ನಿವಾಸಿಯಾಗಿರಬೇಕು/ ಕರ್ನಾಟಕದಲ್ಲಿ ಜನಿಸಿರಬೇಕು/ಕರ್ನಾಟಕದಲ್ಲಿ ಕನಿಷ್ಠ 10 ವರ್ಷಗಳ ಕಾಲ ನಿರಂತರವಾಗಿ ವಾಸವಾಗಿರಬೇಕು/ಕರ್ನಾಟಕದಲ್ಲಿ ಕನಿಷ್ಠ 10 ವರ್ಷಗಳ ಶಿಕ್ಷಣ ಪಡೆದಿರಬೇಕು/ ಕರ್ನಾಟಕದಲ್ಲಿ ಕನಿಷ್ಠ 10 ವರ್ಷಗಳಿಂದ ಆಸ್ತಿ ಹೊಂದಿರಬೇಕು/ ಕರ್ನಾಟಕ ಸರ್ಕಾರ ಅಥವಾ ಸಾರ್ವಜನಿಕ ಸಂಸ್ಥೆಯಲ್ಲಿ ಕನಿಷ್ಠ 7 ವರ್ಷ ಸೇವೆ ಸಲ್ಲಿಸಿರಬೇಕು/ಕಖಅ ಹೊಂದಿರುವ ಅಥವಾ ಕಖಅ ಪಡೆಯಲು ಅರ್ಹರಾಗಿರುವ ವ್ಯಕ್ತಿಯನ್ನು ವಿವಾಹವಾಗಿರಬೇಕು/ಪೋಷಕರು ಅಥವಾ ಪತಿ / ಪತ್ನಿಯವರ ಮೂಲಕ ಸರ್ಕಾರದ ನಿಯಮಾನುಸಾರ ಅರ್ಹತೆ ಹೊಂದಿರಬೇಕು.

ಶಾಶ್ವತ ನಿವಾಸಿ ಪ್ರಮಾಣಪತ್ರಗಳನ್ನು ಪಡೆಯಲು ಅರ್ಹರಿರುವ ಅರ್ಜಿದಾರರು, ಅನುಬಂಧ–01 ರ ರೀತ್ಯಾ ಅಫಿಡವಿಟ್ ಗೆ ಪೂರಕವಾಗಿ ಮುಂದಿನಂತೆ ಒಂದಕ್ಕಿಂತ ಹೆಚ್ಚಿನ ದಾಖಲೆಗಳನ್ನು ಸಲ್ಲಿಸಬೇಕು: ಜನನ ಪ್ರಮಾಣ ಪತ್ರ/ ಶಾಲಾ ಶೈಕ್ಷಣಿಕ ದಾಖಲೆಗಳು/ 10 ವರ್ಷಗಳ ನಿವಾಸದ ದಾಖಲೆ/ ಆಸ್ತಿ ದಾಖಲೆ/ ಮತದಾರರ ಪಟ್ಟಿ/ ಆಧಾರ್/ ಪಡಿತರ ಚೀಟಿ/ ಸರ್ಕಾರಿ ಅಥವಾ ಸಾರ್ವಜನಿಕ ಸಂಸ್ಥೆಯ ಸೇವಾ ಪ್ರಮಾಣ ಪತ್ರ/ ವಿವಾಹ ಪ್ರಮಾಣ ಪತ್ರ/ ಸರ್ಕಾರ ಮಾನ್ಯಗೊಳಿಸಿರುವ ಇತರೆ ಪೂರಕ ದಾಖಲೆಗಳು.

ಏಕರೂಪ ವ್ಯವಸ್ಥೆಯ ಅಡಿಯಲ್ಲಿ ಶಾಶ್ವತ ನಿವಾಸಿ ಪ್ರಮಾಣಪತ್ರಗಳನ್ನು ನೀಡುವ ಪ್ರಕ್ರಿಯೆಯಲ್ಲಿ ಸರ್ಕಾರದ ನಿಯಮಾವಳಿಗಳಿಗೆ ಯಾವುದೇ ಧಕ್ಕೆಯಾಗದಂತೆ ಪಾರದರ್ಶಕವಾಗಿ ನಿರ್ವಹಣೆ ಮಾಡುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

# ನಗರದ ಸಿಮ್ಸ್ ಆಸ್ಪತ್ರೆಯಲ್ಲಿ ವಿಶ್ವ ಮೆದುಳಿನ ದಿನ ಆಚರಣೆ

**ಚಾಮರಾಜನಗರ:** ಜಿಲ್ಲಾಡಳಿ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆಸ್ಪತ್ರೆಯ ಸಹಯೋಗದಲ್ಲಿ ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮದಡಿ ಇಂದು ವಿಶ್ವ ಮೆದುಳಿನ ದಿನವನ್ನು ಆಚರಿಸಲಾಯಿತು.

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆಸ್ಪತ್ರೆಯ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮವನ್ನು ಸಿಮ್ಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಸಿ.ಎಸ್. ಮಾರುತಿ ಅವರು ಉದ್ಘಾಟಿಸಿ ಶುಭ ಹಾರೈಸಿದರು.


ಬಳಿಕ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಂಪನ್ಮೂಲ ವ್ಯಕ್ತಿ ನರ ಶಸ್ತ್ರ ಚಿಕಿತ್ಸಕರಾದ ಡಾ. ರಾಜೇಶ್ ಅವರು ಮಾತನಾಡಿ ಮೆದುಳು ಮನುಷ್ಯನ ಜೀವನದಲ್ಲಿ ಬಹುಮುಖ್ಯವಾದ ಅಂಗ. ಮೆದುಳನ್ನು ರಕ್ಷಣೆ ಮಾಡಿಕೊಂಡರೆ ಪಾರ್ಶ್ವವಾಯು, ಅಪಸ್ಮಾರ, ಮರೆಗುಳಿ ಯಂತಹ ರೋಗಗಳನ್ನು ತಡೆಗಟ್ಟಬಹುದು ಎಂದರು.

ವ್ಯಾಯಾಮ, ಉತ್ತಮ ನಿದ್ರೆ, ದೈಹಿಕ ಚಟುವಟಿಕೆ, ಆರೋಗ್ಯಕರ ಹವ್ಯಾಸಗಳಾದ ಯೋಗ ಮತ್ತು ಧ್ಯಾನ, ಸಂಘಜೀವಿಯಾಗಿರುವುದು ಇವುಗಳನ್ನು ಮಾಡುವುದರಿಂದ ನಮ್ಮ ಮೆದುಳನ್ನು ಸಮತೋಲನದಲ್ಲಿಟ್ಟುಕೊಳ್ಳಬಹುದು. ವಾಹನ ಚಾಲನೆ ಮಾಡುವಾಗ ಹೆಲ್ಮೆಟ್ ಬಳಸುವುದು, ತಲೆಗೆ ಪೆಟ್ಟು ಬಿದ್ದಾಗ ವೈದ್ಯರ ಬಳಿ ಚಿಕಿತ್ಸೆ ಪಡೆಯಬೇಕು. ರಕ್ತದೊತ್ತಡ ಹಾಗೂ ಮಧುಮೇಹ ರೋಗಗಳನ್ನು ಸಮತೋಲನದಲ್ಲಿಡುವುದು ಸೇರಿದಂತೆ ಇನ್ನೂ ಕೆಲವು ಆರೋಗ್ಯ ಸಲಹೆಗಳನ್ನು ಡಾ. ರಾಜೇಶ್ ಅವರು ನೀಡಿದರು. ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ಚಿನ್ನಭೋವಿ, ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ (ಕಬಿ) ಯೋಜನೆಯ ಡಾ. ಪುಷ್ಪಾಂಕ್ ಯು ಕುದರ್, ಜಿಲ್ಲಾ ಸಂಯೋಜಕರಾದ ಎನ್. ಸತೀಶ್, ಆಸ್ಪತ್ರೆಯ ಸಿಬ್ಬಂದಿ ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಇದ್ದರು.



ಶುಕ್ರವಾರ
24–07–2026
ಸಿನಿಮಾ
ವರ್ತಮಾನ
ಸಿನಿಮಾ ವರದಿ: ಬಿ.ಜಿ.ರವಿಕುಮಾರ್



# ರಣಬೀರ್ ಕಪೂರ್, ಯಶ್, ಸಾಯಿ ಪಲ್ಲವಿ ನಟನೆಯ ರಾಮಾಯಣ ಚಿತ್ರದಿಂದ ಬಿಗ್ ಅಪ್‌ಡೇಟ್

## ಜುಲೈ 24ಕ್ಕೆ ರಾಮಾಯಣ ಚಿತ್ರದ ಪ್ಯಾನ್ ವರ್ಲ್ಡ್ ಟ್ರೇಲರ್ ಲಾಂಚ್



ನವದೆಹಲಿಯಲ್ಲಿ ಜುಲೈ 18 ರಂದು ನಡೆದ ಅದ್ದೂರಿ ಕಾರ್ಯಕ್ರಮದಲ್ಲಿ, ಭಾರತದ ಅಪ್ರತಿಮ ಸಾಂಸ್ಕೃತಿಕ ಪರಂಪರೆಯಾದ ರಾಮಾಯಣವನ್ನು ಜಾಗತಿಕ ವೇದಿಕೆಗೆ ಪರಿಚಯಿಸುವ ಐತಿಹಾಸಿಕ ಪ್ರಯಾಣಕ್ಕೆ ವಿಧ್ಯುಕ್ತ ಚಾಲನೆ ನೀಡಲಾಗಿದೆ. ಈ ಪಯಣದ ಆರಂಭವನ್ನು 'ಪ್ರಥಮ ಸಂಕಲ್ಪ' ಎಂದು ಕರೆಯಲಾಗಿದ್ದು, ಇದು ಭಾರತೀಯ ಸಂಪ್ರದಾಯದಂತೆ ಮಹತ್ಕಾರ್ಯವೊಂದಕ್ಕೆ ಕೈಹಾಕುವ ಮುನ್ನ ಕೈಗೊಳ್ಳುವ ದೃಢ ನಿರ್ಧಾರವಾಗಿದೆ. ಜುಲೈ 24 ರಂದು ನಡೆಯಲಿರುವ ಈ ಚಿತ್ರದ ಜಾಗತಿಕ ಟ್ರೇಲರ್ ಬಿಡುಗಡೆಗೂ ಮುನ್ನ, ರಾಜಧಾನಿ ದೆಹಲಿಯಲ್ಲಿ ನಡೆದ ವಿಶೇಷ ಪ್ರದರ್ಶನವು ರಾಮಾಯಣದ ಭವ್ಯತೆಗೆ ಸಾಕ್ಷಿಯಾಯಿತು. ಈ ಮೂಲಕ ಜಗತ್ತಿನಾದ್ಯಂತ ಭಾರತದ ಮೌಲ್ಯಗಳನ್ನು ಮತ್ತು ಕಥೆಯನ್ನು ಅತಿಥಿಗಳ ಮುಂದೆ ಅತ್ಯಂತ ಗೌರವದಿಂದ ಪ್ರಸ್ತುತಪಡಿಸಲಾಯಿತು.

**ನೂರಾರು ಶಾಲೆಗಳನ್ನು ತಲುಪಿದ ರಾಮಾಯಣ:** ರಾಮಾಯಣದ ಈ ಪಯಣವು ಕೇವಲ ದೆಹಲಿಗೆ ಸೀಮಿತವಾಗದೆ, ದೇಶದಾದ್ಯಂತ ಹರಡಿದೆ ಎಂಬುದು ವಿಶೇಷ ಸಂಗತಿಯಾಗಿದೆ. 'Ramayana Schools Programme' ಮೂಲಕ ಸುಮಾರು 500ಕ್ಕೂ ಹೆಚ್ಚು ಶಾಲೆಗಳ ಲಕ್ಷಾಂತರ ವಿದ್ಯಾರ್ಥಿಗಳು ಈ ಮಹಾಕಾವ್ಯದ ಮೌಲ್ಯಗಳನ್ನು ಕ್ರಿಯಾತ್ಮಕವಾಗಿ ಅರಿತುಕೊಂಡಿದ್ದಾರೆ. ಇವರಲ್ಲಿ ಆಯ್ಕೆಯಾದ ಪ್ರತಿಭಾವಂತ ವಿಜೇತ ವಿದ್ಯಾರ್ಥಿಗಳು ಈ ಸಂಕಲ್ಪ ಸಮಾರಂಭದಲ್ಲಿ ಭಾಗವಹಿಸಿರುವುದು ಕಾರ್ಯಕ್ರಮಕ್ಕೆ ವಿಶೇಷ ಕಳೆ ತಂದಿದೆ. ಅಲ್ಲದೆ, ದೇಶದ 20 ಪ್ರಮುಖ ನಗರಗಳಲ್ಲಿ ಸಾವಿರಾರು ಅಭಿಮಾನಿಗಳು ಮತ್ತು ಕ್ರಿಯೇಟರ್‌ಗಳು ಚಿತ್ರದ ಟ್ರೇಲರ್‌ನ ವಿಶೇಷ ಮುನ್ನೋಟವನ್ನು ವೀಕ್ಷಿಸಲಿದ್ದಾರೆ. ಇದು ಕೇವಲ ಒಂದು ಚಿತ್ರದ ಆರಂಭವಲ್ಲ, ಬದಲಾಗಿ ಭಾರತದ ಶ್ರೀಮಂತ ಸಾಂಸ್ಕೃತಿಕ ಸಂಪ್ರದಾಯವನ್ನು ವಿಶ್ವಕ್ಕೆ ಹಂಚುವ ಒಂದು ಮಹಾನ್ ಪ್ರಯತ್ನವಾಗಿದೆ.

**ಘಟನಾಘಟಿ ತಾರಾಬಳಗ:** ಈ ಕಾರ್ಯಕ್ರಮವು ಭಾರತೀಯ ಚಿತ್ರರಂಗದ ವಿವಿಧ ತಲೆಮಾರಿನ ನಟರು ಮತ್ತು ತಂತ್ರಜ್ಞರ ಸುಂದರ ಸಂಗಮವಾಗಿತ್ತು. ನಿರ್ದೇಶಕ ನಿತೇಶ್ ತಿವಾರಿ ಅವರು ತಮ್ಮ ಕಥೆಯ ಮೂಲಕ ಜಗತ್ತಿನಾದ್ಯಂತ ಪ್ರೇಕ್ಷಕರನ್ನು ತಲುಪುವ ಸಾಮರ್ಥ್ಯ ಹೊಂದಿದ್ದು, ಈ ಚಿತ್ರಕ್ಕೆ ಮತ್ತಷ್ಟು ಶಕ್ತಿ ತುಂಬಿದ್ದಾರೆ. ಪ್ರಮುಖ ಪಾತ್ರಗಳಲ್ಲಿ ರಣಬೀರ್ ಕಪೂರ್ (ಶ್ರೀರಾಮ), ಸಾಯಿ ಪಲ್ಲವಿ (ಸೀತಾ ಮಾತೆ) ಮತ್ತು ರಾಕಿಂಗ್ ಸ್ಟಾರ್ ಯಶ್ (ರಾವಣ) ಅವರ ಉಪಸ್ಥಿತಿಯು ಅಭಿಮಾನಿಗಳಲ್ಲಿ ತೀವ್ರ ಕುತೂಹಲ ಮೂಡಿಸಿದೆ. ಜೊತೆಗೆ ಅರುಣ್ ಗೋವಿಲ್, ಶೋಭನಾ, ಅಜಿಂಕ್ಯ ದೇವ್, ಕುನಾಲ್ ಕಪೂರ್, ರಕುಲ್ ಪ್ರೀತ್ ಸಿಂಗ್ ಮತ್ತು ರವಿ ದುಬೆ ಅವರಂತಹ ಅನುಭವಿ ನಟರ ಸಮೂಹವೇ ಈ ಚಿತ್ರದಲ್ಲಿದೆ. ಸನ್ನಿ ಡಿಯೋಲ್ ಅವರು ಹನುಮಂತನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದು ಕಾರ್ಯಕ್ರಮದ ಮತ್ತೊಂದು ವಿಶೇಷ ಆಕರ್ಷಣೆಯಾಗಿತ್ತು.

**ನಿರ್ಮಾಪಕ ನಮಿತ್ ಮಲ್ಹೋತ್ರಾ ಹೇಳುವುದೇನು** : ನಿರ್ಮಾಪಕ ನಮಿತ್ ಮಲ್ಹೋತ್ರಾ ಅವರು ಈ ಚಿತ್ರದ ಹಿಂದಿನ ದೃಷ್ಟಿಕೋನವನ್ನು ಹಂಚಿಕೊಳ್ಳುತ್ತಾ, ಭಾರತದ ಇಂತಹ ಶ್ರೇಷ್ಠ ಕಥೆಗಳು ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಡಬೇಕು ಎಂದು ಆಶಿಸಿದ್ದಾರೆ. ರಾಮಾಯಣವು ಕೇವಲ ಒಂದು ಪುರಾಣವಲ್ಲ, ಅದು ನಮ್ಮ ದೈನಂದಿನ ಜೀವನದ ಭಾಗವಾಗಿದೆ ಮತ್ತು ತಲೆಮಾರುಗಳಿಂದ ನಾವು ಪಾಲಿಸಿಕೊಂಡು ಬಂದಿರುವ ಮೌಲ್ಯವಾಗಿದೆ ಎಂದು ಅವರು ಸ್ಮರಿಸಿದರು. ಇಂದು ನಮ್ಮ ಬಳಿ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಕಲಾತ್ಮಕ ಸಾಮರ್ಥ್ಯವಿರುವುದರಿಂದ, ಈ ಮಹಾಕಾವ್ಯವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮವಾಗಿ ಪ್ರಸ್ತುತಪಡಿಸಲು ಸಾಧ್ಯವಾಗಿದೆ ಎಂದರು. ಇದು ಭಾರತದ ಹೆಮ್ಮೆಯನ್ನು ಜಗತ್ತಿನ ಅತಿದೊಡ್ಡ ವೇದಿಕೆಯಲ್ಲಿ ಪ್ರದರ್ಶಿಸುವ ಒಂದು ಸುವರ್ಣಾವಕಾಶವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

**ನಿರ್ದೇಶಕ ನಿತೇಶ್ ತಿವಾರಿ ಮಾತು:** ನಿರ್ದೇಶಕ ನಿತೇಶ್ ತಿವಾರಿ ಅವರು ಮಾತನಾಡುತ್ತಾ, ಈ ಚಿತ್ರದ ಮೌಲ್ಯಗಳು ಸಾರ್ವತ್ರಿಕವಾಗಿರುವುದರಿಂದ, ಪ್ರತಿಯೊಂದು ದೃಶ್ಯವನ್ನು ಅತ್ಯಂತ ಪ್ರಾಮಾಣಿಕತೆ ಮತ್ತು ಗೌರವದಿಂದ ಚಿತ್ರಿಸಲಾಗಿದೆ ಎಂದು ತಿಳಿಸಿದರು. ತಂತ್ರಜ್ಞಾನದ ಬಳಕೆಯೊಂದಿಗೆ ಈ ಮಹಾಕಾವ್ಯದ ಭಾವನಾತ್ಮಕ ಆಳವನ್ನು ಪ್ರೇಕ್ಷಕರಿಗೆ ತಲುಪಿಸುವುದು ನಮ್ಮ ಮುಖ್ಯ ಉದ್ದೇಶವಾಗಿದೆ ಎಂದು ಅವರು ವಿವರಿಸಿದರು. ತಮ್ಮ ತಂಡದ ಪರಿಶ್ರಮ ಮತ್ತು ಕಲಾವಿದರ ಶ್ರೇಷ್ಠ ಅಭಿನಯವು ಪ್ರೇಕ್ಷಕರಿಗೆ ಹೊಸ ಅನುಭವ ನೀಡಲಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು. ಪ್ರೈಮ್ ಫೋಕಸ್ ಸ್ಟುಡಿಯೋಸ್, ಡಿ–ನೆಗ್ (DNEG) ಮತ್ತು ನಟ ಯಶ್ ಒಡೆತನದ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಸಹಯೋಗದಲ್ಲಿ ಈ ಸಿನಿಮಾ ರೂಪುಗೊಳ್ಳುತ್ತಿದ್ದು, ಇದು ಅತ್ಯಂತ ಮಹತ್ವಾಕಾಂಕ್ಷೆಯ ಪ್ರಯತ್ನವಾಗಿದೆ.

ಈ ಚಿತ್ರಕ್ಕೆ ಆಸ್ಕರ್ ಪ್ರಶಸ್ತಿ ವಿಜೇತ ಸಂಗೀತ ನಿರ್ದೇಶಕರಾದ ಹ್ಯಾನ್ಸ್ ಝಿಮ್ಮರ್ ಮತ್ತು ಎ.ಆರ್. ರೆಹಮಾನ್ ಅವರು ಸಂಗೀತ ನೀಡುತ್ತಿರುವುದು ಚಿತ್ರದ ನಿರೀಕ್ಷೆಯನ್ನು ಇನ್ನಷ್ಟು ಹೆಚ್ಚಿಸಿದೆ. ಜುಲೈ 24 ರಂದು ಚಿತ್ರದ ಅಧಿಕೃತ ಟ್ರೇಲರ್ ಜಗತ್ತಿನಾದ್ಯಂತ ಬಿಡುಗಡೆಯಾಗಲಿದ್ದು, ಇದು ಮುಂಬರುವ ದೀಪಾವಳಿ ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸಲಿದೆ. ಪ್ರೈಮ್ ಫೋಕಸ್ ಸ್ಟುಡಿಯೋಸ್‌ನ ಸಂಸ್ಥಾಪಕರಾದ ನಮಿತ್ ಮಲ್ಹೋತ್ರಾ ಅವರು ಜಾಗತಿಕ ಮಟ್ಟದ ವೀಕ್ಷಕರಿಗೆ ಭಾರತೀಯ ಸಂಸ್ಕೃತಿಯನ್ನು ಪರಿಚಯಿಸಲು ಬದ್ಧರಾಗಿದ್ದಾರೆ. ಅಂತೆಯೇ ರಾಕಿಂಗ್ ಸ್ಟಾರ್ ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್, ವಿಭಿನ್ನ ಮತ್ತು ಸೃಜನಾತ್ಮಕ ವಿಷಯಗಳನ್ನು ಪ್ರೇಕ್ಷಕರಿಗೆ ಒದಗಿಸುವ ಮೂಲಕ ರಾಮಾಯಣ ಚಿತ್ರಕ್ಕೆ ವಿಶೇಷ ಕೊಡುಗೆ ನೀಡುತ್ತಿದೆ.



# ಕರ್ಣಾಟಬಲಂ ಅಜೇಯಂ ಚಿತ್ರ

## ರೈತ ಹುತಾತ್ಮರ ದಿನಾಚರಣೆಯ ನೈಜ ಚಿತ್ರಣ

ಎಂ.ಪಿ.ಎಂ.ಜಿ. ಫಿಲಂ ಫ್ಯಾಕ್ಟರಿ ನಿರ್ಮಾಣದ 'ಕರ್ಣಾಟಬಲಂ ಅಜೇಯಂ' ಚಿತ್ರದ ಮೂಲಕ ಶಾಸಕ ಸಿ.ಪಿ.ಯೋಗೀಶ್ವರ್ ಅವರ ಪುತ್ರ ಧ್ಯಾನ್ ಯೋಗೀಶ್ವರ್ ನಾಯಕನಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಜತೆಗೆ ಈ ಚಿತ್ರದಲ್ಲಿ ಸಿ.ಪಿ.ಯೋಗೀಶ್ವರ್ ಅವರು ಉತ್ತರ ಕರ್ನಾಟಕದ ರೈತನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ, ನಾಗಣ್ಣ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದು ಉತ್ತರ ಕರ್ನಾಟಕದ ಬಾದಾಮಿ, ಪಟ್ಟದಕಲ್ಲು, ಐಹೊಳೆ, ನರಗುಂದ, ನವಲಗುಂದದ ಸುತ್ತಮುತ್ತ ಚಿತ್ರೀಕರಣ ನಡೆಯುತ್ತಿದೆ. ನವಲಗುಂದದಲ್ಲಿ ಜು.21ರ ಹುತಾತ್ಮ ರೈತರ ದಿನಾಚರಣೆ ಸಂದರ್ಭದಲ್ಲಿ ರೈತ ಹೋರಾಟಗಾರರಾಗಿ ಸಿ.ಪಿ. ಯೋಗೀಶ್ವರ್, ಶಾಸಕ ಕೋನರೆಡ್ಡಿ ಭಾಗವಹಿಸಿ ಘೋಷಣೆ ಕೂಗುವ ದೃಶ್ಯವನ್ನು ನೈಜವಾಗಿ ಸೆರೆ ಹಿಡಿಯಲಾಯಿತು.

ಈ ವೇಳೆ ಮಾತನಾಡಿದ ಯೋಗೇಶ್ವರ್ ಮೊದಲಬಾರಿಗೆ ನಾನು ಉತ್ತರ ಕರ್ನಾಟಕಕ್ಕೆ ಬಂದಿದ್ದೇನೆ. ಈಭಾಗದ ರೈತರ ಬದುಕು ಹೋರಾಟವೇ ನಮ್ಮ 'ಕರ್ಣಾಟಬಲಂ ಅಜೇಯಂ' ಚಿತ್ರದ ಕಥಾವಸ್ತು. ನರಗುಂದ, ನವಲಗುಂದ ಎರಡೂ ಭಾಗದಲ್ಲಿ ಶೂಟಿಂಗ್ ನಡೆಯುತ್ತಿದೆ. ನಮ್ಮ ರೈತರ ನೋವು, ದುಗುಡ, ಆತ್ಮಾರ್ಪಣೆ ನೋಡಿದರೆ ದುಃಖವಾಗುತ್ತದೆ. ಈ ದೇಶವನ್ನು ಆಳಿದಂಥ ಚಾಲುಕ್ಯ ಸಾಮ್ರಾಜ್ಯದ ಇತಿಹಾಸ ಇಟ್ಟುಕೊಂಡು, ಇಂಥ ನಾಡಲ್ಲಿ ಈಗ ರೈತರ ಪರಿಸ್ಥಿತಿ ಹೇಗಿದೆ ಎಂಬುದನ್ನು ನಮ್ಮ ಚಿತ್ರದಲ್ಲಿ ಹೇಳುತ್ತಿದ್ದೇವೆ. ಕನ್ನಡದ ಮಣ್ಣಿನ ರೈತರ ಕಥೆಯಿದು, ಕನ್ನಡ ನಾಡಿನ ಗತವೈಭವ ತೋರಿಸುವ ಪ್ರಯತ್ನವೂ ಹೌದು.

ಎರಡು ಕಾಲಘಟ್ಟದಲ್ಲಿ ಈ ಕಥೆ ನಡೆಯಲಿದೆ. ಮಹದಾಯಿ ಯೋಜನೆ ಬಗ್ಗೆಯೂ ಚಿತ್ರದಲ್ಲಿ ಹೇಳಿದ್ದೇವೆ. ಈಗಾಗಲೇ 30% ಶೂಟಿಂಗ್ ಆಗಿದ್ದು, ಇನ್ನೆರಡು ದಿನ ನವಲಗುಂದದಲ್ಲೇ ಶೂಟಿಂಗ್ ನಡೆಯಲಿದೆ.

ಸಂಕ್ರಾಂತಿ ವೇಳೆಗೆ ಕರ್ಣಾಟಬಲಂ ಅಜೇಯಂ ಚಿತ್ರವನ್ನು ರಿಲೀಸ್ ಮಾಡುತ್ತಿದ್ದೇವೆ ಎಂದರು. ನಿರ್ದೇಶಕ ನಾಗಣ್ಣ, ಶಾಸಕ ಎನ್. ಕೆ.ಕೋನರೆಡ್ಡಿ, ಹೋರಾಟಗಾರ ಮುತ್ತಣ್ಣ ಕೂಡ ಈ ವೇಳೆ ಹಾಜರಿದ್ದರು.

ಎಂ.ಎಸ್. ರಮೇಶ್, ವಿಶ್ವ ಹಾಗೂ ಗುರುರಾಜ್ ದೇಸಾಯಿ ಅವರ ಚಿತ್ರಕಥೆ, ವಿ.ಹರಿಕೃಷ್ಣ ಅವರ ಸಂಗೀತ ಸಂಯೋಜನೆ, ಶೇಖರ್ ಚಂದ್ರ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಮಿಸ್ ಯುನಿವರ್ಸ್ ಇಂಡಿಯಾ ಮಣಿಕಾ ವಿಶ್ವಕರ್ಮ ಹಾಗೂ ಮಿಸ್ ಯುನಿವರ್ಸ್ ಇಂಡಿಯಾ ರನ್ನರ್ ಅಪ್ ರೇಖಾ ಪಾಂಡೆ ಈ ಚಿತ್ರದ ನಾಯಕಿಯರಾಗಿ ನಟಿಸುತ್ತಿದ್ದಾರೆ. ತೆಲುಗಿನ ಜಗಪತಿಬಾಬು, ನಟಿ ಲಯ ತಾಯಿಯಾಗಿ ನಟಿಸುತ್ತಿದ್ದಾರೆ.


# 'ರಾ ರಾ ಆರೆಕ್'ಬೈಕ್ ಬೆನ್ನುಬಿದ್ದ ಯತಿರಾಜ್ !



ಯತಿರಾಜ್ ನಿರ್ದೇಶಿಸಲಿರುವ "ರಾ..ರಾ.. ಆರೆಕ್ಸ್" ಚಿತ್ರ ಸೆಟ್ಟೇರಿದೆ. ಆರೆಕ್ಸ್ ಬೈಕ್ ಈ ಸಿನಿಮಾದ ಕೇಂದ್ರಬಿಂದು.. ಆರ್ ಎಕ್ಸ್ ಬೈಕು ಪ್ರಧಾನ ಪಾತ್ರ ವಹಿಸುತ್ತದೆ..

ಚಿತ್ರದ ಕಥೆಯೇ ಇಲ್ಲಿ ಹೀರೋ ಅನ್ನೋದು ನಿರ್ದೇಶಕರ ಅಭಿಪ್ರಾಯ. ಹಾರರ್ ಕಥಾಹಂದರ ಕೂಡಾ ಇದರೊಟ್ಟಿಗೆ ಬೆಸೆದುಕೊಂಡಿದೆ.. ಅನೂಪ್ ಬೆಳ್ವಾವಿ, ಭರತ್, ಕೀರ್ತಿ ಸೋಮೇಶ್, ಐಶ್ವರ್ಯ ನಾಗರಾಜ್, ತಾಯಂದಿರಾಗಿ ಚಂಡೆ ಖ್ಯಾತಿಯ ದಿವ್ಯಶ್ರೀ ಮತ್ತು ಸಹನಾಶ್ರೀ ಪಾತ್ರ ನಿಭಾಯಿಸುತ್ತಿದ್ದಾರೆ.

"ರಾ..ರಾ ಆರೆಕ್ಸ್" ಚಿತ್ರವನ್ನು ಕಾರ್ತಿಕೇಯ ಎಂಟರ್ ಪ್ರೈಸಸ್ ಲಾಂಛನದಲ್ಲಿ ವೃದ್ಧಿ ಸುನಿಲ್, ಚೇತನ್ ಟಿ.ಆರ್., ಚಂದ್ರಶೇಖರ್ ಎಸ್ ಎಂ ನಿರ್ಮಿಸುತ್ತಿದ್ದಾರೆ. ಯತಿರಾಜ್ ಕಥೆ, ಚಿತ್ರಕತೆ, ವಿಜಯ್ ಹರಿತ್ಸ ಸಂಗೀತ ನಿರ್ದೇಶನ, ಅಲೋಕ್ ಕಾರ್ಯಕಾರಿ ನಿರ್ಮಾಣ, ದೀಪಕ್ ಕುಮಾರ್ ಜೆ.ಕೆ. ಛಾಯಾಗ್ರಹಣ, ಅನಿಲ್ ಕುಮಾರ್ ಸಂಕಲನ, ಅರುಣ್ ಕುಮಾರ್, ನವೀನ್ ಮತ್ತು ಸೋನು ಸಾಗರ ಸಹ ನಿರ್ದೇಶನ ಈ ಚಿತ್ರಕ್ಕಿದೆ. ಮದ್ದೂರಿನ ಸುತ್ತಮುತ್ತ ಬಿರುಸಿನ ಚಿತ್ರೀಕರಣ ನಡೆಯುತ್ತಿದೆ.



ಬಾದಾಮಿ ಪರಿಸರದಲ್ಲಿ ಚಿತ್ರೀಕರಣದ ನಡುವೆ ಮಾನಸಿ

# ಮಹಾನ್ ಚಿತ್ರದ ದುರ್ಗಾ ಪಾತ್ರದಲ್ಲಿ ಖ್ಯಾತ ನಟಿ

ದಕ್ಷಿಣ ಭಾರತದ ಖ್ಯಾತ ನಟಿ ವರ್ಷ ಬೊಳ್ಳಮ್ಮ ಕನ್ನಡ ಸಿನಿಮಾದಲ್ಲಿ ಮೊದಲ ಬಾರಿಗೆ ನಟಿಸಿದ್ದಾರೆ. ಕನ್ನಡದವರೇ ಆಗಿರುವ ವರ್ಷ, ಕೊಡಗಿನವರು. ತಮಿಳು, ತೆಲುಗು ಹಾಗೂ ಮಲಯಾಳಂ ಭಾಷೆಗಳಲ್ಲಿ ಅನೇಕ ಯಶಸ್ವಿ ಸಿನಿಮಾಗಳಲ್ಲಿ ಅಭಿನಯಿಸಿ ತಮ್ಮದೇ ಆದ ಅಭಿಮಾನಿ ಬಳಗವನ್ನು ಗಳಿಸಿರುವ ಅವರು, ಇದೀಗ ಆಕಾಶ ಪಿಕ್ಚರ್ಸ್ ನಿರ್ಮಾಣದ ಮಹಾನ್ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ್ದಾರೆ. ವರ್ಷ ಬೊಳ್ಳಮ್ಮ ಅವರ ಮಹಾನ್ ಚಿತ್ರದ ಫಸ್ಟ್ ಲುಕ್ ಇತ್ತೀಚೆಗೆ ಬಿಡುಗಡೆಯಾಗಿ ಸಿನಿಪ್ರೇಕ್ಷಕರಿಂದ ಮೆಚ್ಚುಗೆ ಪಡೆಯುತ್ತಿದೆ.

ಸಿನಿಮಾ ಕೇವಲ ಮನರಂಜನೆಗೆ ಸೀಮಿತವಲ್ಲ; ಅದು ಸಮಾಜವನ್ನು ಸಂಪರ್ಕಿಸುವ ಶಕ್ತಿಶಾಲಿ ಮಾಧ್ಯಮವಾಗಿದೆ. ಆಕಾಶ ಪಿಕ್ಚರ್ಸ್ ನಿರ್ಮಾಣದ ಮಹಾನ್ ಚಿತ್ರದ ಮೂಲಕ ದೇಶದ ಪ್ರತಿಯೊಬ್ಬ ರೈತನ ಪರಿಶ್ರಮ, ಹೋರಾಟ ಮತ್ತು ಬದುಕಿಗೆ ಗೌರವ ಸಲ್ಲಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. "ಈ ಕಥೆಯನ್ನು ಅತ್ಯುನ್ನತ ಮಟ್ಟದಲ್ಲಿ ಪ್ರೇಕ್ಷಕರ ಮುಂದೆ ತರುವ ಉದ್ದೇಶದಿಂದ ಕನ್ನಡ ಚಿತ್ರರಂಗದ ಪ್ರತಿಭಾವಂತ ಕಲಾವಿದರು ಮತ್ತು ಅನುಭವಸಂಪನ್ನ ತಾಂತ್ರಿಕರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿದ್ದೇವೆ. ಮಹಾನ್ ಪ್ರತಿಯೊಬ್ಬ ಅನ್ನದಾತನಿಗೆ ನಮ್ಮ ಹೃದಯಪೂರ್ವಕ ನಮನ. ಶಿವರಾಜಕುಮಾರ್, ವಿಜಯ್ ರಾಘವೇಂದ್ರ, ರಾಧಿಕಾ ಚೇತನ್, ಕಿರಣ್ ಶ್ರೀನಿವಾಸ್, ದೇವರಾಜ್, ರಂಗಾಯಣ ರಘು, ಮಿತ್ರ, ಶರತ್ ಲೋಹಿತಾಶ್ವ, ಅವಿನಾಶ್, ನಮ್ರತಾ ಗೌಡ, ರಮೇಶ್ ಇಂದಿರ ಅವರಂತಹ ಅನುಭವಿ ಹಾಗೂ ಹಿರಿಯ ಕಲಾವಿದರ ತಾರಾಬಳಗವಿರುವ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಖ್ಯಾತ ನಟಿ ವರ್ಷ ಬೊಳ್ಳಮ್ಮ ಅವರು ಅಭಿನಯಿಸಿರುವುದು ನಮಗೆ ಅಪಾರ ಸಂತಸ ತಂದಿದೆ ಎಂದು ಆಕಾಶ ಪಿಕ್ಚರ್ಸ್ ಸಂಸ್ಥೆಯ ನಿರ್ಮಾಪಕ ಪ್ರಕಾಶ್ ಎಸ್. ಬೂದೂರು ಹೇಳಿದರು. ಮಹಾನ್ ಚಿತ್ರದ ದುರ್ಗಾ ಪಾತ್ರವು ಭಾರತೀಯ ಕೃಷಿಯಲ್ಲಿ ಮಹಿಳೆಯರ ಮಹತ್ವವನ್ನು ಸಾರುತ್ತದೆ. ಇಂದಿನ ಹೊಸ ತಲೆಮಾರಿನ ರೈತೆಯರ ಪ್ರತೀಕವಾದ ದುರ್ಗಾ ಪಾತ್ರದಲ್ಲಿ ವರ್ಷ ಬೊಳ್ಳಮ್ಮ ಅಭಿನಯಿಸಿದ್ದಾರೆ. ದುರ್ಗಾ ವಿದ್ಯಾವಂತೆ, ಆತ್ಮವಿಶ್ವಾಸಿ ಹಾಗೂ ಪ್ರಗತಿಪರ ರೈತೆಯಾಗಿದ್ದು, ಆಧುನಿಕ ತಂತ್ರಜ್ಞಾನವನ್ನು ಪ್ರಕೃತಿಯೊಂದಿಗೆ ಸಮನ್ವಯಗೊಳಿಸಿ ಸುಸ್ಥಿರ ಕೃಷಿಗೆ ಉತ್ತೇಜನ ನೀಡುವ ವ್ಯಕ್ತಿತ್ವ ಹೊಂದಿದ್ದಾಳೆ. ಮಹಿಳಾ ಸಬಲೀಕರಣ, ಪರಿಸರ ಸಂರಕ್ಷಣೆ ಹಾಗೂ ಯುವಜನರನ್ನು ಕೃಷಿಯತ್ತ ಆಕರ್ಷಿಸುವ ಸಂದೇಶವನ್ನು ಈ ಪಾತ್ರ ಪರಿಣಾಮಕಾರಿಯಾಗಿ ಸಾರುತ್ತದೆ.ಸಿನಿಮಾ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಬೇಕು ಎಂಬ ಆಶಯವನ್ನು ದುರ್ಗಾ ಪಾತ್ರ ಪ್ರತಿಬಿಂಬಿಸುತ್ತದೆ. ಕೃಷಿಯಲ್ಲಿ ಮಹಿಳೆಯರ ಕೊಡುಗೆ ಅಪಾರವಾಗಿದ್ದರೂ, ಅವರಿಗೆ ಸಿಗಬೇಕಾದ ಮಾನ್ಯತೆ ಇನ್ನೂ ಸಂಪೂರ್ಣವಾಗಿ ದೊರಕಿಲ್ಲ. ಅವರಿಗೆ ಸೂಕ್ತ ಗೌರವ ಹಾಗೂ ಪ್ರಾಮುಖ್ಯತೆ ದೊರಕಬೇಕು ಎಂಬ ಉದ್ದೇಶದಿಂದ ಈ ಪಾತ್ರವನ್ನು ರೂಪಿಸಲಾಗಿದೆ. ಈ ಪಾತ್ರ ವಿದ್ಯಾವಂತ ಯುವತಿಯರಿಗೆ ಖಂಡಿತವಾಗಿಯೂ ಸ್ಫೂರ್ತಿಯಾಗುತ್ತದೆ ಎಂಬ ನಂಬಿಕೆ ನನಗಿದೆ. ಜ್ಞಾನ, ಆತ್ಮವಿಶ್ವಾಸ ಹಾಗೂ ನಾಯಕತ್ವದೊಂದಿಗೆ ಕೃಷಿ ಕ್ಷೇತ್ರದಲ್ಲಿ ಹೊಸ ದಾರಿಯನ್ನು ನಿರ್ಮಿಸಬಹುದು ಎಂಬ ವಿಶ್ವಾಸವನ್ನು ಈ ಪಾತ್ರ ಮೂಡಿಸಲಿದೆ ಎಂದು ನಿರ್ದೇಶಕ ಪಿ. ಸಿ. ಶೇಖರ್ ತಿಳಿಸಿದ್ದಾರೆ.

**ಫಸ್ಟ್ ಲುಕ್ ಬಿಡುಗಡೆ ಮಾಡಿದ ಚಿತ್ರತಂಡ**

ಪ್ರಾರಂಭದಿಂದಲೂ ನನಗೆ ಪರಭಾಷೆಯ ಚಿತ್ರಗಳಲ್ಲೇ ಹೆಚ್ಚಿನ ಅವಕಾಶಗಳು ಬಂದಿದ್ದವು. ಕನ್ನಡದಲ್ಲಿ ನಟಿಸುವ ಅವಕಾಶ ಸಿಕ್ಕಿರಲಿಲ್ಲ. ಈಗ ನನ್ನ ತಾಯ್ನಾಡಿನಲ್ಲಿ, ಕನ್ನಡದ ಸಿನಿಮಾದಲ್ಲಿ ನಟಿಸುತ್ತಿರುವುದು ತುಂಬಾ ಹೆಮ್ಮೆಯ ವಿಷಯ. ಅದರಲ್ಲೂ ಶಿವಣ್ಣ ಹಾಗೂ ವಿಜಯ್ ರಾಘವೇಂದ್ರ ಅವರಂತಹ ಅದ್ಭುತ ಕಲಾವಿದರೊಂದಿಗೆ ಅಭಿನಯಿಸಿರುವುದು ನನ್ನ ಪಾಲಿನ ದೊಡ್ಡ ಸಂತಸ. ಮಹಾನ್ ಚಿತ್ರದಲ್ಲಿನ ನನ್ನ ಪಾತ್ರ ಬಹಳ ವಿಶೇಷವಾಗಿದೆ. ನನ್ನ ಮೇಲೆ ವಿಶ್ವಾಸವಿಟ್ಟು ಈ ಅವಕಾಶ ನೀಡಿದ ನಿರ್ದೇಶಕ ಪಿ. ಸಿ. ಶೇಖರ್ ಅವರಿಗೆ ಹಾಗೂ ಈ ಅದ್ಭುತ ಚಿತ್ರವನ್ನು ನಿರ್ಮಿಸುತ್ತಿರುವ ಆಕಾಶ ಪಿಕ್ಚರ್ಸ್ ಸಂಸ್ಥೆಗೆ ನಾನು ಸದಾ ಚಿರಋಣಿ ಯಾಗಿರುತ್ತೇನೆ ಎಂದು ವರ್ಷ ಬೊಳ್ಳಮ್ಮ ಸಂತಸ ವ್ಯಕ್ತಪಡಿಸಿದ್ದಾರೆ.



# 'ಜನ ನಾಯಕನ್' ಈ ವಾರ ಬಿಡುಗಡೆ



ದಳಪತಿ ವಿಜಯ್ ಅಭಿನಯದ, ಅವರ ಸಿನಿ ಜೀವನದ ಕೊನೆಯ ಚಿತ್ರವೆಂದು ಹೇಳಲಾಗುತ್ತಿರುವ ಬಹು ನಿರೀಕ್ಷಿತ 'ಜನ ನಾಯಕನ್' ವಿಶ್ವದಾದ್ಯಂತ ಈ ವಾರ ಚಿತ್ರಮಂದಿರಗಳಲ್ಲಿ ಅದ್ದೂರಿಯಾಗಿ ಬಿಡುಗಡೆಯಾಗಲಿದೆ ಎಂದು ನಿರ್ಮಾಪಕರಾದ ಕೆ.ವಿ.ಎನ್ ಸಂಸ್ಥೆಯ ವೆಂಕಟ್ ಕೆ ನಾರಾಯಣ್ ಅಧಿಕೃತವಾಗಿ ಘೋಷಿಸಿದ್ದಾರೆ.

ಭಾರತೀಯ ಸಿನಿರಂಗದ ಅತ್ಯಂತ ನಿರೀಕ್ಷಿತ ಚಿತ್ರಗಳಲ್ಲಿ ಒಂದಾದ 'ಜನ ನಾಯಕನ್', ದಳಪತಿ ವಿಜಯ್ ಅವರ ಅದ್ಭುತ ಸಿನಿ ಪಯಣದ ಒಂದು ಐತಿಹಾಸಿಕ ಮೈಲಿಗಲ್ಲಾಗಿದೆ. ವಿಶ್ವದಾದ್ಯಂತದ ಅಭಿಮಾನಿಗಳು ಅವರ ಕೊನೆಯ ಚಿತ್ರವನ್ನು ಕಾತುರದಿಂದ ಕಾಯುತ್ತಿರುವ ಈ ಸಂದರ್ಭದಲ್ಲಿ, ಈ ಸಿನಿಮಾ ಅವರ ಅಪ್ರತಿಮ ಸಿನಿ ಜೀವನಕ್ಕೆ ಸೂಕ್ತ ಗೌರವ ಸಲ್ಲಿಸುವ ಚಿತ್ರವಾಗಲಿದೆ.

ಈ ಚಿತ್ರವನ್ನು ಎಚ್. ವಿನೋದ್ ನಿರ್ದೇಶಿಸಿದ್ದು, ಕೆವಿಎನ್ ಪ್ರೊಡಕ್ಷನ್ಸ್ ಸಂಸ್ಥೆಯ ವೆಂಕಟ್ ಕೆ. ನಾರಾಯಣ ನಿರ್ಮಿಸಿದ್ದಾರೆ. ಅತ್ಯುತ್ತಮ ತಾಂತ್ರಿಕ ಹಾಗೂ ಸೃಜನಾತ್ಮಕ ತಂಡದೊಂದಿಗೆ ಈ ಚಿತ್ರ ಭವ್ಯವಾದ ಸಿನಿ ಅನುಭವವನ್ನು ನೀಡುವ ಭರವಸೆ ಹೊಂದಿದೆ.

ಈ ಕುರಿತು ನಿರ್ಮಾಪಕ ವೆಂಕಟ್ ಕೆ. ನಾರಾಯಣ ಅವರು ಹೇಳಿದ್ದು:

"ಸಿನಿಮಾ ಇತಿಹಾಸದಲ್ಲಿ ಕೆಲವೇ ಕೆಲವು ಕ್ಷಣಗಳು ನಿಜವಾಗಿಯೂ ಐತಿಹಾಸಿಕವಾಗಿರುತ್ತವೆ. 'ಜನ ನಾಯಕನ್' ಅಂತಹ ಒಂದು ವಿಶೇಷ ಕ್ಷಣವಾಗಿದೆ. ದಳಪತಿ ವಿಜಯ್ ಅವರ ಕೊನೆಯ ಚಿತ್ರವನ್ನು ಜಗತ್ತಿನಾದ್ಯಂತದ ಅಭಿಮಾನಿಗಳಿಗೆ ತಲುಪಿಸುವ ಅವಕಾಶ ಸಿಕ್ಕಿರುವುದು ನಮ್ಮ ಭಾಗ್ಯ. ಸಿನಿಮಾದಿಂದ ಆರಂಭವಾದ ಅವರ ಪಯಣ ಲಕ್ಷಾಂತರ ಜನರಿಗೆ ಸ್ಫೂರ್ತಿಯಾಗಿದ್ದು, ಅಂತಿಮವಾಗಿ ಅವರು ತಮಿಳುನಾಡಿನ ಮುಖ್ಯಮಂತ್ರಿಯಾಗುವವರೆಗೆ ಬೆಳೆದಿರುವುದು ಜನರೊಂದಿಗೆ ಅವರಿಗಿರುವ ಅಪೂರ್ವ ಬಾಂಧವ್ಯಕ್ಕೆ ಸಾಕ್ಷಿಯಾಗಿದೆ. 'ಜನ ನಾಯಕನ್' ಅವರ ಅದ್ಭುತ ಸಿನಿ ಪಯಣಕ್ಕೆ ಅತ್ಯುತ್ತಮ ಗೌರವ ಸಲ್ಲಿಸುವ, ಮರೆಯಲಾಗದ ಚಿತ್ರಮಂದಿರದ ಅನುಭವವಾಗಲಿದೆ ಎಂಬ ವಿಶ್ವಾಸ ನಮ್ಮದು."ಹಿ

ಈ ಬಿಡುಗಡೆ ಘೋಷಣೆಯೊಂದಿಗೆ, ಈ ವರ್ಷದ ಅತಿದೊಡ್ಡ ಚಿತ್ರಮಂದಿರದ ಸಂಭ್ರಮವೊಂದಕ್ಕೆ ವೇದಿಕೆ ಸಿದ್ಧವಾಗಿದೆ. ದಳಪತಿ ವಿಜಯ್ ಅವರ ನಾಯಕನಾಗಿ ಕೊನೆಯ ಅಧ್ಯಾಯವನ್ನು ಅಭಿಮಾನಿಗಳು ಮತ್ತು ಸಿನಿಪ್ರೇಮಿಗಳು ಅದ್ದೂರಿಯಾಗಿ ಸಂಭ್ರಮಿಸಲು ಸಜ್ಜಾಗಿದ್ದಾರೆ.

**ದಳಪತಿ ವಿಜಯ್ ಸಿನಿಜೀವನದ ಕೊನೆಯ ಚಿತ್ರ!!**

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,